ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 39

ಸೆಪ್ಟೆಂಬರ್ 27, 2009

ರೂ. 5/-

ಕನ್ನಡ ವಾರಪತ್ರಿಕೆ



'6000 ರೂ. ಸಮಾನ ಕನಿಷ್ಟ ಕೂಲಿ ಕೊಡಿ...'

ಲಕ್ಷಾಂತರ ಕಾರ್ಮಿಕರು ಹೋರಾಟದ ಕಣಕ್ಕೆ

ಕೂಲಿಗೆ ಬದಲು ಬಿಜೆಪಿ ಸರ್ಕಾರದ ಲಾಠಿ ಏಟು







ಹಾರದ ಉತ್ಪಾದನೆ ಹೆಚ್ಚಿಸಿದ ವಿಜ್ಞಾನಿ

ಡಾ. ನಾರ್ಮನ್ ಬೋರ್ಲಾಕ್

ವಿಶೇಷ ಅಧಿವೇಶನ:

ಗ್ರಾಮೀಣಾಭಿವೃದ್ಧಿಯೆಂಬ ಬೊಗಳೆ ಭಾಷಣ



ಆಹಾರ ಉತ್ಪಾದನೆ ಹೆಚ್ಚಳಕ್ಕೆ ಗಣನೀಯ ಕಾಣಿಕೆ ನೀಡಿದ

ಡಾ. ನಾರ್ಮನ್ ಬೋರ್ಲಾಕ್ ಇನ್ನಿಲ್ಲ

ವಿಶಿಷ್ಟ ಹಾದಿ ಸವೆಸಿದ ಅದ್ಭುತ ವಿಜ್ಞಾನಿ

ವಿಶ್ವದಾದ್ಯಂತ ಕೃಷಿಯ ಉತ್ಪಾದಕತೆ ಸ್ಥಗಿತಗೊಂಡು ಭಾರತವೂ ಒಳಗೊಂಡಂತೆ ಮಧ್ಯ ಪ್ರಾಚ್ಯ, ಚೀನಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕನ್ ರಾಷ್ಟ್ರಗಳಲ್ಲಿ ಹಸಿವಿನಿಂದ ಸಾವಿನಂಚಿನಲ್ಲಿದ್ದ ಕೋಟ್ಯಾಂತರ ಜನತೆಯ ಹಸಿವನ್ನು ತನ್ನ ಸಂಶೋಧನೆಗಳಿಂದ ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದ್ದ ಡಾ: ನಾರ್ಮನ್ ಇ ಬೋರ್ಲಾಕ್ ಕಳೆದ ವಾರ ಕೊನೆಯುಸಿರೆಳೆದಿದ್ದಾರೆ. ತಮ್ಮ 95 ನೇ ವಯಸ್ಸಿನಲ್ಲಿದ್ದ ಅವರು ಕ್ಯಾನ್ಸರ್ ರೋಗಕ್ಕೆ ತುತ್ತಾಗಿದ್ದಾರೆ.

1960ರ ದಶಕದಲ್ಲಿ ಮೆಕ್ಸಿಕೋ ದೇಶದಲ್ಲಿ ಅವರು ಗೋಧಿ ತಳಿಯ ಮೇಲೆ ನಡೆಸಿದ ಪ್ರಯೋಗಗಳು ಆಶ್ಚರ್ಯಕರ ಫಲಿತಾಂಶಗಳನ್ನು ನೀಡಿದವು. ಅವರು ಅಭಿವೃದ್ಧಿಪಡಿಸಿದ ಗೋಧಿ ಬೀಜಗಳನ್ನು ಪ್ರಪಂಚದಾದ್ಯಂತ ವಿವಿಧ ದೇಶಗಳು ತಾಮುಂದು ನಾಮುಂದು ಎಂದು ಮುಗಿಬಿದ್ದು ಪಡೆದುಕೊಂಡವು. ಇದರಿಂದ ಹಸಿನಿಂದ ನರಳುತ್ತಿದ್ದ ಜನತೆಯು ಅತ್ಯುತ್ತಮ ಇಳುವರಿ ನೀಡುವ ತಳಿಗಳಿಂದ ತಾವೇ ಆಹಾರ ಬೆಳೆದುಕೊಳ್ಳುವ ಶಕ್ತಿಯನ್ನು ಪಡೆದುಕೊಂಡರು. ಬೋರ್ಲಾಕ್ ಸಾಧನೆಗಾಗಿ ಅವರಿಗೆ 1970ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿತು. ಹಲವು ಕೋಟ್ಯಾಂತರ ಜನತೆಯ ಹಸಿವನ್ನು ನೀಗಲು ಪರಿಹಾರ ನೀಡಿದ ಡಾ: ಬೋರ್ಲಾಕ್ ರವರು ಒಂದು ರೀತಿಯಲ್ಲಿ ವಿಶ್ವದಲ್ಲಿ ಶಾಂತಿ ಲಭಿಸಲು ಕಾರಣರಾಗಿದ್ದಾರೆ ಎಂದು ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿಯು ಹೇಳಿದೆ. 20ನೇ ಶತಮಾನದಲ್ಲಿ 100 ಅತಿ ಹೆಚ್ಚು ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಡಾ: ಬೋರ್ಲಾಕ್ ಒಬ್ಬರೆಂದು ಪ್ರಸಿದ್ಧ ಟೈಮ್ ಪತ್ರಿಕೆಯು ಹೆಸರಿಸಿದೆ.

ಬಡತನದ ಬೇಗೆಯಿಂದ ಹಸಿವು ಅಳಿಸುವೆಡೆಗೆ:

ನಾರ್ವೆಯಿಂದ ವಲಸೆ ಬಂದು ಅಮೇರಿಕಾದಲ್ಲಿ ನೆಲೆಸಿದ ರೈತ ಕುಟುಂಬವೊಂದರಲ್ಲಿ ಬೋರ್ಲಾಕ್ ಜನಿಸಿದರು. ತಮ್ಮ 17ನೇ ವಯಸ್ಸಿನವರೆಗೂ ಓದುತ್ತಾ ಜೊತೆಜೊತೆಗೆ ಬೇಸಾಯ ಮಾಡುತ್ತಿದ್ದರು. ತನ್ನ ತಾತನ ಸಲಹೆ ಮೇರೆಗೆ ಹೆಚ್ಚಿನ ಓದಿಗಾಗಿ ಮಿನ್ನೆಸೊಟಾ ವಿಶ್ವವಿದ್ಯಾಲಯ ಸೇರಲು ಪ್ರವೇಶ ಪರೀಕ್ಷೆ ಬರೆದರೂ ಅದರಲ್ಲಿ ಅನುತ್ತೀರ್ಣರಾದರು. ನಂತರ ಅದೇ ವಿಶ್ವವಿದ್ಯಾಲಯದ ಹೊಸ ಕಾಲೇಜಿಗೆ ಪ್ರವೇಶ ನೀಡಲಾಯಿತು. ಒಳ್ಳೆಯ ಕುಸ್ತಿಪಟುವೂ ಆಗಿ ರಾಷ್ಟ್ರ ಮಟ್ಟದ ಹೆಸರು ಪಡೆದಿದ್ದರು. ಅದೇ ವೇಳೆ ವಿದ್ಯಾಭ್ಯಾಸ ಖರ್ಚಿಗಾಗಿ ಕೆಲವೊಮ್ಮೆ ವಿದ್ಯಾಭ್ಯಾಸ ನಿಲ್ಲಿಸಿ ಕಾಫಿ ಅಂಗಡಿಯಲ್ಲಿ ಕೆಲಸ, ಕಾರು ನಿಲುಗಡೆ ಸ್ಥಳಗಳಲ್ಲಿ ಊಟ ಸರಬರಾಜು ಮಾಡುತ್ತಿದ್ದರು. ಕಡೆಗೊಮ್ಮೆ ಬೇಸಿಗೆ ಕಾಲದಲ್ಲಿ ಫಾರೆಸ್ಟ್ ರೇಂಜರ್ ಆಗಿ ಕೆಲಸ ಮಾಡುತ್ತಾ ಒಂದಷ್ಟು ಹಣ ಸಂಪಾದನೆ ಮಾಡುತ್ತಿದ್ದರು. ಅವರ ಪದವಿ ಮುಗಿಯುವ ಮುನ್ನ ಫಾರೆಸ್ಟ್ ರೇಂಜರ್ ಹುದ್ದೆಯ ಯೋಜನೆಯನ್ನು ರದ್ದು ಮಾಡಿದ್ದು ಅವರಿಗೆ ಬೇಸರ ಮೂಡಿಸಿತು. ಕೆಲಸವಿಲ್ಲದೆ ವಿಶ್ವವಿದ್ಯಾಲಯದಲ್ಲಿ ಒಂದಷ್ಟು ಸಮಯ ಕಳೆಯಲು ಬಂದಾಗ ಸಸ್ಯರೋಗಶಾಸ್ತ್ರ ಇಲಾಖೆ ಮುಖ್ಯಸ್ಥ ಡಾ: ಸ್ಟಾಕ್‌ಮನ್ ರವರ ಉಪನ್ಯಾಸ ಏರ್ಪಡಿಸಲಾಗಿತ್ತು. ಕೆಲವು ಸಸ್ಯಗಳಲ್ಲಿ ಪರಾವಲಂಬಿ ಬೂಷ್ಟುಗಳು



ಅದ್ದೇಗೆ ಸಸ್ಯಗಳನ್ನು ಬೆಳೆಯದಂತೆ ಫಲ ಕೊಡದಂತೆ ಧಾಳಿ ಮಾಡುತ್ತವೆ ಎಂಬುದರ ಕುರಿತು ಡಾ: ಸ್ಟಾಕ್‌ಮನ್ ಉಪನ್ಯಾಸ ಮಾಡುತ್ತಿದ್ದರು. ಉಪನ್ಯಾಸದ ಕೊನೆಯಲ್ಲಿ ಅವರು ಹೇಳಿದ 'ವಿಶ್ವದ ಹಸಿವು ಮತ್ತು ಅಪೌಷ್ಟಿಕತೆಯನ್ನು ತಣಿಸಬೇಕಾದರೆ ವಿಜ್ಞಾನಕ್ಕೆ ಮಾತ್ರವೇ ಸಾಧ್ಯ' ಎಂಬ ಅವರ ಮಾತುಗಳು ವಿದ್ಯಾರ್ಥಿ ಬೋರ್ಲಾಕ್ ರವರ ಕಿವಿಗಳಲ್ಲಿ ಗುಯ್‌ಗುಡಲಾರಂಭಿಸಿದವು. ಕೆಲಸ ಹುಡುಕುವುದನ್ನು ನಿಲ್ಲಿಸಲು ನಿಶ್ಚಯಿಸಿದರು. ಉಪನ್ಯಾಸ ಮುಗಿದಾಕ್ಷಣವೇ ಡಾ: ಸ್ಟಾಕ್‌ಮನ್ ರವರನ್ನು ಹಿಂಬಾಲಿಸಿದ ಬೋರ್ಲಾಕ್ ಅವರ ಮಾರ್ಗದರ್ಶನ ದಲ್ಲಿ ಪಿ.ಹೆಚ್.ಡಿ ಗೆ ಸೇರಲು ಅಣಿಯಾದರು.

ಒಂದು ವಿಶಿಷ್ಟ ಪಯಣ:

ಅಮೇರಿಕಾದಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಡ್ಯೂಪಾಂಟ್ ಎಂಬ ಹೆಸರಾಂತ ಬಹುರಾಷ್ಟ್ರೀಯ ಕಂಪನಿಯಲ್ಲಿ ಅವರಿಗೆ ಕೆಲಸ ದೊರೆತಿತ್ತು. ಅದೇ ವೇಳೆ ರಾಕ್‌ಫೆಲ್ಲರ್ ಫೌಂಡೇಷನ್ ಎಂಬ ಅಮೇರಿಕಾದ ದತ್ತಿ ಸಂಸ್ಥೆಯು ಮೆಕ್ಸಿಕೋ ದೇಶದಲ್ಲಿ ಬೆಳೆಗಳ ಉತ್ಪಾದಕತೆ ಕುರಿತು ನಡೆಸುತ್ತಿದ್ದ ಯೋಜನೆಗೆ ಬೆಂಬಲ ನೀಡಿತ್ತು. ಒಳ್ಳೆಯ ವೇತನ ದೊರೆಯುವ ಕೆಲಸವನ್ನು ಧಿಕ್ಕರಿಸಿ ಮೆಕ್ಸಿಕೋ ದೇಶದ ಸಂಶೋಧನೆಯಲ್ಲಿ ತೊಡಗಿಕೊಳ್ಳಲು ಅವರು ಪಯಣ ಬೆಳೆಸಿದರು. ಅವರಿಗೆ ಮುಂಚಿನಿಂದಲೂ ಏಕೆ ತಳಿಗಳು ಕೆಲವು ಪ್ರದೇಶದಲ್ಲಿ ಒಳ್ಳೆಯ ಇಳುವರಿ ನೀಡುತ್ತವೆ, ಕೆಲವು ಪ್ರದೇಶದಲ್ಲಿ ಫಲ ನೀಡುವುದಿಲ್ಲ ಎಂಬುದರ ಕುರಿತು ಆಸಕ್ತಿಯಿತ್ತು.

ಮೆಕ್ಸಿಕೋ ದೇಶಕ್ಕೆ ಕಾಲಿಟ್ಟ ಕೂಡಲೇ ಅವರಿಗೆ ಅಲ್ಲಿಯ ಗಂಭೀರ ಪರಿಸ್ಥಿತಿ ತಟ್ಟನೆ ಅರಿವಾಯಿತು. ಎಲ್ಲೆಡೆ ಕ್ಷಾಮ, ಕುಂಠಿತಗೊಂಡ ಕೃಷಿ ಉತ್ಪಾದಕತೆ, ಕುಸಿದ ಮಣ್ಣಿನ ಫಲವತ್ತತೆ, ಬೆಳೆರೋಗಗಳ ಹಾವಳಿ, ಹಸಿವಿನಿಂದ ಕಂಗೆಟ್ಟ ಜನತೆ, ಹೆಚ್ಚುತ್ತಿರುವ ಸಾವಿನಿಂದ ಉಲ್ಬಣಗೊಂಡ ಪರಿಸ್ಥಿತಿ - ಇವೆಲ್ಲ ಅವರು ಮೆಕ್ಸಿಕೋದಲ್ಲಿಯೇ ನೆಲೆಸಿ ತಮ್ಮ ಸಂಶೋಧನೆಯನ್ನು ಮುಂದುವರಿಸುವ ತೀರ್ಮಾನವನ್ನು ದೃಢಗೊಳಿಸಿದವು. ಚುರ್ ಚುರ್ ಎನಿಸುವ ಬಿಸಿಲು, ಅಲೆಮಾರಿಯಂತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾವಿರಾರು ಮೈಲಿ ಅಲೆದಾಡಿ ತಾನು ಅಭಿವೃದ್ಧಿಪಡಿಸಿದ ಮಿಶ್ರತಳಿಯನ್ನು ಬೆಳೆಯುವುದು, ಸರಿಯಾದ ಆಹಾರ, ನಿದ್ರೆ ದೊರೆಯದ ರಾತ್ರಿಗಳು, ಟೆಂಟ್‌ಗಳಲ್ಲಿ ಆಶ್ರಯಪಡೆದದ್ದು - ಹೀಗೆ ಸಂಕಷ್ಟಮಯ ಹಾದಿ ಸವೆಸಿ ಗೋಧಿಯ ಗಿಡ್ಡ ತಳಿಗಳನ್ನು ಅಭಿವೃದ್ಧಿಪಡಿಸಿದರು. ಬೆಳೆ ರೋಗದ ವಿರುದ್ಧ ಪ್ರತಿರೋಧ ತೋರಬಲ್ಲ ಗೋಧಿ ತಳಿಗಳನ್ನು ಅವರು ಮೊದಲಿಗೆ ಮೆಕ್ಸಿಕೋ ದೇಶದ ವಿವಿಧ ವಾತಾವರಣಗಳಲ್ಲಿ ಬೆಳೆದು ಪ್ರಯೋಗಿಸಿದರು. ಈ ಯಶಸ್ಸಿನಿಂದಾಗಿ ಮೆಕ್ಸಿಕೋ ದೇಶದ ರೈತರು ಈ ಹೊಸ ತಳಿಗಳನ್ನು ಬೆಳೆಯಲು ಒಪ್ಪಿದರು.

ಹೆಚ್ಚು ಇಳುವರಿ ನೀಡುವ ಗೋಧಿ ತಳಿ:

ಬೆಳೆಯ ಇಳುವರಿಯನ್ನು ಹೆಚ್ಚಿಸಲು ಬೆಳೆಗಳಿಗೆ ಅಗತ್ಯವಾದ ಸಾರಜನಕ ದೊರೆಯುತ್ತಿಲ್ಲವೆಂದು 1940ರ ದಶಕದಲ್ಲಿ ಕಂಡುಕೊಂಡ ವಿಜ್ಞಾನಿಗಳು ರಾಸಾಯನಿಕ ಗೊಬ್ಬರದ ಮೂಲಕ ಅವಶ್ಯ ಸಾರಜನಕವನ್ನು ಪೂರೈಕೆ ಮಾಡಿ ಹೆಚ್ಚಿನ ಇಳುವರಿ ತೆಗೆಯುವಲ್ಲಿ ಸಫಲವಾಗಿದ್ದರು. ಆದರೆ, ಯಾವುದೋ ಒಂದು ಪ್ರಮಾಣಕ್ಕಿಂತ ಹೆಚ್ಚಿನ ಸಾರಜನಕವನ್ನು ಪೂರೈಕೆ ಮಾಡಿದಾಗ ಬೆಳೆಯು ದೊಡ್ಡದಾಗಿ ಬೆಳೆದು



ಇಳುವರಿ ನೀಡದೆ ಬೆಳೆಯೇ ಹಾಳಾಗುವ ಸಾಧ್ಯತೆ ಇತ್ತು. 1953ರಲ್ಲಿ ಗೋಧಿ ತಳಿಯ ಮೇಲೆ ತನ್ನ ಪ್ರಯೋಗ ಆರಂಭಿಸಿದ ಡಾ: ಬೋರ್ಲಾರವರು ಗೋಧಿಯಲ್ಲಿನ ವಂಶವಾಹಿನಿ ಎಳೆಯೊಂದನ್ನು ಕಂಡುಹಿಡಿದು ಮಾರ್ಪಾಟು ಮಾಡಿ ಬೆಳೆದಾಗ ಗೋಧಿ ಗಿಡವು ಸಾಮಾನ್ಯಕ್ಕಿಂತ ಗಿಡ್ಡದಾಗಿ ಬೆಳೆಯಿತು. ಈ ಗಿಡ್ಡ ತಳಿಗೆ ರಾಸಾಯನಿಕ ಗೊಬ್ಬರ ಪೂರೈಸಿದಾಗ ಅದು ಹೆಚ್ಚಿನ ಇಳುವರಿ ಕೊಡಲಾರಂಭಿಸಿತು. ಈ ಗಿಡ್ಡ ತಳಿಗಳಿಗೆ ಸೂಕ್ತ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಪೂರೈಸಿದಾಗ ಅತ್ಯಾಶ್ಚರ್ಯಕರವಾದ ಇಳುವರಿಯನ್ನು ನೀಡತೊಡಗಿದವು. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಗೋಧಿಯ ಇಳುವರಿ ಪ್ರಮಾಣವೇ ಮುಂದಿನ ದಿನಗಳಲ್ಲಿ ಬದಲಾಯಿತು. ಇದಲ್ಲದೆ, ಗೋಧಿಯ ಮೇಲೆ ನಡೆಸಿದ ಗಿಡ್ಡ ತಳಿ ಮಾರ್ಪಾಟನ್ನು ಜಗತ್ತಿನ ಅರ್ಧಕ್ಕೂ ಹೆಚ್ಚಿನ ಜನ ಉಪಯೋಗಿಸುವ ಅಕ್ಕಿಗೂ ಕೂಡ ಯಶಸ್ವಿಯಾಗಿ ಅನ್ವಯಿಸಲಾಯಿತು.

1956ರಲ್ಲಿ ಅವರು ಅಭಿವೃದ್ಧಿಪಡಿಸಿದ ತಳಿಯಿಂದ 1963ರ ಹೊತ್ತಿಗೆ ಗೋಧಿಯ ಇಳುವರಿಯು 6ಪಟ್ಟು ಹೆಚ್ಚಾಯಿತು. ಭಾರತದಲ್ಲೂ ಕೂಡ ಸ್ಥಗಿತಕೊಂಡ ಕೃಷಿ ಉತ್ಪಾದನೆ ಮತ್ತು ಸತತವಾಗಿ ವೈಫಲ್ಯಗೊಳ್ಳುತ್ತಿದ್ದ ಮುಂಗಾರು ಮಳೆಗಳಿಂದಾಗಿ ಹಾಹಾಕಾರ ಎದ್ದಿತ್ತು. ಈ ಹೊಸ ತಳಿಗಳನ್ನು ಆಮದುಮಾಡಿಕೊಂಡ ನಂತರದಲ್ಲಿ ಪಾಕಿಸ್ತಾನದ ಗೋಧಿ ಉತ್ಪಾದನೆ ಎರಡು ಪಟ್ಟು ಹೆಚ್ಚಾಯಿತು, ಭಾರತ ಕೂಡ ಆಹಾರ ಉತ್ಪಾದನೆ ಸ್ವಾವಲಂಬನೆಯ ಕಡೆ ಹೆಜ್ಜೆ ಹಾಕಿತು. ಈ ಮೊದಲು ಭಾರತ ತನ್ನ ಹಸಿದ ಹೊಟ್ಟೆ ತುಂಬಿಸಲು ಅಗಾಧ ಪ್ರಮಾಣದ ಗೋಧಿಯನ್ನು ಅಮೇರಿಕಾ ಮತ್ತು ಇತರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿತ್ತು.

ತಂತ್ರಜ್ಞಾನದ ಬಳಕೆ ಮತ್ತು ಪರಿಣಾಮಗಳು

ಕೃಷಿಯಲ್ಲಿ ತಂತ್ರಜ್ಞಾನ ಬಳಕೆ, ಉತ್ತಮ ಇಳುವರಿಗಾಗಿ ಜೈವಿಕ ತಂತ್ರಜ್ಞಾನಗಳಿಂದ ಬೀಜಗಳ ಉತ್ಪಾದನೆ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯ ವಿರುದ್ಧ ಹಲವರು ಸೊಲ್ಲೆತ್ತುತ್ತಾ ಬಂದಿದ್ದಾರೆ. ಆದರೆ, ಅಂತಹವರಿಗೆ ಡಾ: ನಾರ್ಮನ್ ಬೋರ್ಲಾಕ್ ಚಾಟಿಯೇಟಿನಂಥ ಉತ್ತರ ನೀಡುತ್ತಾರೆ. ತನ್ನ 50 ವರ್ಷಗಳ ಜೀವಿತಾವಧಿಯಲ್ಲಿ ಕಂಡಿರುವ ಹಸಿವಿನ ಸಾವುಗಳನ್ನು, ಕ್ಷಾಮ, ಭೀಕರ ಬರಗಾಲಗಳ ದುಷ್ಪರಿಣಾಮಗಳನ್ನು ಹತ್ತಿರದಿಂದ ಬಲ್ಲವರ್‍ಯಾರೂ ವಿರೋಧಿಸುವುದಿಲ್ಲ ಎನ್ನುತ್ತಾರೆ. ಕೃಷಿಯಲ್ಲಿ ತಂತ್ರಜ್ಞಾನ ಬಳಕೆ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುವುದನ್ನು ಡಾ: ಬೋರ್ಲಾಕ್ ಒಪ್ಪಿದರೂ ಮನುಕುಲವನ್ನು ಹಸಿವಿನ ಸಾವುಗಳಿಂದ ರಕ್ಷಿಸುವುದಕ್ಕೆ ಪ್ರಥಮ ಆದ್ಯತೆ ನೀಡುತ್ತಾರೆ. ಅಂತಹ ದುಷ್ಪರಿಣಾಮಗಳನ್ನು ಸಮಗ್ರವಾಗಿ ಅಭ್ಯಸಿಸಿ ತಡೆಗಟ್ಟಲು ಎಚ್ಚರದ ಹೆಜ್ಜೆ ಇಡಬೇಕೆನ್ನುತ್ತಾರೆ.

ಇಂದಿಗೂ ಕೂಡ ವಿಶ್ವ ಆಹಾರ ಸಂಘಟನೆಯ ವರದಿ ತಿಳಿಸುವಂತೆ ವಿಶ್ವದಾದ್ಯಂತ 100 ಕೋಟಿಗೂ ಹೆಚ್ಚಿನ ಜನತೆ ಹಸಿವಿನಿಂದ ನರಳುತ್ತಿದ್ದಾರೆ, ಹಾಗೆಯೇ ಬಾರತದಲ್ಲೂ ಕೂಡ 30 ಕೋಟಿಗೂ ಹೆಚ್ಚಿನ ಜನತೆ ಒಂದು ಹೊತ್ತಿನ ಕೂಳಿಗೂ ಹೆಣಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಡಾ: ನಾರ್ಮನ್ ಬೋರ್ಲಾಕ್ ಹಸಿವಿನ ವಿರುದ್ಧ 40 ವರ್ಷಗಳ ಹಿಂದೆ ಆರಂಭಿಸಿದ ಹೋರಾಟವನ್ನು ಹಿಂದೆಂದಿಗಿಂತಲೂ ತೀವ್ರ ಗತಿಯಲ್ಲಿ ಮುಂದುವರೆಸಬೇಕಾಗಿದೆ.

ಸಂಪಾದಕೀಯ

'ಗ್ರಾಮೀಣಾಭಿವೃದ್ಧಿ' ಎಂಬ ಸರ್ಕಾರದ ಬೊಗಳೆ ಭಾಷಣ

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಬಗ್ಗೆ ವಿಶೇಷವಾಗಿ ಆರು ದಿನಗಳ ವಿಧಾನಸಭೆಯ ಅಧಿವೇಶನ ಕೊನೆಗೆ ಗದ್ದಲ, ಗೊಂದಲಗಳಿಂದ ಮುಕ್ತಾಯವಾಗಿದೆ. ಕೃಷಿ ಗ್ರಾಮೀಣ ಅಭಿವೃದ್ಧಿಯ ಬಗ್ಗೆ ತನಗೆ ಅಪಾರ ಕಾಳಜಿ ಇದೆಯೆಂಬ ನಟನೆಯೊಂದು ಬಿಟ್ಟರೆ ಇದರಿಂದ ರಾಜ್ಯದ ಜನತೆಗೆ ಆಗುವ ವಿಶೇಷ ಪ್ರಯೋಜನ ಏನಿಲ್ಲವೆಂದೇ ಹೇಳಬಹುದು. ಏನೂ ಸಾಧಿಸದೆ, ಪ್ರಚಾರವೊಂದು ಇದ್ದುಬಿಟ್ಟರೆ ಸಾಕೆಂದು ಸರ್ಕಾರವೂ ಭಾವಿಸಿರುವುದು. ಅಧಿವೇಶನವನ್ನು ಕೇವಲ ಮೂರು ದಿನಗಳಿಗೆ ನಿಗದಿ ಮಾಡಿದ್ದು ಆಷಾಢಭೂತಿತನವನ್ನು ತೋರಿಸುತ್ತದೆ.

'ಗುಜರಾತ್ ಮಾದರಿ' 'ಮೋದಿ ಮಾದರಿ' ಎಂದೆಲ್ಲಾ ಹೇಳಿಕೊಳ್ಳುತ್ತಿದ್ದ ಯಡಿಯೂರಪ್ಪನವರು ಚೀನಾ ಭೇಟಿ ನಂತರ 'ಚೀನಾ ಮಾದರಿ' ಎಂಬ ತಳಬುಡವಿಲ್ಲದ ಮಾತುಗಳಿಂದ ಆರಂಭಗೊಂಡ ಅಧಿವೇಶನದಲ್ಲಿ ಕೃಷಿ, ಗ್ರಾಮೀಣ ಅಭಿವೃದ್ಧಿ ಬಗ್ಗೆ ಸರ್ಕಾರದ ನೀತಿ, ಕಾರ್ಯಗಳನ್ನು ಆಳ ವಿಮರ್ಶೆಗೊಳಪಡಿಸಲಿಲ್ಲ. ಕೃಷಿ ಗ್ರಾಮೀಣ ಅಭಿವೃದ್ಧಿಗಾಗಿ ಪ್ರಕಟಿಸಿದ ಯೋಜನೆಗಳು ವಾಸ್ತವದಲ್ಲಿ ಅಭಿವೃದ್ಧಿಯನ್ನು ಆಧರಿಸಿಲ್ಲ. ಸರ್ಕಾರ ಪ್ರಕಟಿಸಿದ 36 ಅಂಶಗಳ ಹೆಜ್ಜೆಗಳಲ್ಲಿ ರಾಜ್ಯದ ಕಾರ್ಷಿಕ ಕ್ಷೇತ್ರ ಎದುರಿಸುತ್ತಿರುವ ಮೂಲಭೂತ ಪ್ರಶ್ನೆಗಳತ್ತ ತಿರುಗಿಯೂ ನೋಡಿಲ್ಲ. ಸಾಲದ ಬಾಧೆ, ಫಸಲಿಗೆ ಬೆಲೆ ಸಿಗದೇ ಹಾನಿ ಜೀವನ ಹಾಗೂ ಕೃಷಿ ನಿರ್ವಹಣಾ ವೆಚ್ಚದ ಭಾರ, ಕೃಷಿಯ ದಿವಾಳಿತನದಿಂದಾಗಿ ನಿತ್ಯವೂ ಆತ್ಮಹತ್ಯೆಗೀಡಾಗುತ್ತಿರುವ ರೈತನಿಗೆ ತುರ್ತು ಪರಿಹಾರ ಬೇಕಿದೆ. ಬರದ ದವಡೆಗೆ ಬಹುತೇಕ ರಾಜ್ಯ ಸಿಲುಕಿದೆ. ಮೇವು, ನೀರು, ಗಂಜಿಗೆ ತತ್ವಾರವಿದೆ. ಮಳೆ ಬರದೇ ಕೃಷಿ ಚಟುವಟಿಕೆಗಳೇ ಆರಂಭಗೊಂಡಿಲ್ಲ. ಗ್ರಾಮೀಣ ವಲಸೆ ಗಂಭೀರ ಸಮಸ್ಯೆಯಾಗಿದೆ. ವಿದ್ಯುತ್ ಕೊರತೆಯಿಂದ ನೀರಾವರಿ, ಇಲ್ಲವಾಗಿದೆ. ಇವುಗಳ ಪರಿಹಾರದತ್ತ ಗಮನ ಅಗತ್ಯವಿತ್ತು. ಹಾಗೆಯೇ ಕೃಷಿರಂಗ ಬೀಜ, ಗೊಬ್ಬರ ಇತ್ಯಾದಿಗಳನ್ನು ಸಬ್ಸಿಡಿಯಲ್ಲಿ ದೊರಕುವಂತೆ ಮಾಡುವುದು ಅಗತ್ಯವಿತ್ತು.

ಇಂತಹ ಅನೇಕ ಗಂಭೀರ ಸಮಸ್ಯೆಗಳನ್ನು ಸರ್ಕಾರ ಈ ಚರ್ಚೆ-ಯೋಜನೆಗಳಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಒಂದು ಜನಪರ ನೀತಿಯೂ ಇಲ್ಲ, ಬದಲಾಗಿ ಕೇವಲ ಮೇಲ್ ಮೇಲ್‌ಮಟ್ಟದ ಪದರಿನಲ್ಲಿ ಈಗಾಗಲೇ ಇರುವ ಸರ್ಕಾರದ ಪ್ರಕಟಿತ ಯೋಜನೆಗಳನ್ನು ಪುನರುಚ್ಚರಿಸಿದೆ.

ಮುಖ್ಯಮಂತ್ರಿಗಳು ಪ್ರಕಟಿಸಿದಂತೆ ಹೈಟೆಕ್ ಹಳ್ಳಿಗಳ ಸಾಕಾರಕ್ಕಾಗಿ 'ಕಲಾಂ ಪುರ' ನಿರ್ಮಾಣ, ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ ರಸ್ತೆ ಸುಧಾರಣೆ, ಹಸಿರು ಹೊನ್ನು, ಕೃಷಿ ಮಾರುಕಟ್ಟೆ ತೋಟಗಾರಿಕೆಗೆ ಸಹಾಯ, 'ಕಿಸಾನ್ ಕಾರ್ಡ್' ನೀಡಿಕೆ, ನಿವೇಶನ ಹಂಚಿಕೆಗೆ 100 ಕೋಟಿ, ಸಾವಯವ ಕೃಷಿಗೆ ಒತ್ತು, ಮೆಗಾ ಮಾರ್ಕೆಟ್‌ಗಳು, ಉಗ್ರಾಣ ಶಿಥಿಲೀಕರಣಕ್ಕೆ ಪ್ರೋತ್ಸಾಹ... ಇವು ಇಂದಿನ ಕಾರ್ಷಿಕ ರಂಗ ಎದುರಿಸುತ್ತಿರುವ ಕೆಳಹಂತಗಳಲ್ಲಿನ ಸಮಸ್ಯೆಗಳಿಗೆ ಸಂವಾದಿಯಾಗಿಯೇ ಇಲ್ಲ. ಬಹುಮುಖ್ಯವಾಗಿ ಇದಕ್ಕೆಲ್ಲಾ ಹಣವನ್ನು ನಿಖರವಾಗಿ ಮೀಸಲಿಟ್ಟಿಲ್ಲ. ಯೋಜನೆಗಳೂ ನಿರ್ದಿಷ್ಟವಾಗಿಯೂ ಇಲ್ಲ. ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಅನುಷ್ಠಾನ ನಿರ್ಲಕ್ಷಿತವೇ. ಹೀಗಿರುವಾಗ ಘೋಷಿತ ಯೋಜನೆಗಳು ಸಾಕಾರಗೊಳ್ಳುವುದಾದರೂ ಹೇಗೆ? ಆದ್ದರಿಂದ ಸರ್ಕಾರ ತನ್ನ ಬದ್ಧತೆಯನ್ನು ಘೋಷಿಸದಿರುವುದು ಕಾಣುತ್ತದೆ.

ಈ ಸರ್ಕಾರ ಕಾರ್ಪೊರೇಟ್ ಕೃಷಿ, ರಫ್ತು ಆಧಾರಿತ ಉತ್ಪಾದನೆಯಂತಹ ಗುಂಗಿನಲ್ಲೇ ಇರುವಾಗ, ಕೃಷಿ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿಯನ್ನು ಖಾಸಗಿ ಸ್ವಯಂಸೇವಾ ಸಂಸ್ಥೆಗಳಿಗೆ ಒಪ್ಪಿಸಿ ಕೈ ತೊಳೆದುಕೊಳ್ಳುವ ದಾರಿಯಲ್ಲಿರುವುದು ಕಾಣುತ್ತದೆ. ಸಂಘಪರಿವಾರದ ವಲಯದಲ್ಲಿರುವ ಧರ್ಮಸ್ಥಳದ ಹೆಗಡೆಯವರ 'ರುಡ್‌ಸೆಟ್'ಗೆ ಗುಡಿ ಕೈಗಾರಿಕೆಗಳ ಅನುದಾನ ನೀಡಿಕೆಯನ್ನು ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನೂ, ಅದೇ ರೀತಿ ಆರ್ಟ್ ಆಫ್ ಲೀವಿಂಗ್ (ಚೀಟಿಂಗ್)ನ ರವಿಶಂಕರ್‌ಗೆ ಗ್ರಾಮೀಣ ಯುವಜನರ ವ್ಯಕ್ತಿತ್ವ ವಿಕಸನ ತರಬೇತಿ ಒಪ್ಪಿಸಿರುವುದು ವಾಸ್ತವದಲ್ಲಿ ಎಷ್ಟು ಪ್ರಯೋಜನಕಾರಿಯಾದೀತು ಎನ್ನುವುದರ ಜೊತೆಗೆ ಗ್ರಾಮೀಣ ಅಭಿವೃದ್ಧಿ ಹಾಗೂ ಮಾನವ ಸಂಪನ್ಮೂಲ ತರಬೇತಿಯಲ್ಲಿ ಸಂಘದ ತತ್ವಪ್ರಚಾರ, ಸಂಘಟನೆ ಜಾಲ ಒಪ್ಪಿಸುವ ಕೋಮುವಾದಿ ಅಪಾಯಕಾರಿ ಹೆಜ್ಜೆ ಇದೆ.

ಹೀಗಾಗಿ ಕೃಷಿ, ಗ್ರಾಮೀಣ ಅಭಿವೃದ್ಧಿಯತ್ತ ಮೂಲಭೂತ ಹೆಜ್ಜೆಗಳಿಲ್ಲದೆ ರೈತಗೀತೆ ಹಾಡುವ ಮತ್ತು ಅಭಿವೃದ್ಧಿಯ ಕೇವಲ ಬೊಗಳೆ ಮಾತುಗಳಲ್ಲೇ ರೈತರ, ಗ್ರಾಮಾಂತರ ಜನರ ಕಣ್ಣಿಗೆ ಮಣ್ಣೆರಚಲು ಬಿಜೆಪಿ ಸರ್ಕಾರ ಹೊರಟಿರುವುದು ಸ್ಪಷ್ಟವಾಗಿದೆ.


ಅಸಂಘಟಿತರ ಚಳುವಳಿ ಅಭಿನಂದನೀಯ :

ಕನಿಷ್ಟ ಕೂಲಿಯ ಹೆಚ್ಚಳ, ಉದ್ಯೋಗ ಭದ್ರತೆ, ವಸತಿ ಮುಂತಾದ ಮಹತ್ವದ ಬೇಡಿಕೆಗಳಾಧಾರದಲ್ಲಿ ಇದೇ ಸೆಪ್ಟೆಂಬರ್ 15 ರಿಂದ ನಡೆದ ಅಸಂಘಟಿತ ಕಾರ್ಮಿಕರ ಚಳುವಳಿಯು ಅತ್ಯಂತ ಯಶಸ್ವಿಯಾಗಿದೆ. ರಾಜ್ಯದ 27 ಜಿಲ್ಲೆ ಗಳಲ್ಲಿಯೂ ಸಾವಿರ ಸಾವಿರ ದುಡಿಯುವ ಜನ ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ಇದನ್ನು ವಿಫಲಗೊಳಿಸಲು ಹಾಸನ, ರಾಯಚೂರು, ಗುಲಬರ್ಗಾಗಳಲ್ಲಿ ನೇರವಾಗಿ ಪೊಲೀಸರ ಧಾಳಿಯಾಗಿದೆ. ಎಲ್ಲೆಡೆ ಬಂಧನಗಳೂ ನಡೆದಿವೆ. ಸರ್ಕಾರದ ಆಡಳಿತ ಯಂತ್ರ ಪೊಲೀಸರ ಮೂಲಕ ದೌರ್ಜನ್ಯವೆಸಗಿದರೂ ಎದೆಗುಂದದೇ ಚಳುವಳಿ ಮುಂದುವರಿಸಿರುವುದು ಶ್ಲಾಘನೀಯ. ಆ ಎಲ್ಲಾ ಶ್ರಮಜೀವಿಗಳನ್ನೂ, ಸಂಘಟನೆಯ ಕಾರ್ಯಕರ್ತರನ್ನು ಮುಖಂಡತ್ವವನ್ನು ಹೃದಯ ಪೂರ್ವಕವಾಗಿ ಅಭಿನಂದಿಸಲೇಬೇಕು.

ರಾಜ್ಯದಲ್ಲಿ ಸರ್ಕಾರವೇ ಪ್ರಕಟಿಸಿದಂತೆ ಸುಮಾರು 3 ಕೋಟಿಯಷ್ಟು ಅಸಂಘಟಿತ ಕಾರ್ಮಿಕರಿದ್ದಾರೆ. ಅಂದರೆ ರಾಜ್ಯದ ಜನಸಂಖ್ಯೆಯ ಅರ್ಧಕ್ಕಿಂತಲೂ ಅಧಿಕ. ಆದರೆ ಬಹುರಾಷ್ಟ್ರೀಯ ಕಂಪನಿಗಳು, ಬಂಡವಾಳಗಾರರು ಬಾಯ್ತೆರೆವ ಮೊದಲೇ ನಡುಬಗ್ಗಿ ಸೇವೆ ಸಲ್ಲಿಸುವ ಸರ್ಕಾರ, ತನ್ನನ್ನು ಆರಿಸಿದ ಜನರತ್ತ ಕಿಂಚಿತ್ತೂ ಗಮನಹರಿಸದಿರುವುದು ಅದರ ವರ್ಗಧೋರಣೆಯನ್ನು ತೋರಿಸುತ್ತದೆ. ಆದ್ದರಿಂದ ಬೇಡಿಕೆಗಳಿಗಾಗಿ ನಡೆಯುವ ಈ ಹೋರಾಟ ಸರ್ಕಾರದ ನೀತಿಗಳಿಗೆ ಸಂಬಂಧಿಸಿರುವುದನ್ನು ಅರಿತು ನೀತಿಗಳ ಬದಲಾವಣೆ, ಸರ್ಕಾರವನ್ನು ಮಣಿಸಲು ಇನ್ನೂ ಪ್ರಬಲ ಚಳುವಳಿಯಾಗಿ ಮುಂದುವರಿಯಬೇಕಿದೆ. ಇದಕ್ಕೆ ಸಂಘಟನೆಯ ಹೊರವ್ಯಾಪ್ತಿಯಲ್ಲಿರುವವರನ್ನು ಸೆಳೆಯಬೇಕಿದೆ. ಈ ಹೋರಾಟ ಯಶಸ್ವಿ ಯಾಗಲಿ ಎಂದು 'ಜನಶಕ್ತಿ' ಹಾರೈಸುತ್ತದೆ.

ಚೀನಾಕ್ಕೆ ಹೋಗಿ ಕಲಿತದ್ದೇನು?

'ಮಣ್ಣಿನ ಮಕ್ಕಳ' ಸರಣಿ ಶ್ರೇಷ್ಟರು ತಾವೆಂದೇ ಭಾವಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಈಗ ಜ್ಞಾನೋದಯವಾಗಿಬಿಟ್ಟಿದೆಯಂತೆ. ಅದು ಚೀನಾದ



ನೆಲದಲ್ಲಿ ನಿಂತಿರುವಾಗ ! ನಿಜ ಚೀನಾದ ನೆಲದಲ್ಲಿ ಅರಿಯಬೇಕಾದ, ಕಲಿಯಬೇಕಾದ ನೂರಾರು ಸಂಗತಿಗಳಿವೆ. ಅಲ್ಲಿಗೆ ಭೇಟಿ ನೀಡಿದ ಬಹುತೇಕರು ಅಲ್ಲಿನ ಸರ್ವಾಂಗೀಣ ಪ್ರಗತಿಯನ್ನು ಕಂಡು ಬಾಯಿ ಮೇಲೆ ಬೆರಳಿಟ್ಟುಕೊಳ್ಳುತ್ತಾರೆ. ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಅರಿಯಲು ಕುಟುಂಬ ಸಮೇತರಾಗಿ ಹೋಗಿದ್ದ ಯಡಿಯೂರಪ್ಪನವರು ಚೀನಾದ ಪ್ರಗತಿ ಕಂಡು ನಿಬ್ಬೆರಗಾಗಿರುವುದು ನಿಜ. ಬಹುಶ: ಇಲ್ಲಿ ಸದಾ 'ಅಭಿವೃದ್ಧಿ'ಯ ಬಗ್ಗೆ ಮಂತ್ರ ಹೇಳುವ ಅವರಿಗೆ ಅಲ್ಲಿನ 'ಅಭಿವೃಧ್ಧಿ'ಯು ತಮ್ಮ ಕಲ್ಪನೆಗಿಂತ ಭಿನ್ನವಾಗಿಯಲ್ಲದೆ, ಅದನ್ನು ಮೀರಿದ್ದೆಂದು ಚಕಿತವಾಗಿರಬಹುದು. ಅದೇನೇ ಇರಲಿ, ಐದು ದಿನಗಳ ಅವರ ಅಧ್ಯಯನ ಪ್ರವಾಸದಿಂದ ರಾಜ್ಯದ ಜನತೆಗೇನು ಪ್ರಯೋಜನ ಎಂಬುದು ಎಲ್ಲರ ಸಹಜ ಪ್ರಶ್ನೆ. ಅದು ಗುಣಗಾನಕ್ಕೆ ಸೀಮಿತವಾಗಿ, ಮನಸ್ಸಿಗೆ ತೋಚಿದಂತಹ ವಿಚಿತ್ರ ವ್ಯಾಖ್ಯಾನಗಳಿಗೆ ಆಹಾರವಾಗುವುದು ಆಕ್ಷೇಪಾರ್ಹವಾಗಿದೆ.

ಸಂಶೋಧನೆ

ನಮ್ಮ ಕೃಷಿಕರೇಕೆ ಬಡತನ, ದಾರಿದ್ರ್ಯದಲ್ಲಿದ್ದಾರೆ? ಕರ್ನಾಟಕ, ಭಾರತ ಯಾಕೆ ಈ ರೀತಿಯಲ್ಲಿ ಹಿಂದುಳಿದಿದೆ?

ಚೀನಾ ಯಾಕೆ ಮುಂದುವರಿದಿದೆ? ಕಾರಣ ಏನು? ಎನ್ನುವಂತಹ ಗಂಭೀರವಾದ ಪ್ರಶ್ನೆಗಳಿಗೆ ಯಡಿಯೂರಪ್ಪನವರಲ್ಲಿ ಉಡಾಫೆಯ ಉತ್ತರವಿದೆ. ರೈತರ ಸಮಸ್ಯೆಗಳಿಗೆ ರೈತರೇ ಕಾರಣ, ಅವರು, ಅವರ ಕುಟುಂಬವೂ ಮೈಮುರಿದು ದುಡಿಯುವುದಿಲ್ಲ. ಚೀನಾದಲ್ಲೋ, ಅವರೆಲ್ಲಾ ದುಡಿಯುತ್ತಾರೆ. ಉಪಕಸುಬು ಮಾಡುತ್ತಾರೆ, ಆದ್ದರಿಂದ ಅವರು ಹಾಗೆ, ನಾವು ಹೀಗೆ ಎಂಬುದು ಯಡ್ಡಿಯ ಒಂದು ಸಂಶೋಧನೆ.

ಇನ್ನು, ನಮ್ಮ ದೇಶ, ರಾಜ್ಯ ಹೀಗೇಕೆ ಹಿಂದುಳಿದಿದೆ ಎಂದರೆ ಜನಸಂಖ್ಯೆ ಎಂಬುದು ಮತ್ತೊಂದು ವ್ಯಾಖ್ಯಾನ. ಜನಸಂಖ್ಯೆ ನಿಯಂತ್ರಿಸಿಬಿಟ್ಟರೆ ಅಭಿವೃದ್ಧಿ ತಾನೇ ಆಗುತ್ತದೆ. ಚೀನಾದಲ್ಲಿ ಎರಡು ಮಕ್ಕಳಿಗಿಂತ ಹೆಚ್ಚಿದ್ದರೆ ಸರ್ಕಾರದ ಸವಲತ್ತು ಸಿಗುವುದಿಲ್ಲ. ಅದೇ ರೀತಿ ನಮ್ಮಲ್ಲೂ ಇಬ್ಬರಿಗಿಂತ ಹೆಚ್ಚಿಗೆ ಮಕ್ಕಳಾದರೆ ಸವಲತ್ತು ರದ್ದುಪಡಿಸಬೇಕು ಎಂಬುದು ಅದ್ಭುತ ಸಂಶೋಧನೆ. ಬಹಳ ವಿಶೇಷವೆಂದರೆ ಇಂತಹ ವಿಶ್ಲೇಷಣೆಗಳಿಗೆ ವಿರೋಧಪಕ್ಷವು ತಲೆದೂಗಿರುವುದು, ಒಂದು ಹೆಜ್ಜೆ ಮುಂದುವರಿದು ಕಾಂಗ್ರೆಸ್‌ನ 'ಮುತ್ಸದ್ದಿ' ನಾಯಕ ಉಗ್ರಪ್ಪನವರು 'ಜನಸಂಖ್ಯೆ' ನಿಯಂತ್ರಣಕ್ಕೆ ಹಾಗೂ ಸರ್ಕಾರಿ ಸವಲತ್ತುಗಳ ಕಡಿತದ ಬಗ್ಗೆ ಒಂದು ಕಾನೂನು ರೂಪಿಸಲು, ರಾಷ್ಟ್ರೀಯ ಮಟ್ಟದ ಚರ್ಚೆ ನಡೆಸಲು ಸೂಚಿಸಿರುವುದು.



ದುರುದ್ದೇಶದ ಆರೋಪ

ಕೃಷಿಯು, ಕೃಷಿಕರ ಸಮಸ್ಯೆಗಳಿಗೆ ರೈತ ಕೂಲಿಕಾರರೇ ಕಾರಣವೆಂಬ ಮುಖ್ಯಮಂತ್ರಿಗಳ ವಾದ ಹೊಣೆಗೇಡಿತನದ್ದಾಗಿದೆ. ಮಾತ್ರವಲ್ಲ ಹಾದಿ ತಪ್ಪಿಸುವಂತಹದ್ದು ಕೂಡ. ಚೀನಾದ ಕೃಷಿಕರು, ಕೃಷಿಯ ದಾಪುಗಾಲಿನ ಅದ್ಭುತ ಸಾಧನೆಗೆ ಅವರ ಪರಿಶ್ರಮದ ಜೊತೆಗೆ ಅಲ್ಲಿನ ಸರ್ಕಾರದ ನೀತಿಗಳೇ ಮುಖ್ಯ ಕಾರಣ. ಚೀನಾದ ಸಂಪತ್ತು ಅದು ಪ್ರಭುತ್ವದ್ದು, ಎಲ್ಲಾ ಜನರದ್ದು, ಅದರ ನಿಯಂತ್ರಣ ಹಂಚಿಕೆ ಸಮಾನತೆಯ ಆಧಾರದಲ್ಲಿರುವಂತಹದ್ದು. ವಿದೇಶಿ ಬಂಡವಾಳ, ಎಸ್.ಇ.ಝಡ್. ನಲ್ಲಿ ಖಾಸಗಿ ಕಂಪನಿಗಳಿಗೆ ಆರ್ಥಿಕತೆಯಲ್ಲಿ ಒಂದಿಷ್ಟು ಅವಕಾಶವಿರುವಾಗಲೇ ಪ್ರಧಾನವಾಗಿ ಉತ್ಪಾದನಾ ಸಾಧನ, ಸಲಕರಣೆ, ಸಂಬಂಧಗಳು ಎಲ್ಲವೂ ಸಮಾಜವಾದಿ ಸಮಾಜ ವ್ಯವಸ್ಥೆಯ ಜನ ಪ್ರಭುತ್ವದ ಪ್ರಜಾಸತ್ತಾತ್ಮಕ ನಿಯಂತ್ರಣದಲ್ಲಿದೆ. ಇದನ್ನು ಅರಿಯುವ ಮನಸ್ಸಿಲ್ಲದೆ ಅರಿವಿಗೆ ಬಂದರೂ ಅಂಗೀಕರಿಸಲಾಗದೇ ತಮ್ಮ ಪಾಲಿನ ಹೊಣೆ ಇಲ್ಲಿ ಎಷ್ಟಿದೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳದೇ ಹಗಲಿರುಳೂ ದುಡಿವ ಶ್ರಮಜೀವಿಗಳ ಹೆಗಲಿಗೇ ಸಮಸ್ಯೆಗಳನ್ನು ಹೇರುತ್ತಿದ್ದಾರೆ. ಆರೋಪಿಸುತ್ತಿದ್ದಾರೆ.

ಪುಟ 6ಕ್ಕೆ

ಪಠ್ಯ ಪುಸ್ತಕ ಹಗರಣ : ಖಾಸಗಿ ಮುದ್ರಕರ ಲಾಬಿಗೆ ಮಣಿದ ಯಡಿಯೂರಪ್ಪ ಸರ್ಕಾರ

ಮುಖ್ಯಮಂತ್ರಿ ಬಿ.ಎಸ್.ಯಡಿ ಯೂರಪ್ಪ ವಿರೋಧ ಪಕ್ಷದಲ್ಲಿದ್ದಾಗ ಹೇಳೋದೊಂದು-ಅಧಿಕಾರದಲ್ಲಿದ್ದಾಗ ಮಾಡೊದೊಂದಾ? ಹೌದೆನ್ನುತ್ತವೆ ಅವರ ಇತ್ತೀಚಿನ ನಡವಳಿಕೆಗಳು. ಇದಕ್ಕೆ ಪಠ್ಯಪುಸ್ತಕ ಹಗರಣವೇ ಜೀವಂತ ಸಾಕ್ಷಿ. ಯಡಿಯೂರಪ್ಪ ವಿರೋಧ ಪಕ್ಷದ ನಾಯಕರಾಗಿದ್ದಾಗ 13ನೇ ಜುಲೈ 2005 ರಂದು ವಿಧಾನಸಭೆ ಅಧಿವೇಶನದಲ್ಲಿ ಪಠ್ಯಪುಸ್ತಕಗಳ ಮುದ್ರಣ ಕೆಲಸ ಖಾಸಗಿಯವರಿಗೆ ನೀಡಿದ್ದಕ್ಕೆ ವ್ಯಗ್ರರಾಗಿದ್ದರು. ಸರ್ಕಾರಿ ಮುದ್ರಣಾಲಯದಲ್ಲೇ ಪಠ್ಯಪುಸ್ತಕಗಳನ್ನು ಮುಧ್ರಿಸಬೇಕೆಂದು ಆಗ್ರಹಿಸಿದ್ದರು. 'ಬಿಳಿಯಾನೆಯಂತಾದ ಸರ್ಕಾರಿ ಮುದ್ರಣಾಲಯದ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕೆಂದು' ಒತ್ತಾಯಿಸಿದ್ದರು.

ವಿಪರ್ಯಾಸವೆಂದರೆ ತಾವು ಮುಖ್ಯಮಂತ್ರಿಯಾದ ಮೇಲೆ 2010-11ನೇ ಸಾಲಿನ 1 ರಿಂದ 12ನೇ ತರಗತಿವರೆಗಿನ ಉಚಿತ ಹಾಗೂ ಮಾರಾಟದ 5.40 ಕೋಟಿ ಪಠ್ಯಪುಸ್ತಕಗಳನ್ನು 65 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಮುದ್ರಿಸಲು ಖಾಸಗಿಯವರಿಗೆ ನೀಡಿದ್ದಾರೆ. ಇದರಿಂದಾಗಿ ಖಾಸಗಿ ಮುದ್ರಕರ ಲಾಬಿಗೆ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ತಲೆ ಬಾಗಿದೆಯಲ್ಲವೇ ಎಂಬ ಪ್ರಶ್ನೆ ಎದುರಾಗಿದೆ.

ಪ್ರತಿವರ್ಷ ಸರ್ಕಾರಿ ಮುದ್ರಣಾಲಯದಲ್ಲೇ ಪಠ್ಯಪುಸ್ತಕಗಳನ್ನು ಮುದ್ರಿಸಿ ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಬೇಕೆಂಬ ದೃಷ್ಟಿಯಿಂದ 27ನೇ ಫೆಬ್ರವರಿ 2004 ರಂದು ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಸರ್ಕಾರಿ ಮುದ್ರಣಾಲಯದಲ್ಲೇ ಪಠ್ಯಪುಸ್ತಕಗಳನ್ನು ಮುದ್ರಿಸಬೇಕೆಂದು ನಿರ್ಧರಿಸಿದ್ದರು.

ಇದರ ಭಾಗವಾಗಿ 4ನೇ ಏಪ್ರಿಲ್ 2004ರಂದು ರಾಜ್ಯ ಸರ್ಕಾರ ಆದೇಶವೊಂದನ್ನು ಹೊರಡಿಸಿ 2005-06ನೇ ಸಾಲಿನಿಂದ ಮಾರಾಟ ಹಾಗೂ ಉಚಿತವಾಗಿ ಸರಬರಾಜು ಮಾಡುವ ಎಲ್ಲ ಪಠ್ಯಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯದಲ್ಲೇ ಮುದ್ರಿಸಬೇಕೆಂದು ಸ್ಪಷ್ಟವಾಗಿ ತಿಳಿಸಿತ್ತು. ಈ ಆದೇಶದ ವಿರುದ್ಧವಾಗಿ ಕರ್ನಾಟಕ ಪಠ್ಯಪುಸ್ತಕ ಸಂಘದ ಮೂಲಕ 65 ಕೋಟಿ ರೂ.ಗಳನ್ನು ಬೃಹತ್ ಮೊತ್ತದ ಪಠ್ಯಪುಸ್ತಕಗಳ ಮುದ್ರಣ ಕೆಲಸ ಖಾಸಗಿಯವರಿಗೆ ನೀಡಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘದ ಅವಾಂತರ

ಪ್ರತಿ ವರ್ಷ ಏಪ್ರಿಲ್ 1 ರಿಂದ ಸರ್ಕಾರಿ ಮುದ್ರಣಾಲಯಗಳಲ್ಲಿ ಪಠ್ಯಪುಸ್ತಕಗಳ ಮುದ್ರಣ ಕಾರ್ಯ ಆರಂಭವಾಗಿ ಮಾರ್ಚ್ 31 ರೊಳಗೆ ಮುಗಿಯಬೇಕು. ತದನಂತರ ಜೂನ್ 1 ರೊಳಗೆ ಎಲ್ಲ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ವಿತರಣೆಯಾಗಬೇಕೆಂಬ ಸದುದ್ದೇಶದಿಂದ ಡಾ:ಕೆ.ಪಿ.ಸುರೇಂದ್ರನಾಥ ವರದಿ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘ 2006ರ ಜೂನ್ 1 ರಿಂದ ಅಸ್ತಿತ್ವಕ್ಕೆ ತರಲಾಯಿತು. ಆದರೆ ಈಗ ಆಗುತ್ತಿರುವುದೇ ಬೇರೆ.

ವರ್ಷಕ್ಕೆ 5.40 ಕೋಟಿ ಪಠ್ಯಪುಸ್ತಕಗಳ ಅವಶ್ಯಕತೆ ಇದ್ದು, ಪ್ರತಿತಿಂಗಳು 45 ಲಕ್ಷ ಪಠ್ಯಪುಸ್ತಕಗಳನ್ನು ಮುದ್ರಿಸಿದರೆ ಈ ಗುರಿ ಮುಟ್ಟಲು ಸಾಧ್ಯ. ಸೋಜಿಗವೆಂದರೆ ಕರ್ನಾಟಕ ಪಠ್ಯಪುಸ್ತಕ ಸಂಘ ಮುದ್ರಣ ಕೈಗೊಳ್ಳದಂತೆ ಸರ್ಕಾರಿ ಮುದ್ರಣಾಲಯಗಳಿಗೆ ಆದೇಶಿಸಿದೆ. ಹೀಗಾಗಿ ಕಳೆದ 5 ತಿಂಗಳಿನಿಂದ ಸರ್ಕಾರಿ ಮುದ್ರಣಾಲಯಗಳಲ್ಲಿ ಪಠ್ಯಪುಸ್ತಕಗಳ ಮುದ್ರಣ ಕಾರ್ಯ ಪ್ರಾರಂಭವಾಗಿಲ್ಲ.

ಮಾರಾಟ ಹಾಗೂ ಉಚಿತ ಪಠ್ಯಪುಸ್ತಕಗಳನ್ನು ಮುದ್ರಿಸಲು ಖಾಸಗಿಯವರಿಗೆ ನೀಡಿದ್ದಲ್ಲಿ, ಅವರು ವ್ಯಾಪಾರದ ದೃಷ್ಟಿಯಿಂದ ಮಾರಾಟದ ಪಠ್ಯಪುಸ್ತಕಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿ ಉಚಿತ ಪಠ್ಯಪುಸ್ತಕಗಳ ಕೃತಕ ಅಭಾವ ಸೃಷ್ಟಿಸಿ ಲಾಭಗಳಿಸುವ ಪ್ರಯತ್ನದಲ್ಲಿರುತ್ತಾರೆ. ಇಂಥ ಘಟನೆಗಳು ಈ ಹಿಂದೆ ನಡೆದಿವೆ. ಧರ್ಮಸಿಂಗ್ ಸರ್ಕಾರ ಇಂಥ ಮುದ್ರಕ-ಪ್ರಕಾಶಕರ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿ ಕ್ರಮ ಕೈಗೊಂಡಿದ್ದನ್ನು ಸ್ಮರಿಸಬಹುದಾಗಿದೆ.

ಖಾಸಗೀಕರಣ-ಜಾಗತೀಕರಣ-ಉದಾರೀಕರಣ ನೀತಿಗೆ ಶರಣಾಗಿರುವ ರಾಜ್ಯ ಸರ್ಕಾರ ಖಾಸಗಿ ಮುದ್ರಕರಿಗೆ ಮಣೆ ಹಾಕುವುದರ ಮೂಲಕ ರಾಜ್ಯದಲ್ಲಿರುವ 13 ಸರ್ಕಾರಿ ಮುದ್ರಣಾಲಯಗಳನ್ನು ಶಾಶ್ವತವಾಗಿ ಮುಚ್ಚುವ ಹುನ್ನಾರ ನಡೆಸಿದೆ ಎಂದು ಸರ್ಕಾರಿ ಮುದ್ರಣಾಲಯದ ನೌಕರರು-ಗುತ್ತಿಗೆ ಕಾರ್ಮಿಕರು ಆತಂಕ ವ್ಯಕ್ತಪಡಿಸುತ್ತಾರೆ.

ಈಗಲೂ ಕಾಲ ಮಿಂಚಿಲ್ಲ. ಯಡಿಯೂರಪ್ಪ ಪಠ್ಯಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯಗಳಲ್ಲೇ ಮುದ್ರಿಸಲು ಕ್ರಮ ಕೈಗೊಂಡು ಸರ್ಕಾರಿ ಮುದ್ರಣಾಲಯಗಳ ಸದುಪಯೋಗ ಪಡೆದುಕೊಂಡು ತಾವು ಅಂದಂತೆ ನಡೆದುಕೊಳ್ಳಬೇಕಷ್ಟೇ. ಇಲ್ಲದೇ ಹೋದರೆ ಮುಂದಿನ ದಿನಗಳಲ್ಲಿ ನೌಕರರ-ಗುತ್ತಿಗೆ ಕಾರ್ಮಿಕರ ಮಾತ್ರವಲ್ಲ ಶಿಕ್ಷಣ ಪ್ರೇಮಿಗಳ ಸಾರ್ವಜನಿಕರ ಎದುರಿಸಬೇಕಾದೀತು!

■ **ಸತ್ಯಬೋಧ ಕಾಗಲಕರ್**
ಗುಲಬರ್ಗಾ

ಇ.ಎಂ.ಎಸ್. ಭವನ ನವೆಂಬರ್ 7 ಕ್ಕೆ ಉದ್ಘಾಟನೆ

ತ್ವರಿತ ನಿಧಿ ಸಂಗ್ರಹಕ್ಕೆ ಕರೆ

ಇದೊಂದು ಸಂತಸದ ಸುದ್ದಿ. ಮನುಕುಲದ ಮುನ್ನಡೆಯ ಮಹಾನ್ ಹೆಜ್ಜೆಯಾದ ಅಕ್ಟೋಬರ್ ಕ್ರಾಂತಿ ದಿನಾಚರಣೆಯಂದು ಅಂದರೆ ನವೆಂಬರ್ 7, 2009 ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯಲ್ಲಿ ಎ.ಕೆ.ಗೋಪಾಲನ್ ಸ್ಮಾರಕ ಸಾಮಾಜಿಕ ಶೈಕ್ಷಣಿಕ ಟ್ರಸ್ಟ್ ನಿರ್ಮಿಸುತ್ತಿರುವ ಇ.ಎಂ.ಎಸ್.ಭವನ'ದ ಉದ್ಘಾಟನೆಯಾಗಲಿದೆ.

ಅಂತಿಮ ಹಂತದ ಕೆಲಸ ಕಾರ್ಯಗಳು ವೇಗವಾಗಿ ನಡೆಯುತ್ತಿವೆ. ಈಗಿನ ಹಂತದಿಂದ ಕಟ್ಟಡವು ಪೂರ್ಣಗೊಳ್ಳಲು ಕನಿಷ್ಟ ಇನ್ನೂ 40 ಲಕ್ಷ ಅಗತ್ಯವೆಂದು ಅಂದಾಜು ಮಾಡಲಾಗಿದೆ. ಇನ್ನೂ 30 ಲಕ್ಷ ಸಂಗ್ರಹವಾಗಬೇಕಿದೆ. ಸಂಗಾತಿಗಳು, ಜನಪರ ಚಳುವಳಿ ಹಿತೈಷಿಗಳು ಉದಾರವಾದ ನೆರವನ್ನು ನೀಡಬೇಕೆಂದು ಹಾಗೂ ಸಂಗ್ರಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ವಿ.ಸೂ : ಕೊಡುಗೆಯನ್ನು ಎ.ಕೆ. ಗೋಪಾಲನ್ ಮೆಮೋರಿಯಲ್ ಸೋಶಿಯಲ್ ಎಜುಕೇಷನ್ ಟ್ರಸ್ಟ್, ಬೆಂಗಳೂರು ಹೆಸರಿಗೆ ನೀಡಿ.

ಕಾಮ್ರೇಡ್ ಹೋಳೂರು ಶಂಕರ್ ಕುಟುಂಬ ಸಹಾಯ ನಿಧಿಗೆ ಕೊಡುಗೆ ನೀಡಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಮುಖಂಡರು, ರೈತ ಆಂದೋಲನದ ಮುಂಚೂಣಿ ಸಂಗಾತಿಯಾಗಿದ್ದ ಕಾಂ.ಹೋಳೂರು ಶಂಕರ್ ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ. ಜನಪರ ಆಂದೋಲನದ ಪೂರ್ಣಾವಧಿ ಕಾರ್ಯಕರ್ತರಾಗಿ ತಮ್ಮನ್ನು ತಾವು ಚಳುವಳಿಗೆ ಸಮರ್ಪಿಸಿಕೊಂಡಿದ್ದ ಶಂಕರ್ ಅವರ ಕುಟುಂಬಕ್ಕೆ ಇದೀಗ ಜನಪರ ಚಳುವಳಿಯ ಆಸರೆ ಅಗತ್ಯವಾಗಿದೆ.

ಕಾಂ.ಹೋಳೂರು ಶಂಕರ್ ಕುಟುಂಬ ಪರಿಹಾರ ನಿಧಿಗೆ ಉದಾರವಾಗಿ ಕೊಡುಗೆ ನೀಡಲು ಈ ಮೂಲಕ ವಿನಂತಿಸಲಾಗಿದೆ.

ವಿ. ಸೂ : ಹಣವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ, ಬೆಂಗಳೂರು ಹೆಸರಿಗೆ ನೀಡಿ.

ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 21, 2009** ಬಿಇಎಂಎಲ ಮೂರು ಘಟಕಗಳ ಗುತ್ತಿಗೆ ಕಾರ್ಮಿಕರಿ ಅಧ್ಯಯನ ಶಿಬಿರ, ಸೂರಿಭವನ ಬೆಂಗಳೂರು
- **ಸೆಪ್ಟೆಂಬರ್ 24,** ಉಪನ್ಯಾಸಕ ಕೊರತ ವಿಶ್ವವಿದ್ಯಾಲಯಗಳ ಅವ್ಯವಸ್ಥೆ ವಿರೋಧಿ ರಾಜವ್ಯಾಪಿ ಪದವಿ ವಿದ್ಯಾರ್ಥಿಗ ಪ್ರತಿಭಟನೆ
- **ಸೆಪ್ಟೆಂಬರ್ 30,2009** ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ರಾಜ್ಯ ಮಟ್ಟದ ಒಂದು ದಿನ ಸಂಘಟನಾ ಸಮಾವೇಶ. ಹರಪನಹಳ್ಳಿ
- **ಅಕ್ಟೋಬರ್ 2-3, 2009** ಕರ್ನಾಟಕ ರಾ ಅಕ್ಷರ ದಾಸೋಹ ನೌಕರರಸಂಘ ರಾ ಸಮ್ಮೇಳನ, ಶಿಕ್ಷಕರ ಸದನ, ಬೆಂ. ರ್‍ಯಾಲಿ 2,2009 ಬೆಳಿಗ್ಗೆ 11:00 ರೈ ನಿಲ್ದಾಣದಿಂದ ಮೆರವಣಿಗೆ ಆರಂಭ.
- **ಅಕ್ಟೋಬರ್ 2,3,4, 2009** ಸಿಐಟಿಯು ಜಿಲ್ಲಾ ಮಟ್ಟದ ಅಧ್ಯಯನ ಶಿಬಿ ನೆಲಮಂಗಲ
- **ಅಕ್ಟೋಬರ್ 4 ರಿಂದ 14,2009** ಜನವಾ ಮಹಿಳಾ ಸಂಘಟನೆ ಪ್ರಾಂತ ಕೃ ಕೂಲಿಕಾರರ ಸಂಘ, ಪ್ರಾಂತ ರೈ ಸಂಘದಿಂದ ಆಹಾರದ ಹಕ್ಕಿಗಾಗಿ ಬೀದ ಜಿಲ್ಲೆಯಾದ್ಯಂತ ಜಾಥಾ
- **ಅಕ್ಟೋಬರ್ 7-11,** ಆಟೋ ರಿಕ್ಷಾಗಳ ಬ ಬದಲಾವಣೆ ನಿರ್ಧಾರ ವಾಪಸ್ಸಾತಿ ಮತ್ತಿ ಬೇಡಿಕೆಗಳಿಗಾಗಿ ಒತ್ತಾಯಿಸಿ ಆಟೋ ರಿ ಚಾಲಕರ ಸಂಘದಿಂದ ಉಪವಾಸ ಮುಷ ಬೆಂಗಳೂರು
- **ಅಕ್ಟೋಬರ್ 12** ಬೆಂಗಳೂರಿನಲ್ಲಿ ಆಟೋ ಮುಷ್ಕರ
- **ಅಕ್ಟೋಬರ್ 11-14, 2009** ಕರ್ನಾ ಪ್ರಾಂತ ಕೃಷಿ ಕೂಲಿಕಾರರ ಸ ರಾಜ್ಯಮಟ್ಟದ ಅಧ್ಯಯನ ಶಿಬಿರ ಮ ವಿಚಾರ ಸಂಕಿರಣ, ಗುಲ್ಬರ್ಗಾ
- **ಅಕ್ಟೋಬರ್ 15,2009** ರೊಳಗೆ ನಾಗರಿ ಸೌಲಭ್ಯಗಳ ಕೊರತೆ ವಿರುದ್ಧ 'ನಾಗರಿ ರಂಗ' ದಿಂದ ಬೆಂಗಳೂರು ಮಹಾನ ಪಾಲಿಕೆ ವ್ಯಾಪ್ತಿಯ 8 ವಲಯಗಳ ಪ್ರತಿಭಟನೆ
- **ಅಕ್ಟೋಬರ್ 26,2009** ಬೆಲೆ ಏರಿ ಆಹಾರದ ಪ್ರಶ್ನೆಗಳ ಆಧಾರದಲ್ಲಿ ಎಡಪಕ್ಷ ರಾಜ್ಯಮಟ್ಟದ ಸಮಾವೇಶ

ಈ ಹಿಂದು ಧರ್ಮ

ಇಲ್ಲದಿಹ ಕರ್ಮಫಲ ಗ್ರಹಫಲದ ಭೀತಿ
ಪುನರ್ಜನ್ಮ ಮತ್ತಿನ್ನು ಸುಡುಗಾಡು ಜಾತಿ
ಇವು ನೋಡಿ ಈ ಹಿಂದೆ ಧರ್ಮದ್ದೇ ನೀತಿ
ತಲೆಬಾಗಿ ಹಸಿವನ್ನೇ ಮರೆಯುತಿವೆ ಕೋತಿ

- ವಿಡಂ

ಕಾಂಗ್ರೆಸ್‌ನೊಂದಿಗೆ ಸಂಯೋಜನೆ ಹೊಂದಿದ ಐಎನ್‌ಟಿಯುಸಿ, ಸಂಘ ಪರಿವಾರದ ಬಿಎಂಎಸ್ ಸೇರಿದಂತೆ ಒಂಭತ್ತು ರಾಷ್ಟ್ರೀಯ ಸಂಘಟನೆಗಳು ಸೇರಿ ಸಮಾವೇಶ ನಡೆಸಿ ತೀವ್ರವಾದ ಜಂಟಿ ಹೋರಾಟಕ್ಕೆ ನಿರ್ಧರಿಸಿದ್ದರೆಂದ ಮೇಲೆ ಕಾರ್ಮಿಕರ ಪರಿಸ್ಥಿತಿ ಏನಾಗಿದೆ ಎಂಬ ಅಂದಾಜಾಗುತ್ತಿದೆ.

ಅ. 28 ಅಖಿಲ ಭಾರತ ಪ್ರತಿಭಟನಾ ದಿನ

ಬೆಲೆ ಏರಿಕೆ, ಉದ್ಯೋಗ ಕಡಿತ, ಸಾರ್ವಜನಿಕ ಉದ್ದಿಮೆಗಳಲ್ಲಿ ಬಂಡವಾಳ ವಾಪಸಾತಿ ವಿರುದ್ಧ

ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶ ಕರೆ

ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಬಿಎಂಎಸ್, ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಎಐಯುಟಿಯುಸಿ, ಟಿಯುಸಿಸಿ, ಎಐಸಿಸಿಟಿಯು, ಯುಟಿಯುಸಿ 2009ರ ಜುಲೈ 14ರಂದು ನವದೆಹಲಿಯ ಮಾವಳಂಕರ್ ಹಾಲ್‌ನಲ್ಲಿ ರಾಷ್ಟ್ರೀಯ ಸಮಾವೇಶವನ್ನು ಸಂಘಟಿಸಿದ್ದವು. ಈ ಸಮಾವೇಶದಲ್ಲಿ ಈ ಕೆಳಕಂಡ ವಿಷಯಗಳ ಕುರಿತು ಗಂಭೀರ ಆತಂಕವನ್ನು ವ್ಯಕ್ತಪಡಿಸಿದ್ದು ಇದೇ ಸಂದರ್ಭದಲ್ಲಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು.



■ ಆಹಾರ ಧಾನ್ಯಗಳು ಮತ್ತು ತರಕಾರಿ ಸೇರಿದಂತೆ ಅಗತ್ಯ ಉತ್ಪನ್ನಗಳ ದರಗಳು ಹೆಚ್ಚುತ್ತಿರುವುದು ಸಾಮಾನ್ಯ ಜನತೆಯನ್ನು ಭೀಕರವಾಗಿ ಕಾಡುತ್ತಿದೆ.

■ ಆರ್ಥಿಕ ಹಿಂಜರಿತ ಮತ್ತು ಬಿಕ್ಕಟ್ಟಿನಿಂದಾಗಿ ಉದ್ಯೋಗ ಕಡಿತ ಮುಂದುವರೆದಿದ್ದು ಲಕ್ಷಾಂತರ ಕಾರ್ಮಿಕರ ಬದುಕು ಇಂದು ಬೀದಿ ಪಾಲಾಗುತ್ತಿದೆ.

■ ಕನಿಷ್ಠ ವೇತನ, ಕೆಲಸದ ಅವ, ಸಾಮಾಜಿಕ ಭದ್ರತೆ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಕಾರ್ಮಿಕ ಸಂಘಟನೆಗಳ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಅನುಷ್ಠಾನಗೊಳಿಸದಿರುವುದು ಮತ್ತು ನಿರಂತರವಾಗಿ ಉಲ್ಲಂಘನೆ ಮಾಡುತ್ತಿರುವುದು ದೇಶಾದ್ಯಂತ ಇಡೀ ಕಾರ್ಮಿಕ ವರ್ಗವನ್ನು ಇನ್ನಷ್ಟು ಸಂಕಷ್ಟಕ್ಕೀಡು ಮಾಡಿದೆ.

■ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯ್ದೆ 2008ರ ಒದಗಿಸಬೇಕಾಗಿದ್ದ ನಿಯಮಗಳು ಮತ್ತು ಯೋಜನೆಗಳ ಕೊರತೆ, ಗುತ್ತಿಗೆ ಕಾರ್ಮಿಕರು ಸೇರಿದಂತೆ ಅಪಾರ ಸಂಖ್ಯೆಯ ಅಸಂಘಟಿತ ಕಾರ್ಮಿಕರಿಗೆ ಅಗತ್ಯ ಪರಿಹಾರಗಳನ್ನು ಒದಗಿಸುವಲ್ಲಿ ವಿಫಲವಾಗಿದೆ. ಅಸಂಘಟಿತ ವಲಯದಲ್ಲಿನ ಕಂಪನಿಗಳ ರಾಷ್ಟ್ರೀಯ ಆಯೋಗ (ಎನ್‌ಸಿಇಯುಎಸ್) ಮತ್ತು ಕಾರ್ಮಿಕರ ಕುರಿತ ಸಂಸದೀಯ ಸ್ಥಾಯಿ ಸಮಿತಿ ಶಿಫಾರಸು ಮಾಡಿರುವಂತೆ ಅಸಂಘಟಿತ ವಲಯದ ರಾಷ್ಟ್ರೀಯ ನಿಧಿ (ಎನ್‌ಎಫ್‌ಯುಎಸ್) ಸ್ಥಾಪನೆ ಮಾಡದಿರುವುದು ಕಾರ್ಮಿಕರಿಗೆ ಇನ್ನಷ್ಟು ಸಮಸ್ಯೆಗಳನ್ನು ಒಡ್ಡಿದೆ.

■ ಲಾಭದಾಯಕವಾದ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಬಂಡವಾಳ ವಾಪಸಾತಿಗೆ ಮುಂದಾಗಿರುವುದು.

ಈ ಮೇಲ್ಕಂಡ ಸಮಸ್ಯೆಗಳ ನಿವಾರಣೆಗೆ ಸರ್ಕಾರ ಈ ಕೂಡಲೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಷ್ಟ್ರೀಯ ಸಮಾವೇಶ ಆಗ್ರಹಿಸಿತು.

■ ಎಲ್ಲರಿಗೂ ಕಡಿಮೆ ದರದಲ್ಲಿ ಪಡಿತರದ ಮೂಲಕ ಆಹಾರ ಧಾನ್ಯ ಸಿಗುವಂತೆ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಸಾರ್ವತ್ರೀಕರಣಗೊಳಿಸುವ ಮೂಲಕ, ಫ್ಯೂಚರ್ ಮಾರುಕಟ್ಟೆಗಳಲ್ಲಿ ಸಟ್ಟಾ ವಹಿವಾಟನ್ನು ಸ್ಥಗಿತಗೊಳಿಸುವ ಮೂಲಕ ಹಾಗೂ ಇತರ ಸೂಕ್ತ ಕ್ರಮಗಳ ಮೂಲಕ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಲು ಒತ್ತಾಯಿಸಲಾಯಿತು.



- ಆರ್ಥಿಕ ಹಿಂಜರಿತಕ್ಕೆ ಗುರಿಯಾಗಿರುವ ಕ್ಷೇತ್ರಗಳಲ್ಲಿ ಉದ್ಯೋಗಗಳನ್ನು ರಕ್ಷಿಸುವ ಗುರಿಯೊಂದಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯ ಕ್ಷೇತ್ರಕ್ಕೆ ಆರ್ಥಿಕ ಉತ್ತೇಜನಾ ಪ್ಯಾಕೇಜ್ ಒದಗಿಸಬೇಕು ಮತ್ತು ಮೂಲಸೌಕರ್ಯ ವಲಯದಲ್ಲಿ ಸರ್ಕಾರಿ ಹೂಡಿಕೆಯನ್ನು ಹೆಚ್ಚಿಸಬೇಕು.

- ಎಲ್ಲ ಕಾರ್ಮಿಕ ಕಾನೂನುಗಳನ್ನು ಯಾವುದೇ ಮುಲಾಜು ಮತ್ತು ರಿಯಾಯಿತಿ ಇಲ್ಲದೆ ಅನುಷ್ಠಾನಗೊಳಿಸಬೇಕು. ಕಾರ್ಮಿಕ ಕಾನೂನು ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

-ಬಜೆಟ್‌ನಲ್ಲಿನ ಕೊರತೆಯನ್ನು ತುಂಬಿಸಲು ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಬಂಡವಾಳ ವಾಪಸಾತಿಯನ್ನು ನಿಲ್ಲಿಸಬೇಕು. ಬೆಳೆಯುತ್ತಿರುವ ಸಾರ್ವಜನಿಕ ಕಂಪನಿಗಳ ಮೀಸಲು ನಿಧಿಯನ್ನು ಕಂಪನಿಗಳ ವಿಸ್ತರಣೆ ಮತ್ತು ಆಧುನೀಕರಣ ಯೋಜನೆಗಳಿಗೆ ಬಳಕೆ ಮಾಡಬೇಕು. ಹಾಗೂ ರೋಗಗ್ರಸ್ಥವಾಗಿರುವ ಕಂಪನಿಗಳ ಪುನಶ್ಚೇತನಕ್ಕೆ ಉಪಯೋಗಿಸಬೇಕು.

ಈ ಮೇಲ್ಕಂಡ ಗಂಭೀರ ವಿಷಯಗಳ ಕುರಿತು ಸರ್ಕಾರದ ಮೇಲೆ ಒತ್ತಡ ಹೇರಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಸಂಘಟಿಸಲು ರಾಷ್ಟ್ರೀಯ ಸಮಾವೇಶ ತೀರ್ಮಾನ ಕೈಗೊಂಡಿತು.

- ಜಂಟಿ ರಾಜ್ಯ ಸಮ್ಮೇಳನಗಳನ್ನು ಸಂಘಟಿಸುವುದು.

- ಅಕ್ಟೋಬರ್ 28ರಂದು ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸುವುದು.

ಯಾವುದೇ ಕಾರ್ಮಿಕ ಸಂಘಟನೆಯಾಗಲಿ, ಯಾವುದೇ ಸಂಘಟನೆಯೊಂದಿಗೆ ಸಂಯೋಜಿತಗೊಂಡಿರಲಿ ಎಲ್ಲ ಕಾರ್ಮಿಕರು ಮತ್ತು ಸಿಬ್ಬಂದಿ ಪಕ್ಷಾತೀತವಾಗಿ ಮೇಲ್ಕಂಡ ಹೋರಾಟಗಳಲ್ಲಿ ಐಕ್ಯತೆಯಿಂದ ಪಾಲ್ಗೊಳ್ಳಬೇಕು. ಕಾರ್ಮಿಕ ಸಂಘಟನೆಗಳ ಜಂಟಿ ಕಾರ್ಯಕ್ರಮಗಳಲ್ಲಿ ಎಲ್ಲ ಕಾರ್ಮಿಕರು ಭಾಗವಹಿಸಬೇಕೆಂತಲೂ ಸಮಾವೇಶ ಕರೆ ನೀಡಿತು. ○

ಜಾಗತಿಕ ಬಿಕ್ಕಟ್ಟಿಗೆ ಒಂದು ವರ್ಷ...ಯುಪಿಎ ಪಾಠ ಕಲಿಯುವುದಿಲ್ಲ

ಜಾಗತಿಕ ಹಣಕಾಸು ಬಿಕ್ಕಟ್ಟು ತಂದ ಅಮೆರಿಕಾದ ಲೆಹ್ಮನ್ ಬ್ರದರ್ಸ್ ಕುಸಿತಕ್ಕೆ ಈಗ ಒಂದು ವರ್ಷ. ಮುಂದುವರೆದ ದೇಶಗಳ ವಿಖ್ಯಾತ ಬ್ಯಾಂಕುಗಳು, ವಿಮಾ ಕಂಪನಿಗಳು ತರಗೆಲೆಗಳಂತೆ ಉದುರಿಯಲಾರಂಭಿಸಿದಾಗ ಭಾರತದ ಸಾರ್ವಜನಿಕ ವಲಯದ ಬ್ಯಾಂಕುಗಳು, ವಿಮಾ ಕಂಪನಿಗಳು ಗಟ್ಟಿಯಾಗಿ ನಿಂತವು. ಇದಕ್ಕೆ ಕಾರಣ ಇಲ್ಲಿ ಹಣಕಾಸು ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆದು ಹಾಕಬೇಕೆಂಬ ಒತ್ತಡಕ್ಕೆ ಕಂಡು ಬಂದ ತೀವ್ರ ಪ್ರತಿರೋಧ ಎಂಬುದನ್ನು ಈಗ ಎಲ್ಲರೂ ಒಪ್ಪಿಕೊಳ್ಳುತ್ತಿದ್ದಾರೆ.

ಆಗ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದ ವೈ ವಿ ರೆಡ್ಡಿಯವರು ಕಳೆದ ವಾರ ಸಂದರ್ಶನವೊಂದರಲ್ಲಿ ಮಾತಾಡುತ್ತಾ ಹಣಕಾಸು ವಲಯ ದೇಶಕ್ಕೆ ಬಹಳ ಮಹತ್ವದ್ದು ಎನ್ನುವುದಾದರೆ ಅದೊಂದು ಸಾರ್ವಜನಿಕ ಸೇವೆಯಾಗುತ್ತದೆ ಎಂದು ಅಭಿಪ್ರಾಯ ಪಟ್ಟರು. ಅಂದರೆ ಅದು ಸಮಾಜದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಹಾಗಾಗಬೇಕಾದರೆ ಅದು ಸಾರ್ವಜನಿಕ ಒಡೆತನದಲ್ಲಿ ಇರಬೇಕು, ಇಲ್ಲವೇ ಅದರ ಮೇಲೆ ಬಿಗಿ ನಿಯಂತ್ರಣವಿರಬೇಕು. ಆದರೆ ಅದೇಕೋ ಈ ವಿಷಯ ಎತ್ತುವಾಗ ಲಾಭದಾಯಕತೆಯ ಪ್ರಶ್ನೆಯನ್ನು ತರಲಾಗುತ್ತದೆ. ವಾಸ್ತವವಾಗಿ ಈ ಲಾಭದಾಯಕತೆ ಎಂಬುದಕ್ಕೆ ದೇಶ ಅಪಾರ ಬೆಲೆ ತೆತ್ತಿದೆ ಎಂದು ಅವರು ಖೇದ ವ್ಯಕ್ತ ಪಡಿಸಿದರು.

ಆದರೆ ನಮ್ಮ ಸರಕಾರದ ಅರಿವಿಗೆ ಇದು ಇನ್ನೂ ಬಂದಂತಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಂಡವಾಳ ಹೂಡಿಕೆ ಹೆಚ್ಚಿಸಲು ಅದು ವಿಶ್ವ ಬ್ಯಾಂಕಿನ ಬಳಿ ಸಾಲ ಕೇಳಲು ಹೋಗುತ್ತಿದೆ. ಈ ಸಾಲದ ಜತೆಗೆ ಬರುವ ಶರತ್ತುಗಳು ಹಣಕಾಸು ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆಯಬೇಕೆಂದು ಒತ್ತಾಯಿಸುತ್ತವೆ ಎಂದು ಆರ್ಥಿಕ ತಜ್ಞ ಸಿ. ರಾಮಮನೋಹರ ರೆಡ್ಡಿಯವರು ಆತಂಕ ವ್ಯಕ್ತ ಪಡಿಸಿದ್ದಾರೆ.

ಬರೇ ಬೊಗಳೆ

ಮುಕ್ಕೋಟಿ ದೇವತೆಗಳು ಈ ಧರೆಗೆ ಇಳಿದು
ಬಂದಿಹವು ಅನ್ನುವರು ಆಯುಧವ ಹಿಡಿದು
ಬಂದಿದ್ದು ಸಜ್ಜನರ ರಕ್ಷಣೆಗೆ ಎಂದು
ಹೇಳುವುದು ಬರೆ ಬೊಗಳೆ ಎಂದಾಯ್ತು ಇಂದು
- ವಿಡಂಬಾರಿ

ಚಿಕ್ಕಬಳ್ಳಾಪುರ

ರಾಜ್ಯದಲ್ಲಿ 86 ತಾಲ್ಲೂಕುಗಳು ಬರಪೀಡಿತವೆಂದು ಘೋಷಣೆಯಾಗಿವೆ. ಆದರೆ ಚಿಕ್ಕಬಳ್ಳಾಪುರದಂತಹ ತೀವ್ರ ಬರಕ್ಕೆ ತುತ್ತಾಗಿರುವ ಜಿಲ್ಲೆಗಳಲ್ಲೂ ಸಹ ಪರಿಹಾರ ಕಾಮಗಾರಿಗಳು ಏನೂ ನಡೆಯುತ್ತಿಲ್ಲ ಎಂದರೆ ಈ ಸರ್ಕಾರಗಳ ಧೋರಣೆ ಏನಿದೆ?

ಬರದ ತೀವ್ರತೆ ತಗ್ಗಿಲ್ಲ ಪರಿಹಾರ ಸಿಕ್ಕಿಲ್ಲ...

ಚಿಕ್ಕಬಳ್ಳಾಪುರ ಜಿಲ್ಲೆಯ ಒಟ್ಟು ಕೃಷಿ ಯೋಗ್ಯ ಭೂಮಿ 1,45,000 ಹೆಕ್ಟೇರ್. ಈ ಪೈಕಿ ಈ ಸಾಲಿನಲ್ಲಿ ಜಿಲ್ಲೆಯಲ್ಲಿ 11.08.2009ರವರೆಗೆ ಆಗಿದ್ದು, ಬಿತ್ತನೆ ಕೇವಲ 53,033 ಹೆಕ್ಟೇರ್ ಭೂಮಿಯಲ್ಲಿ ಮಾತ್ರ, ಅಂದರೆ ಕೇವಲ ಶೇ.36 ಮಾತ್ರ. ಇದರಲ್ಲಿಯೂ ಶೇ.70 ರಷ್ಟು ಮೊಳಕೆಯೊಡಯದೆ ಹಾಳಾಗಿದೆ. ಇನ್ನುಳಿದ ಶೇ.30 ರಷ್ಟು ಮಾತ್ರ ಅಷ್ಟಿಷ್ಟು ಉಳಿದುಕೊಂಡಿದೆ.

ಜಿಲ್ಲೆಯಲ್ಲಿ ಆಗಸ್ಟ್ ಅಂತ್ಯದ ವೇಳೆಗೆ ಸರಾಸರಿ 384.2 ಮೀ.ಮೀ. ಮಳೆಯಾಗಬೇಕಿತ್ತು. ಆಗಸ್ಟ್ ಎರಡನೇ ವಾರದವರೆಗೆ ಕೇವಲ 215.3 ಮೀ.ಮೀ. ಮಾತ್ರ ಮಳೆಯಾಗಿದೆ ಮತ್ತು ಬಿತ್ತನೆ ಪ್ರಮಾಣ ಮಳೆಯ ಪ್ರಮಾಣ ತಾಲ್ಲೂಕುವಾರು ಹೀಗಿದೆ (ಕೋಷ್ಟಕ ನೋಡಿ).

ಕ್ರ.ಸಂ.	ತಾಲ್ಲೂಕುಗಳು	ಸಾಮಾನ್ಯ ಮಳೆ	ಆಗಿರುವ ಮಳೆ	11.08.09 ರವರೆಗೆ ಬೆಳೆ ಹೆಕ್ಟೇರ್‌ಗಳಲ್ಲಿ
1.	ಚಿಕ್ಕಬಳ್ಳಾಪುರ	345.2	235.8	3.240
2.	ಬಾಗೇಪಲ್ಲಿ	431.8	183.3	12.544
3.	ಚಿಂತಾಮಣಿ	368.0	193.7	2.971
4.	ಗೌರಿಬಿದನೂರು	348.3	226.4	24.112
5.	ಗುಡಿಬಂಡೆ	420.9	208.8	8,330
6.	ಶಿಡ್ಲಘಟ್ಟ	390.7	243.6	1,836
	ಜಿಲ್ಲಾ ಸರಾಸರಿ	384.2	215.3	53,033

ಯಾವುದೇ ನದಿ ನಾಲೆಗಳಿಲ್ಲದೆ ಕೇವಲ ಮಳೆಯಾಧಾರಿತವಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಆಗಸ್ಟ್ ತಿಂಗಳಿನಲ್ಲಿ ಆಗಬೇಕಾದ ಮಳೆ ಸಮಯಕ್ಕೆ ಸರಿಯಾಗಿ ಆಗದೇ ಮಳೆಯ ಹನಿಗಳಿಂದ ನೆನೆಯಬೇಕಿದ್ದ ಭೂಮಿ ಅದಕ್ಕೆ ಬದಲಿಗೆ ರೈತರ, ಕಣ್ಣೀರಿನಿಂದ ತೋಯುವಂತಹಾ ಪರಿಸ್ಥಿತಿ ಬಂತು. ಬರದ ಛಾಯೆ ಆವರಿಸಿತು. ಮನೆಯಲ್ಲಿದ್ದ ಧಾನ್ಯವನ್ನು ಭೂಮಿಯ ಒಡಲಿಗೆ ತುಂಬಿರುವ ರೈತ ಕಂಗೆಟ್ಟು ಬಿಳಿ ಮೋಡಗಳ ಆಗಸದ ಕಡೆಗೆ ತನ್ನ ದೃಷ್ಟಿಯನ್ನು ನೆಟ್ಟಿದ್ದ ಬಂತು. ಹಸಿರು ಮೇವಿಲ್ಲ ದನಕರುಗಳು ಬರಿ ಬಯಲಿನ ಭೂಮಿಯನ್ನು ಕಂಡು ವಿಹ್ವಲಗೊಂಡವು. ಕೆರೆಕುಂಟೆಗಳು ಒಣಗಿದವು. ಕೊಳವೆ ಬಾವಿಗಳಲ್ಲಿಯೂ ನೀರಿ ಹರಿವು ಕಡಿಮೆಯಾಯಿತು. ಇಂತಹ ಪರಿಸ್ಥಿತಿಯಲ್ಲಿಯೂ ರಾಜ್ಯ ಸರ್ಕಾರ ರೈತರ, ಕೂಲಿಕಾರರ ನೆರವಿಗೆ ಧಾವಿಸಲಿಲ್ಲ.

ಆ ನಂತರದ ಹಂತದಲ್ಲೇನೋ ಒಂದಿಷ್ಟು ಮಳೆಯಾಗಿದೆ. ದನಕರುಗಳಿಗೆ ಮೇವು, ಕುಡಿಯುವ ನೀರಿನ ಭರವಸೆ ಸಿಕ್ಕಿದಂತಾಗಿದೆ. ಆದರೆ ಆಗಿರುವ ಬೆಳೆ ಹಾನಿಯನ್ನು ತುಂಬಿ ಕೊಡುವವರು ಯಾರು? ಮಾತಿನ ತೋರಣ ಕಟ್ಟುವುದರಲ್ಲೇ ನಿರತವಾದ ಯಡಿಯೂರಪ್ಪ ಸರ್ಕಾರ ಸಮೀಕ್ಷೆಯಲ್ಲೇ ಕಾಲ ತಳ್ಳುವ ಕೇಂದ್ರ ಸರ್ಕಾರ ಇರುವಾಗ ಕನಿಷ್ಠ ಇಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಹ ಸರಿಯಾ ಜಾರಿಯಾಗುತ್ತಿಲ್ಲ. ಜನರ ನೆರವಿಗೆ ಪ್ರತಿಭಟನೆ ರೂಪ ಕೊಟ್ಟಿದ್ದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಪಿಐ(ಎಂ) ಪಕ್ಷಗಳು ಬೆಳೆ ಹಾನಿಗೆ ಏನು ಪರಿಹಾರ ಸಿಗಲಿದೆ ಕಾದು ನೋಡಬೇಕಿದೆ.

■ ವರದಿ ಸಿ.ಗೋಪಿನಾ

ಈ ವಾರ...

ಪುಟ 3 ರಿಂದ

ಆಳುವವರ ಜನಸಂಖ್ಯಾ ಪುರಾಣ

ಅದೇ ರೀತಿ ಅವರು ಹೇಳಿದ ಜನಸಂಖ್ಯೆಯ ಪುರಾಣವೂ ಸಹ. ನಮ್ಮ ದೇಶದ ಅನಭಿವೃದ್ಧಿ, ದಾರಿದ್ರ್ಯದ ಸ್ಥಿತಿಗೆ ಇಲ್ಲಿನ ಅಸಮಾನ ಆರ್ಥಿಕ ವ್ಯವಸ್ಥೆ ಸಂಪತ್ತು ಒಟ್ಟು ಉತ್ಪಾದನೆ ಹಂಚಿಕೆಯಲ್ಲಿನ ತಾರತಮ್ಯ, ಅದರ ಖಾಸಗಿ ಆಸ್ತಿಗಾಗಿ ಹಿಡಿತ ಕಾರಣ. ಇದನ್ನೇ ಬಲಪಡಿಸುವ ಆಳುವವರ ನೀತಿ ಯೋಜನೆ, ಅವುಗಳ ಜಾರಿ, ಭ್ರಷ್ಟತೆ ಕಾರಣ. ಭೂಮಾಲಿಕ ಬಂಡವಾಳಶಾಹಿ ವ್ಯವಸ್ಥೆ ತನ್ನ ಕರಾಳ ಸುಲಿಗೆಕೋರ ನೀತಿಯ ಇಂತಹ ಸಮಾಜ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳುವ ಅದರ ಪ್ರಭುತ್ವಯಂತ್ರದ ದಮನಕಾರಿ ಪಾತ್ರವನ್ನು ಮರೆಮಾಚಲು ಅತ್ಯಂತ ಸುಲಭವಾಗಿ ಜನರ ಮೇಲೆ ಆರೋಪ ಹೊರಿಸುತ್ತಾ ಬರುತ್ತಿರುವುದು ನಡೆದುಕೊಂಡೇ ಬಂದಿದೆ. ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು ಇದನ್ನು ಅತ್ಯಂತ ವ್ಯವಸ್ಥಿತವಾಗಿ ಪ್ರಚಾರಪಡಿಸುತ್ತಾ ಬಂದಿದ್ದಾರೆ. ಅದೇ ಕೆಲಸಕ್ಕೆ ಯಡಿಯೂರಪ್ಪನವರು ಚೀನಾದ ಭೇಟಿ ಸಂದರ್ಭವನ್ನು ಬಳಸಿಕೊಳ್ಳುತ್ತಿದ್ದಾರೆ. ವಿರೋದಪಕ್ಷಗಳೂ ಹೂಗುಟ್ಟಿರುವುದು ಸಹ ಇವರೆಲ್ಲಾ ಆಳುವ ವರ್ಗಗಳಿಗೆ ಸೇರಿದವರು ಎಂಬ ಸಮಾನ ಅಂಶದಿಂದಲೇ.

ಸಮಾನತೆಯ ಆಧಾರದ ಸಮಾಜ ವ್ಯವಸ್ಥೆ ಹೊಂದಿರುವ ಸಮಾಜವಾದಿ ಚೀನಾವು ತನ್ನ ಮೂಲಭೂತ ಆರ್ಥಿಕ, ರಾಜಕೀಯ ಕಾರ್ಯದೊಂದಿಗೆ ತನ್ನ ಜನಸಂಖ್ಯೆಯ ನಿಯಂತ್ರಣವನ್ನು ಒಂದು ಸಹಾಯಕ ಅಂಶವಾಗಿ ಪರಿಗಣಿಸಿತ್ತೇ ವಿನಃ ಅದೇ ಸರ್ವ ಸಮಸ್ಯೆಗೆ ಮದ್ದು ಎಂದಲ್ಲ. ಜನಸಂಖ್ಯೆ ನಿಯಂತ್ರಣ ಕ್ರಮಗಳಿಂದಾಗಿ ಚೀನಾ ದೇಶ ಈಗ ಸಮಸ್ಯೆ ಎದುರಿಸುತ್ತಿದ್ದು ಅಲ್ಲೀಗ ಯುವ ವಯಸ್ಸಿನವರಿಗಿಂತ, ಹಿರಿಯ ನಾಗರೀಕರ ಅನುಪಾತ ಹೆಚ್ಚುತ್ತಿದೆ. ಚೀನಾ ತನ್ನ ಜನಸಂಖ್ಯೆ ನೀತಿಯನ್ನು ಪರಿಶೀಲಿಸುತ್ತಿದೆ, ಬದಲಿಸುತ್ತಿದೆ.

ಇಲ್ಲಿ ಯಡಿಯೂರಪ್ಪನವರು ಜನಸಂಖ್ಯೆ ನಿಯಂತ್ರಣಕ್ಕೆ ಒತ್ತಾಯಿಸುವುದರಲ್ಲಿ ಬಚ್ಚಿಟ್ಟ ಅಜೆಂಡಾವು ಇದೆ. ಅದು ಅಲ್ಪಸಂಖ್ಯಾತರ ವಿರೋಧವಾದ ಪೂರ್ವಾಗ್ರಹಪೀಡಿತ ಮನೋಭಾವ. ಇದಕ್ಕೆ ಚೀನಾದ ಉದಾಹರಣೆ ಬಳಸುತ್ತಿರುವುದು ಸ್ಪಷ್ಟವಾಗಿದೆ.

ರೈತರಿಗೆ ಶೇ.3 ರ ಬಡ್ಡಿದರ 'ಕಂಡು ಹಿಡಿದಿರುವುದಕ್ಕೆ' ಅಮೇರಿಕಾ ವಿಶ್ವವಿದ್ಯಾಲಯ ವೊಂದರಿಂದ ಗೌರವ ಡಾಕ್ಟರೇಟ್ ಪಡೆದಿದ್ದಾರೆಂದು ಅವರ ಸಂಪುಟದ ಸಚಿವರು ಹೇಳಿಕೊಂಡು ತಿರುಗುತ್ತಿದ್ದರು. ಯಡಿಯೂರಪ್ಪನವರ 'ಚೀನಾದ ಜ್ಞಾನೋದಯ'ಕ್ಕೆ ಅಂತಹವರು ಇನ್ನೇನೋ ವ್ಯಾಖ್ಯಾನ ಕೊಡಬಹುದು! ಇಂತಹ ಕೆಳಮಟ್ಟದ ಹೊಗಳಿಕೆ ವಿಶ್ಲೇಷಣೆಗಳಲ್ಲಿ ಈ ಪುಂಗವರು ಮುಳುಗದೇ ತಮ್ಮ ಸರ್ಕಾರದ ಹೊಣೆಗೇಡಿತನದ ಬಗ್ಗೆ ಸ್ವವಿಮರ್ಶಿಸಿಕೊಂಡರೆ ಜನಕ್ಕೆ ಒಂದಿಷ್ಟು ಪ್ರಯೋಜನವಾದರೂ ಆದೀತು.

ಯಡಿಯೂರಪ್ಪ ಮುಖದ ಮೇಲೆ ಕಲ್ಲಿದ್ದಲ ಮಸಿ

ಯಡಿಯೂರಪ್ಪನವರ 'ಅಭಿವೃದ್ಧಿ' ಸರ್ಕಾರದ ನಿಜಮುಖವೊಂದು ಬಯಲಿಗೆ ಬಂದ ಹಗರಣವೊಂದು ಅನಾವರಣಗೊಂಡಿದೆ. ರಾಜ್ಯದ ಶಾಖೋತ್ಪನ್ನ ವಿದ್ಯುತ್ ಘಟಕಗಳಿಗೆ ಬೇಕಾಗುವ ಕಲ್ಲಿದ್ದಲಿನ ಖರೀದಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಇದರಲ್ಲಿ ಅಧಿಕಾರಿಗಳ ಅಭಿಪ್ರಾಯವನ್ನು ನಿರ್ಲಕ್ಷಿಸಿ ಪಾರದರ್ಶಕತೆ ಬದಿಗೊತ್ತಿ ಸ್ವತ: ಮುಖ್ಯಮಂತ್ರಿಗಳೇ ವಿಶೇಷ ಆಸಕ್ತಿ ವಹಿಸಿ ನೀಡಿದ ಆದೇಶದಿಂದ ರಾಜ್ಯದ ಬೊಕ್ಕಸಕ್ಕೆ ಆಗಿರುವ ಹಾನಿ ಸುಮಾರು 477 ಕೋಟಿ ರೂಪಾಯಿಗಳು. ಸದನದಲ್ಲಿ ಪ್ರಕರಣ ಸ್ಫೋಟವಾದ ನಂತರ ಬೇರೆ ಹಾದಿ ಕಾಣದೇ ಹಗರಣದ ನ್ಯಾಯಾಂಗದ ತನಿಖೆಗೆ ಒಪ್ಪುವ ಮೂಲಕ ಮುಖ್ಯಮಂತ್ರಿಗಳೇ ನಿಯಮಗಳನ್ನು ಉಲ್ಲಂಘಿಸಿ ಹಾಗೂ ಖರೀದಿಯಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಒಪ್ಪಿಕೊಂಡಿದ್ದಾರೆ.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಘಟಕಕ್ಕೆ ವರ್ಷಕ್ಕೆ 12 ಲಕ್ಷ ಟನ್ ಕಲ್ಲಿದ್ದಲು ಅಗತ್ಯವಿದೆ. ಕೇಂದ್ರದ ನಿಯಮದಂತೆ ಶೇ.60ರಷ್ಟನ್ನು ದೇಶೀಯವಾಗಿಯೂ, ಶೇ.40 ರಷ್ಟು ಕಲ್ಲಿದ್ದನ್ನು ವಿದೇಶಿಯ ಖರೀದಿಯಿಂದಲೂ ಬಳಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ವಿದೇಶದ ಕಲ್ಲಿದ್ದಲು 6 ಲಕ್ಷ ಟನ್ ಖರೀದಿಸಲು ನಿರ್ಧರಿಸಿ 2008 ರ ಮೇ 31 ರಂದು ಟೆಂಡರ್ ಕರೆಯಲಾಗಿದೆ. ಈ ಮೂಲಕ ಕಡಿಮೆ ದರ ನೀಡಿದ ಚೆನ್ನೈನ ಭಾಟಿಯಾ ಕಂಪನಿಗೆ ವಹಿಸಲಾಗಿತ್ತು. ನಂತರದಲ್ಲಿ ಜುಲೈ 17 ರಂದು ಕಲ್ಲಿದ್ದಲು ಸರಬರಾಜು ಕಂಪನಿಗಳೊಂದಿಗೆ ಮಾತುಕತೆ ನಡೆಸಲು ಸರ್ಕಾರವೇ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಿತ್ತು. ಕೆ.ಪಿ.ಸಿ.ಎಲ್. ನ ಅಧ್ಯಕ್ಷರಾಗಿ ಮುಖ್ಯಮಂತ್ರಿ ಯಡಿಯೂರಪ್ಪನವರೇ ಇದ್ದರು. ಈ ಸಮಿತಿ ಆಗಸ್ಟ್ 13 ರಂದು 6 ಲಕ್ಷ ಟನ್ ಕಲ್ಲಿದ್ದಲು ಸರಬರಾಜು ಮಾಡಲು ಭಾಟಿಯಾ ಸಂಸ್ಥೆಗೆ ಆದೇಶ ನೀಡಿತ್ತು. ನಂತರ ಅಕ್ಟೋಬರ್‌ನಲ್ಲಿ ಸುಮಾರು ಟನ್‌ಗೆ ರೂ.2500 ರಷ್ಟು ದರ ಕುಸಿದ ಹಿನ್ನೆಲೆಯಲ್ಲಿ 5ರಿಂದ 10 ಲಕ್ಷ ಟನ್ ಮಾತ್ರ ಖರೀದಿಸಬೇಕೆಂದೂ, ಈಗ 30,219 ಮೆ. ಟನ್ ಪೂರೈಸಲು ಕೆಪಿಸಿಎಲ್ (ಪವರ್ ಕಾರ್ಪೊರೇಷನ್) ಕೇಳಿತು. ಭಾಟಿಯಾ ಕಂಪನಿ ಒಪ್ಪದೇ ಪೂರ್ವ ಷರತ್ತಿನಂತೆ 6.90 ಲಕ್ಷ ಟನ್ ಪೂರೈಸುವುದಾಗಿ ಹೇಳಿತು. ಇದಕ್ಕೆ ಒಪ್ಪಿದರೆ ರಾಜ್ಯ ಬೊಕ್ಕ ನಷ್ಟವಾಗುವುದೆಂದು ಕೆಪಿಸಿಎಲ್ ಆಡಳಿತ ಮಂ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಿತು. ಆದರೆ ಇ ನಿರ್ಲಕ್ಷಿಸಿ ಮುಖ್ಯಮಂತ್ರಿಗಳು ಭಾಟಿ ಕಂಪನಿಯಿಂದ 6 ಲಕ್ಷ ಮೆ.ಟನ್ ವಿದೇಶಿ ಕಲ್ಲಿ ಪೂರೈಸಲು ಸೂಚಿಸಿದ್ದರು. ಮಾತ್ರವಲ್ಲ ಮಳೆ ಬ ಕಾರಣ ಹೇಳಿ ಎಂಎಂಟಿಸಿ ಯಿಂದಲೂ 6 ಲಕ್ಷ ಖರೀದಿಗೆ ತಾವೇ ಆದೇಶ ನೀಡಿದರು. ಇ ಖರೀದಿಯಲ್ಲಿ ನಿಯಮದಂತೆ ಪಾರದರ್ಶಕ ನಿ ಪಾಲಿಸಲಿಲ್ಲ. ಹೀಗಾಗಿ ಬೊಕ್ಕಸಕ್ಕೆ ಆಗಿರುವ 477 ಕೋಟಿಯಷ್ಟು.

ಈ ಪ್ರಕರಣವನ್ನು ಜೆಡಿ(ಎಸ್) ಸದನ ಪ್ರಸ್ತಾಪಿಸಿ, ಒತ್ತಡ ಹೇರಿದ್ದರಿಂದಾಗಿ ನ್ಯಾಯ ತನಿಖೆಗೆ ಕೊನೆಗೆ ಮುಖ್ಯಮಂತ್ರಿಗಳೇ ಒಪ್ಪಿದ್ದಾರೆ. ಜೊತೆಗೆ ಈ ತನಿಖೆ ಅವರ ಅ ಮಾತ್ರ ಸೀಮಿತಗೊಳ್ಳದೇ 2002 ರ ಹಿಂದಿನಿಂದ ಆರಂಭಿಸುವ ವ್ಯಾಪ್ತಿಯನ್ನು ಘೋಷಿಸಿದ ಕಾಂಗ್ರೆಸ್, ಜೆಡಿ(ಎಸ್), ಸರ್ಕಾರ ಅಧಿಕಾರಾವಧಿಯಲ್ಲಿಯೂ ಇಂತಹುದೇ ಹ ನಡೆದಿದೆ ಎಂಬುದು ಅವರ ಹೇಳಿಕೆ. ಅಂತ ಹೇಳಿಕೆಯಿಂದ 'ಅಭಿವೃದ್ಧಿ' ಕೆಲಸಗಳು ಹೇ ನಡೆಯುತ್ತವೆ ಎಂಬ ಭ್ರಷ್ಟತೆಯ ಪುರಾಣ ಕಂ ಇರಬಹುದು. ಯಡಿಯೂರಪ್ಪನವರು ಹಗರಣದ ಪ್ರಸ್ತಾಪ ಬಂದಾಗ ಹಿಂದಿನವರದ್ದನ್ನು ಪ್ರಸ್ತಾಪಿಸುವುದು, ಪ್ರಶ್ನೆ ಎತ್ತಿ ಬಾಯಿಮುಚ್ಚಿಸಲು ಎಂದೇ, ಅಥವಾ ನಾವು, ಎಲ್ಲರೂ ಕಳ್ಳರೇ ಹೊಂದಿಕೊಂಡು ಹೋಗೋ ಮುಚ್ಚಿ ನಡೆಯೋಣ ಎಂಬ ಸಂದೇಶದಿಂದ ಮೊದಲು ಯಡ್ಡಿ ತಮ್ಮ ಅವಧಿಯ ಭ ಒಪ್ಪಿಕೊಳ್ಳಲಿ, ತನಿಖೆ ಬೇಗ ಪೂರ್ಣಗೊ ಶಿಕ್ಷೆಯೂ ಆಗಲಿ.

9/15 ಅಂದರೆ ವಿಶ್ವಾದ್ಯಂತ ಹಣಕಾಸು ಕುಸಿತವಾಗಿ ತೀವ್ರ ಆರ್ಥಿಕ ಸಂಕಟಗಳನ್ನು ತಂದಿರುವ ಘಟನೆ ಸಂಭವಿಸಿ ಒಂದು ವರ್ಷವಾಗಿದೆ. ಆಳುವ ಮಂದಿ ಆಶಾವಾದ ಪ್ರದರ್ಶಿಸಿದರೂ ಎಲ್ಲೆಡೆ ನಿರಾಶಾಭಾವ ಇನ್ನೂ ಹರಡಿದೆ. ಮೊದಲು ಲಾಭಗಳು-ಆಮೇಲೆ ಜನಗಳು? ಎಂಬ ಬಂಡವಾಳಶಾಹಿ ತರ್ಕವನ್ನು ಕೈಬಿಟ್ಟು 'ಮೊದಲು ಜನಗಳು-ಆಮೇಲೆ ಲಾಭಗಳು? ಎಂಬ ಧೋರಣೆಯನ್ನು ಅನುಸರಿಸಿದರೆ ಮಾತ್ರವೇ ಜನಗಳ ಸಂಕಟ ಪರಿಹಾರ ಸಾಧ್ಯ.

ಪ್ರಧಾನ ಮಂತ್ರಿಗಳ ಮತ್ತು ಯೋಜನಾ ಆಯೋಗದ ಇಂತಹ ಆಶಾವಾದ ಭಾರತದ ಆರ್ಥಿಕ ವ್ಯವಸ್ಥೆಯನ್ನು ಅತಿರಂಜಿತಗೊಳಿಸಿ ಮಾಡಿರುವ ಅಂದಾಜು ಎಂದೇ ಹೇಳಬೇಕಾಗುತ್ತದೆ. ಈ ವರ್ಷ


ಜಾಗತಿಕ ಆರ್ಥಿಕ ಬಿಕ್ಕಟ್ಟು ಬಂಡವಾಳಶಾಹಿ ಆಕ್ರಮಣ

ವಿಶ್ವವಿಖ್ಯಾತ ಹಣಕಾಸು ದೈತ್ಯ ಲೆಹ್ಮಾನ್ ಬ್ರದರ್ಸ್ ಕುಸಿದು ಈ ಸಪ್ಟಂಬರ್ 15ಕ್ಕೆ ಒಂದು ವರ್ಷವಾಯಿತು. ಈ ಹಣಕಾಸು ಕಂಪನಿ 19ನೇ ಶತಮಾನದಲ್ಲಿ ಅಮೆರಿಕಾದ ಹಲವಾರು ಕಂಪನಿಗಳು ದಿವಾಳಿಯೆದ್ದು ಅಲ್ಲಿನ ಆರ್ಥಿಕವನ್ನು ನಡುಗಿಸಿದಾಗಲೂ ಜಗ್ಗಿರಲಿಲ್ಲ. ನಂತರ 1930ರ ದಶಕದಲ್ಲಿ ಇಡೀ ಜಗತ್ತು ಮಹಾಕುಸಿತದಿಂದ ತಲ್ಲಣಗೊಂಡಿದ್ದಾಗಲೂ ಅದನ್ನು ಎದುರಿಸಿ ನಿಂತಿತ್ತು. ಆದರೆ 2008ರಲ್ಲಿ ವಿಶ್ವದ ಎಲ್ಲೆಡೆ ಹಣಕಾಸು ಮಾರುಕಟ್ಟೆಗಳ ಕುಸಿತ ಈ ದೈತ್ಯ ಕಂಪನಿಯ ಕುಸಿತದಿಂದಲೇ ಆರಂಭವಾಯಿತು. ಬಂಡವಾಳಶಾಹಿಯ ಇತಿಹಾಸದಲ್ಲೇ ಕಂಡು ಕೇಳರಿಯದ ಅತಿ ಕೆಟ್ಟ ಆರ್ಥಿಕ ಹಿಂಜರಿತಕ್ಕೆ ನಾಂದಿಯಾದ ಕುಸಿತ ಇದು.

ಈ ಹಿಂಜರಿತದ ಭೀಕರ ಸ್ವರೂಪದ ಚಿತ್ರಣವನ್ನು ಸ್ವತಃ ವಿಶ್ವ ಬ್ಯಾಂಕ್ ಹೇಳಿಕೆಗಳೇ ಸಾರುತ್ತವೆ. 2009ನೆ ಇಸ್ವಿ ಎರಡನೇ ಮಹಾಯುದ್ಧದ ನಂತರ ಜಾಗತಿಕ ಉತ್ಪಾದನೆಯೇ ಇಳಿದ ಮೊದಲ ವರ್ಷ ಎಂದು ದಾಖಲಾಗುತ್ತದೆ ಎಂದು ಅದು ಹೇಳಿದೆ. ಈ ಮೊದಲು ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಪ್ರಮಾಣ ಹಿಂದೆ ಇದ್ದುದಕ್ಕಿಂತ 1.7ಶೇ.ದಷ್ಟು ಇಳಿಕೆ ಕಾಣಲಿದೆ ಎಂದು ಅದು ಅಂದಾಜು ಮಾಡಿತ್ತು. ಈಗ ಅದು 3ಶೇ.ದಷ್ಟು ಇಳಿಯುವ ಸಾಧ್ಯತೆಯಿದೆಯಂತೆ. ಈ ಹನ್ನೆರಡು ತಿಂಗಳಲ್ಲಿ ಚೀನಾ ಮತ್ತು ಭಾರತ ಬಿಟ್ಟು ಬೇರೆಲ್ಲಾ ಪ್ರಮುಖ ದೇಶಗಳ ಜಿಡಿಪಿ ಇಳಿಕೆ ಕಂಡಿದೆ. ಅಮೆರಿಕಾದ ಆರ್ಥಿಕ ವ್ಯವಸ್ಥೆಗೆ ಅಲ್ಲಿಯ ಸರಕಾರ 2.3 ಟ್ರಿಲಿಯನ್ ಡಾಲರುಗಳನ್ನು(ಸುಮಾರು 120 ಲಕ್ಷ ಕೋಟಿ ರೂ.ಗಳಷ್ಟು) ಸುರಿದರೂ ಅಲ್ಲಿಯ ಜಿಡಿಪಿ 2.6ಶೇ.ದಷ್ಟು ಇಳಿಯಿತು; ಅದೇ ರೀತಿ ಎಲ್ಲಾ ಜಿ-8 ದೇಶಗಳ ಅಂದರೆ ಶ್ರೀಮಂತ ದೇಶಗಳ ಜಿಡಿಪಿಯೂ ಇಳಿಯಿತು-ಜರ್ಮನಿಯದ್ದು 6.2ಶೇ., ಫ್ರಾನ್ಸ್‌ನದ್ದು 3ಶೇ., ಇಟೆಲಿ 5ಶೇ., ಜಪಾನ್ 6ಶೇ., ಬ್ರಿಟನ್ 4.2ಶೇ., ಕೆನಡಾ 2.3ಶೇ. ಮತ್ತು ರಶ್ಯಾ 6.5ಶೇ. ಇಳಿಕೆ ಕಂಡವು. ಚೀನಾದ ಮತ್ತು ಭಾರತದ ಜಿಡಿಪಿ ಏರಿಕೆ ದರ ಇಳಿದರೂ, ಅವು ಅನುಕ್ರಮವಾಗಿ 7.5ಶೇ. ತ್ತು 5.5ಶೇ.ದಷ್ಟು ಏರಿದವು. ಇತರ ಮೂಡಿ ಬರುತ್ತಿರುವ ದೇಶಗಳ ಆರ್ಥಿಕಗಳಲ್ಲೂ ಜಿಡಿಪಿ ಇಳಿದಿದೆ. ಬ್ರೆಜಿಲ್‌ನಲ್ಲಿ 1.3ಶೇ., ಮೆಕ್ಸಿಕೊದಲ್ಲಿ 7.3ಶೇ. ಮತ್ತು ಆಸಿಯಾನ್(ದಕ್ಷಿಣ ಪೂರ್ವ ಏಶ್ಯಾದ) ದೇಶಗಳಲ್ಲಿ 0.3ಶೇ. ಇಳಿಕೆ ಕಾಣ ಬಂದಿದೆ.

ನಿರಾಶಾದಾಯಕ ವಾತಾವರಣ

ವಿಶ್ವ ಬ್ಯಾಂಕ್ ಪ್ರಕಾರ ಸುಮಾರು 10 ಕೋಟಿ ಜನರು 2009ರಲ್ಲಿ ಬಡತನದಲ್ಲಿ ಸಿಲುಕಿರುತ್ತಾರೆ; 2015ರ ವೇಳೆಗೆ ಇನ್ನೂ 28ಲಕ್ಷ ಶಿಶುಗಳು ಸಾಯುತ್ತವೆ. ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಒ) ಈ ವರ್ಷ 5ಕೋಟಿಗೂ ಹೆಚ್ಚು ಮಂದಿ ನಿರುದ್ಯೋಗಿಗಳ ಸಾಲಿಗೆ ಸೇರುತ್ತಾರೆ ಎಂದು ಸಾರಿದೆ. ನಿಜವಾದ ಸಂಖ್ಯೆ ಖಂಡಿತಾ ಇದಕ್ಕಿಂತ ಇನ್ನೂ ಹೆಚ್ಚಿರುತ್ತದೆ. ಏಕೆಂದರೆ ಐಎಲ್‌ಒ ಅಂದಾಜುಗಳು ವಿವಿಧ ಸರಕಾರಗಳು ಒದಗಿಸುವ ಅಂಕಿ-ಅಂಶಗಳನ್ನೇ ಆಧರಿಸಿರುತ್ತವೆ. ಈ ಸರಕಾರಗಳಲ್ಲಿ ಹೆಚ್ಚಿನವು ಕೆಲಸ ಕಳಕೊಂಡು ದೇಶಕ್ಕೆ ಮರಳುವ ವಲಸೆ ಕಾರ್ಮಿಕರನ್ನು ಲೆಕ್ಕಕ್ಕೆ ತಗೊಳ್ಳುವುದಿಲ್ಲ. ಕೇವಲ ಅಮೆರಿಕಾದಲ್ಲೇ ನಿರುದ್ಯೋಗ ದರ ಅಧಿಕೃತವಾಗಿ 10 ಶೇ. ತಲುಪುತ್ತಿದೆ. ಅನಧಿಕೃತವಾಗಿ ಅದು 16ಶೇ. ಎಂದು



ಅಂದಾಜು ಮಾಡಲಾಗಿದೆ. ಅಲ್ಲಿ ನಿರುದ್ಯೋಗಿಗಳ ಸಂಖ್ಯೆ ಈಗ 70ಲಕ್ಷ ದಾಟಿದೆ.

ಎಲ್ಲೆಡೆ ನಿರಾಶಾ ಭಾವ ಹರಡಿದೆ. ಸಪ್ಟಂಬರ್ 15ರಂದು ಪ್ರಕಟಿಸಿದ ವಾಶಿಂಗ್ಟನ್-ಎಬಿಸಿ ಅಭಿಪ್ರಾಯ ಸಂಗ್ರಹದ ಪ್ರಕಾರ ಅಧ್ಯಕ್ಷ ಒಬಾಮಾರವರ ಆರ್ಥಿಕ ನಿರ್ವಹಣಾ ಪರಿಯ ಬಗ್ಗೆ ಸಮ್ಮತಿ ನೀಡುವ ಅಮೆರಿಕನ್ನರ ಪ್ರಮಾಣ 45ಶೇ. ಇದು ಫೆಬ್ರವರಿಯಲ್ಲಿ 62ಶೇ. ಇತ್ತು. ಸರಕಾರ ಕೊಡಮಾಡಿದ ಪಾರು ಯೋಜನೆಗಳು(ಬೇಲೌಟ್ ಪ್ಯಾಕೇಜುಗಳು) ಹಣಕಾಸು ಕಾರ್ಪೊರೇಟುಗಳಿಗೆ ತಮ್ಮ ಜಮಾಖರ್ಚನ್ನು ಸುಂದರಗೊಳಿಸಲು ಮಾತ್ರ ನೆರವಾಗಿವೆಯೇ ಹೊರತು ನಿಜವಾದ ಆರ್ಥಿಕವನ್ನು ಉತ್ತೇಜಿಸಲು, ಜನಗಳಿಗೆ ಉದ್ಯೋಗಾವಕಾಶ ನಿರ್ಮಿಸಲು ನೆರವಾಗಿಲ್ಲ ಎಂಬುದೀಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಏಕೆಂದರೆ ನಾವು ಈಗಾಗಲೇ ಗಮನಿಸಿದಂತೆ ಈ ಪ್ಯಾಕೇಜುಗಳು ಮೊದಲು ಜನತೆ, ಆಮೇಲೆ ಲಾಭ ಎಂಬುವ ಬದಲು ಮೊದಲು ಲಾಭ, ಆಮೇಲೆ ಜನಗಳು ಎಂದು ಹೊರಟಂತವುಗಳು. ಉದಾಹರಣೆಗೆ ಅಮೆರಿಕಾದ ಶೇರು ಮಾರುಕಟ್ಟೆಯಲ್ಲಿ ಕುಸಿದ ಎರಡು ದೈತ್ಯ ಹಣಕಾಸು ಸಂಸ್ಥೆಗಳಾದ ಗೋಲ್ಡ್ ಮನ್‌ಸ್ಯಾಕ್ಸ್ ಮತ್ತು ಜೆಪಿ ಮಾರ್ಗನ್ ಚೇಸ್ ಎಂಬ ಕಂಪನಿಗಳನ್ನೇ ತಗೊಳ್ಳಿ. ಅವು ಈ ಬೇಲೌಟ್ ಪ್ಯಾಕೇಜುಗಳ ಔತಣ ಉಂಡೇ ಮೇಲೆದ್ದು ನಿಂತಿವೆ- ಪಾರು ಯೋಜನೆಯ ಹೆಸರಿನಲ್ಲಿ ತೆರಿಗೆದಾರರ ಕೋಟ್ಯಂತರ ಡಾಲರುಗಳನ್ನುಂಡು ಜೆಪಿ ಮಾರ್ಗನ್ ಚೇಸ್ 2009ರ ಎಪ್ರಿಲ್- ಜೂನ್ ಅವಧಿಯಲ್ಲಿ 270ಕೋಟಿ ಡಾಲರುಗಳ ಲಾಭ ದಾಖಲಿಸಿದೆ.

ಆಧಾರವಿಲ್ಲದ ಆಶಾವಾದ

ಈ 9/15 ವಾರ್ಷಿಕದ ಸಂದರ್ಭದಲ್ಲಿ ಈ ಬಿಕ್ಕಟ್ಟು ಅನಾವರಣಗೊಂಡ ಪರಿಯನ್ನು ತೋರಿಸ ಪ್ರಯತ್ನಿಸುವ ಹಲವಾರು ಪುಸ್ತಕಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಒಂದು ಪುಸ್ತಕ ಬಂಡವಾಳಶಾಹಿಯ ಇಡೀ ಚರಿತ್ರೆಯಲ್ಲಿ ಸಂಭವಿಸಿದ ವ್ಯಾಪಾರೀ ಚಕ್ರಗಳ ವಿಶ್ಲೇಷಣೆ ಮಾಡುತ್ತದೆ. ಒಂದು ಸರಾಸರಿ ಬಿಕ್ಕಟ್ಟಿನ ನಂತರ ಆಸ್ತಿಗಳ ಬೆಲೆಗಳು ತೀವ್ರವಾಗಿ ಬೀಳುತ್ತವೆ, ನಿಜವಾದ ವಸತಿ ಬೆಲೆಗಳು ಆರು ವರ್ಷಗಳ ಕಾಲ ಸರಾಸರಿ 36ಶೇ. ದಷ್ಟು ಬೀಳುತ್ತವೆ, ಶೇರು ಬೆಲೆಗಳು ಸರಾಸರಿ ಮೂರೂವರೆ ವರ್ಷಗಳ ಕಾಲ 56ಶೇ.ದಷ್ಟು ಬೀಳುತ್ತವೆ ಎಂದು ಅದು ತೋರಿಸುತ್ತದೆ. ನಿರುದ್ಯೋಗ ಈ ಚಕ್ರ ಕೆಳಮುಖವಾಗಿರುವಾಗ ಏಳು ಶೇಕಡಾದಷ್ಟು ಏರುತ್ತದೆ. ಇದು ಸರಾಸರಿ ನಾಲ್ಕು ವರ್ಷ ಇರುತ್ತದೆ. ಸರಕಾರದ ಸಾಲ 86ಶೇ. ಏರುತ್ತದೆ. ಜಿಡಿಪಿ ಸರಾಸರಿ 9ಶೇ.ದಷ್ಟು ಇಳಿಯುತ್ತದೆ. ಇದು ಬಿಕ್ಕಟ್ಟಿನ ಮೊದಲಿದ್ದ ಸ್ಥಿತಿಗೆ ಮರಳಲು ಸಾಮಾನ್ಯವಾಗಿ ಹತ್ತು ವರ್ಷ ಹಿಡಿಸುತ್ತದೆ. ಇದು ಒಂದು 'ಸರಾಸರಿ' ಬಿಕ್ಕಟ್ಟಿನ ಇತಿಹಾಸ. ಆದರೆ ನಾವೀಗ ನೋಡುತ್ತಿರುವುದು 'ಸರಾಸರಿ' ಗಿಂತ ಕೆಟ್ಟದಾಗಿರುವ ಒಂದು ಬಿಕ್ಕಟ್ಟನ್ನು. ಇಂತಹ ಸನ್ನಿವೇಶದಲ್ಲಿ ಜಾಗತಿಕ ಆರ್ಥಿಕದ ಪುನರುಜ್ಜೀವನವಾಗುವ ಲಕ್ಷಣಗಳು ಕಾಣುತ್ತಿವೆ ಎನ್ನುವ ವಿಶ್ವಾಸ ಒಂದು ಮೊದ್ದುತನವಾಗುತ್ತದೆ.

ಭಾರತದ ಬೆಳವಣಿಗೆ ದರ 8ಶೇ.ದಿಂದ 5.5ಶೇ.ಕ್ಕೆ ಜಾರಿತು. 2009ರ ಮೊದಲ ಮೂರು ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ದರ ಕೇವಲ 0.3ಶೇ. ಹಿಂದಿನ ಅಂದರೆ 2008ರ ಕೊನೆಯ ಮೂರು ತಿಂಗಳಲ್ಲಿ ಅದು 6ಶೇ. ಬೆಳವಣಿಗೆ ದಾಖಲಿಸಿತ್ತು. ಭಾರತದ ರಫ್ತುಗಳ ಬೆಳವಣಿಗೆ ಸಪ್ಟಂಬರ್ 2008ರಲ್ಲಿ 10.4 ಶೇ.ದಷ್ಟಿದ್ದರೆ, 2009ರ ಮಾರ್ಚ್ ಅಂತ್ಯದ ವೇಳೆಗೆ ಅದು ಬೆಳವಣಿಗೆಯ ಬದಲು 33.2ಶೇ. ಇಳಿಕೆ ಕಂಡಿತು. ರಫ್ತು ವಲಯದ ಸಂಘಟಿತ ಕ್ಷೇತ್ರದಲ್ಲೇ ಈಗಾಗಲೇ ಸುಮಾರು 12 ಲಕ್ಷ ಉದ್ಯೋಗ ನಷ್ಟವಾಗಿದೆ. ಅಸಂಘಟಿತ ವಲಯದಲ್ಲಂತೂ ಇನ್ನೂ ಹೆಚ್ಚಿನ ಉದ್ಯೋಗ ನಾಶವಾಗಿರುತ್ತದೆ. ಇದಲ್ಲದೆ ವಿದೇಶಗಳಿಂದ, ಮುಖ್ಯವಾಗಿ ಕೊಲ್ಲಿ ದೇಶಗಳಿಂದ ಉದ್ಯೋಗ ಕಳಕೊಂಡು ಲಕ್ಷಾಂತರ ಜನ ಹಿಂದಿರುಗುತ್ತಿದ್ದಾರೆ.

'ಉತ್ತೇಜನ' ಕಾರ್ಪೊರೇಟ್‌ಗಳಿಗಷ್ಟೇ

ಜಗತ್ತಿನ ಇತರೆಡೆಗಳಂತೆ ಭಾರತದಲ್ಲೂ ಸರಕಾರ ಪ್ರಕಟಿಸಿದ ಉತ್ತೇಜಕ ಪ್ಯಾಕೇಜುಗಳು ದೊಡ್ಡ ಕಂಪನಿಗಳಿಗೆ ಬಿಕ್ಕಟ್ಟಿನಿಂದ ಹೊರ ಬರಲು ನೆರವಾಗಿದವೆಯೇ ಹೊರತು ನಿಜವಾದ ಆರ್ಥಿಕದಲ್ಲಿ ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಾವಕಾಶ ನಿರ್ಮಾಣಕ್ಕೆ ಉತ್ತೇಜನೆಯಾಗಿಲ್ಲ; ಜಾಗತಿಕ ಆರ್ಥಿಕ ಹಿಂಜರಿತದ ನಡುವೆಯೂ ಭಾರತದ ಆರ್ಥಿಕ ಚೈತನ್ಯಹೀನವಾಗದಿದ್ದರೆ ಅದಕ್ಕೆ ಕಾರಣ ಯುಪಿಎ-1 ಸರಕಾರ ಇನ್ನಷ್ಟು ಹಣಕಾಸು 'ಉದಾರೀಕರಣ'ವನ್ನು ತರದಂತೆ ಎಡಪಕ್ಷಗಳು ತಡೆ ಹಾಕಿದ್ದು ಮತ್ತು ಆರನೇ ವೇತನ ಆಯೋಗ ಹಾಗೂ 15ನೇ ಸಾರ್ವತ್ರಿಕ ಚುನಾವಣೆಗಳಿಂದಾಗಿ ಆರ್ಥಿಕದಲ್ಲಿ ಅಪಾರ ಹಣದ ಹರಿವು ಉಂಟಾದದ್ದು. ಇವುಗಳಲ್ಲಿ ಎರಡನೆಯದ್ದು ಪ್ರತಿ ವರ್ಷ ಸಂಭವಿಸುವಂತದ್ದಲ್ಲ, ಒಮ್ಮೆ ಬಂದು ಹೋಗುವಂತ ಖರ್ಚು. ಆದ್ದರಿಂದ ಮುಂದೆಯೂ ಹೆಚ್ಚಿನ ಉತ್ಪಾದನಾ ಮಟ್ಟವನ್ನು ಕಾಯ್ದುಕೊಳ್ಳಲು ಇದು ನೆರವಾಗದು. ಆಂತರಿಕ ಬೇಡಿಕೆಯನ್ನು ವಿಸ್ತರಿಸಿದರೆ ಮಾತ್ರವೇ ಇದು ಸಾಧ್ಯ. ಹಾಗಾಗಬೇಕಾದರೆ ಸಾರ್ವಜನಿಕ ಹೂಡಿಕೆಯ ಪ್ರಮಾಣ ಅಪಾರವಾಗಿ ಹೆಚ್ಚಬೇಕು, ಒಂದು ಜಿಗಿತವನ್ನೇ ಕಾಣಬೇಕು. ಇದರಿಂದ ದೇಶದಲ್ಲಿ ಬಹಳ ಆವಶ್ಯಕವಾಗಿರುವ ಆರ್ಥಿಕ ಮತ್ತು ಸಾಮಾಜಿಕ ಮೂಲರಚನೆಗಳನ್ನು ಕಟ್ಟಲು ಹಾಗೂ ಹೊಸ ಉದ್ಯೋಗಾವಕಾಶಗಳನ್ನು ನಿರ್ಮಿಸಲು

ಪುಟ 15ಕ್ಕೆ

'6000 ರೂ. ಸಮಾನ ಕನಿಷ್ಟ ಕೂಲಿ ಕೊಡಿ'

ಕೂಲಿಗೆ ಬದಲು ಬಿಜೆಪಿ ಸರ್ಕಾರದ ಲಾಠಿ ಏಟು



...ಲಕ್ಷಾಂತರ ಕಾರ್ಮಿಕರು ಹೋರಾಟದ ಕಣಕ್ಕೆ















ಬೆಂಗಳೂರಿನಲ್ಲಿ ದೌರ್ಜನ್ಯ ವಿರೋಧಿ ಪ್ರತಿಭಟನೆ







ವಿ.ಜೆ.ಕೆ. ನಾಯರ್ ಮಾತನಾಡುತ್ತಿರುವುದು




ಮುಖ್ಯಮಂತ್ರಿಗಳ ಪರವಾಗಿ ಬಂದ ಬಿ.ಎನ್.ಬಚ್ಚೇಗೌಡ

ಅಸಂಘಟಿತ ಕಾರ್ಮಿಕರ ಹೋರಾಟ

ಇವರೇನು ಹೆಲಿಕಾಪ್ಟರ್ ಕೇಳಿರಲಿಲ್ಲ...ಆದರೆ

ಹಾರಾಡಲು ಹೆಲಿಕಾಪ್ಟರ್ ವಿಮಾನ ಕೇಳಲಿಲ್ಲ. ತೂರಾಡಲು ಬಾಟಲಿ, ಬುರುಡೆ ಕೇಳಲಿಲ್ಲ. ಈ ಕಾರ್ಮಿಕರು ಹಗಲೂ, ಹಲವರು ರಾತ್ರಿಯೂ ಕೂಡ ಮೈ ಮುರಿದು ದುಡಿಯುವ ಶ್ರಮಿಕರು. ಇವರು



ಕೇಳಿದ್ದಾದರೂ ಏನು?

ಮನುಷ್ಯರಂತೆ ಮರ್ಯಾದೆಯಾಗಿ ಬಾಳಲು ಅಗತ್ಯವಾದ ಸಮಾನ ಕನಿಷ್ಠ ಕೂಲಿ. ತಿಂಗಳಿಗೆ 6000 ರೂಪಾಯಿ. ರೇಷನ್ ಕಾರ್ಡು, ಅದರಲ್ಲಿ ಅಕ್ಕಿ ಗೋಧಿ, ಎಣ್ಣೆ, ಸಕ್ಕರೆ, ವಾಸ ಮಾಡಲು ಮನೆ, ಕಾರ್ಮಿಕ ಕಾನೂನುಗಳ ಜಾರಿ, ಇಂಥವೇ ಎಲ್ಲ. ಈ ಜನ ಪಾಪ ಇನ್ನೇನು ತಾನೇ ಕೇಳಿಯಾರು? !!

ಉಹುಂ ಸಿದ್ಧವಿಲ್ಲ. ಈ ಸರ್ಕಾರ ಬಿಜೆಪಿ ನೇತೃತ್ವದ ಸರ್ಕಾರ. ಇದರ ಜುಟ್ಟು ಆರೆಸ್ಸೆಸ್ಸಿನ ಕೈಯಲ್ಲಿದೆ. ಇಂಥ ಸರ್ಕಾರ ಕೇಳದೇ ಇದ್ದರೂ ಜಾತಿ ಮಠಗಳಿಗೆ ಜನರ ತೆರಿಗೆ ಹಣವನ್ನು ಮೊಗೆದು, ಮೊಗೆದು ಮಠಾಧೀಶರ ಜಾತಿವಾದಿ ಮುಖಂಡರ ಮಡಿಲಿಗೆ ಸುರಿಯುತ್ತದೆ. ಆದರೆ ಕಾರ್ಮಿಕರಿಗೆ ಕೊಡಲು ಸಿದ್ಧವಿಲ್ಲ. ತಾನು ಕೊಡುವುದು ಬೇಡ, ಕೊಡಬೇಕಾದ ಕರ್ತವ್ಯವಿರುವ ಮಾಲಿಕ ವರ್ಗದಿಂದ ಕೊಡಿಸಲು ಸಿದ್ಧವಿದೆಯೇ? ಉಹುಂ ಇಲ್ಲ, ಸಿದ್ಧವಿಲ್ಲ.

ಕನಿಷ್ಠ ಕೂಲಿ ಕೇಳಿದರೆ ಈ ಸರ್ಕಾರ ಕೊಟ್ಟಿದ್ದೇನು. ಕಾರ್ಮಿಕರ ಎದೆಯ ಮೇಲೆ ಪೊಲೀಸರ ಬೂಟಿನೇಟು.

ಮಹಿಳೆಯನ್ನಲ್ಲಿಲ್ಲ. ಪುರುಷ ಪೊಲೀಸರೇ ನುಗ್ಗಿ ಅಟ್ಟಾಡಿಸಿ ಗುಂಪುಗೂಡಿಕೊಂಡು ಲಾಠಿ ಬೀಸುತ್ತಾರೆ. ಸೀರೆ ಹಿಡಿದು ಎಳೆಯುತ್ತಾರೆ. ಮುಖಂಡರನ್ನು ಹಿಡಿದು ದಬ್ಬುತ್ತಾರೆ. ಲಾಠಿಯಿಂದ ಬಾರಿಸುತ್ತಾರೆ.... ಕಾರ್ಮಿಕರೆಂದರೆ ಕೇಳುವುದೇ ಬೇಡ, ಅಟ್ಟಿಸಿಕೊಂಡು ಬಂದು ಬಡಿಯುತ್ತಾರೆ.

ಅದು ಗುಲ್ಬರ್ಗಾ ನಗರ. ಕಾರ್ಪೊರೇಷನ್ ಉದ್ಯಾನದಿಂದ 3 ರಿಂದ 4 ಸಾವಿರ ಜನ ಕಾರ್ಮಿಕರು ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿಗೆ ಬರುತ್ತಾರೆ. ಮನವಿ ಕೊಡಲು ಡಿ.ಸಿ. ಇಲ್ಲ. ಅವರು ಅಲ್ಲಿರಬೇಕಿತ್ತು. ಮೊದಲೇ ಅವರಿಗೆ ಮನವಿ ಮಾಡಲಾಗಿತ್ತು. ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಮನವಿ ಕೊಡಿ ಎನ್ನುತ್ತಾರೆ. ಜಿಲ್ಲಾಧಿಕಾರಿ ಬಂದು ಮನವಿ ತೆಗೆದುಕೊಳ್ಳಲಿ ಎಂದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮ ನಯನ, ಮಾರುತಿ ಮಾನ್ಪಡೆಯವರ ಕುತ್ತಿಗೆಗೆ ಕೈಹಾಕುವುದಾ? ಮಾನ್ಪಡೆಯವರ ರಕ್ಷಣೆಗೆ ಬಂದ ಚಿಂಚೋಳಿ ತಾಲ್ಲೂಕು ಪಂಚಾಯತ್ ಸದಸ್ಯ ಶರಣಬಸಪ್ಪ ಮಂಶೆಟ್ಟಿಗೆ ಎಸ್.ಪಿ.ಯವರ ಅಂಗರಕ್ಷಕ ಬಂದೂಕಿನ ಹಿಂಬದಿಯಿಂದ ಹಣೆಗೆ ಬಡಿಯುವುದಾ? ಪೊಲೀಸ್ ಬಂಧನದಿಂದ ಮಾನ್ಪಡೆಯವರನ್ನು ರಕ್ಷಿಸಲು ಹೋದ ಬಿಸಿಯೂಟ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಕಲ್ಪನಾ, ಗೌರಮ್ಮ ಪಾಟೀಲ್ ಎಲ್ಲರಿಗೂ ಬಡಿತ. ಮಹಿಳಾ ಪೊಲೀಸರೇ ಇಲ್ಲ ಗಂಡಸರೇ ಬಡಿಯುತ್ತಾ, ಹಿಡಿದು ಎಳೆದಾಡುತ್ತಾರೆ. ಸೀರೆ ಹಿಡಿದೆಳೆಯುವುದಕ್ಕೂ ಹೇಸುವುದಿಲ್ಲ. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮಂಜೂರು ಪಟೇಲ್ ಅವರ ಎದೆ ಮೇಲೆ ಗುದ್ದಿರುವ ಗುದ್ದಿಗೆ ಅವರ ಉಸಿರಾಟವೇ ನಿಂತಂತಾಗಿ ಪ್ರಜ್ಞೆ ತಪ್ಪಿ ಹೋಗಿದೆ. ಗಂಟೆಗಟ್ಟಲೆ ಅವರು ಚಿಕಿತ್ಸೆ ಇಲ್ಲದೇ ಜನರನ್ನು ಬಂಧಿಸಿದ್ದಾರೆ.


ಅಟ್ಟಾಡಿಸಿ ಚಚ್ಚಿದರು

ರಾಯಚೂರಿನಲ್ಲಿ ನಡೆದದ್ದಾದರೂ ಏನು? ಸುಮಾರು 1500 ರಿಂದ 2000 ಕಾರ್ಮಿಕರು, ಹೆಚ್ಚಿನವರು ಮಹಿಳೆಯರು. ಪಬ್ಲಿಕ್ ಗಾರ್ಡನ್‌ನಿಂದ ಮೆರವಣಿಗೆ ಬಂದಿದ್ದಾರೆ. ಜಿಲ್ಲಾಧಿಕಾರಿಗಳ ಕಛೇರಿಯ ಆವರಣ ದೊಳಕ್ಕೆ ಪ್ರತಿಭಟನೆಕಾರರನ್ನು ಬಿಡುವುದಿಲ್ಲ ಎಂದರೇನು? ಪ್ರತಿಭಟನಾಕಾರರು ಒಂದಷ್ಟು ಜನ ಮತ್ತೊಂದು ಗೇಟಿನ ಮೂಲಕ ಒಳಗೆ ಹೋಗಲು ಯತ್ನಿಸಿದ್ದಾರೆ. ಇದೊಂದು ದೊಡ್ಡ ಅಪರಾಧ. ತಗೋ ಲಾಠಿ ಪ್ರಹಾರ. ಸಿಪಿಐ(ಎಂ) ರಾಯಚೂರು ಜಿಲ್ಲಾ ಕಾರ್ಯದರ್ಶಿ ಕರಿಯಪ್ಪ ಅಚ್ಚೊಳ್ಳಿ-ಅವರೊಬ್ಬ ಅಂಗವಿಕಲರು ಎಂಬುದನ್ನು ಪರಿಗಣಿಸದೇ ಎಳೆದಾಡಿ ಬಡಿದಿದ್ದಾರೆ. ಕೆ.ಜಿ. ವೀರೇಶ್, ಸಿಂಧನೂರು ಹಮಾಲರ ಸಂಘದ ಮುಖಂಡ ವೆಂಕಪ್ಪ, ಮಲ್ಲಯ್ಯ ಜಾಲಹಳ್ಳಿ, ಸಾಬಣ್ಣ ದೇವನೂರು, ನರಸಿಂಹಲು, ಅಂಬರೀಷ್, ಭೀಮಣ್ಣ, ಸಿದ್ದಪ್ಪ ಪೂಜಾರಿ ಎಲ್ಲರ ಮೇಲೆ ಬಡಿತ, ಬಿಜೆಪಿ ಸರ್ಕಾರದ ಪೊಲೀಸರ ಲಾಠಿ ನರ್ತನ ವೆಂಕಪ್ಪಗೆ ಕೈ ಮೂಳೆ ಮುರಿದಿದೆ. ದೇವದುರ್ಗದ ಭೀಮಣ್ಣಗೆ ಮೊಣಕಾಲು ಮುರಿದಿದೆ. ನರಸಿಂಹಲು ಮೂರ್ಛೆ ಹೋಗಿದ್ದರು. 34 ಜನರ ಮೇಲೆ ಮೊಕದ್ದಮೆ ಹೂಡಿ ಜೈಲಿಗೆ ಅಟ್ಟಲಾಗಿದೆ. ಮಹಿಳಾ ಪೊಲೀಸರಿಲ್ಲ. ಪುರುಷ ಪೊಲೀಸರೇ ಮಹಿಳಾ ಕಾರ್ಮಿಕರನ್ನು ಅಟ್ಟಾಡಿಸಿದ್ದಾರೆ. ಎಳೆದಾಡಿದ್ದಾರೆ. ಹೋರಾಟದಲ್ಲಿ ಶೇಕಮ್ಮ ತೀವ್ರವಾದ ಪೆಟ್ಟು ತಿಂದಿದ್ದಾರೆ.




'ಅರೆಸ್ಟ್' ಎಂದರೆ ಬಡಿ ಎಂದರ್ಥ

ಹಾಸನ ಹೇಮಾವತಿ ಪ್ರತಿಮೆ ಬಳಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿಗೆ ಬಂದಿದೆ. ಜಿಲ್ಲಾಧಿಕಾರಿ ಇರಲಿಲ್ಲ. ಸ್ಥಾನಿಕ ಅಧಿಕಾರಿ ಬದಲಿಗೆ ಜಿಲ್ಲಾಧಿಕಾರಿಗಳೇ ಮನವಿ



ತೆಗೆದುಕೊಳ್ಳಲಿ ಎಂದರೆ ಆಳುವ ಜನಕ್ಕೆ ಸಿಟ್ಟೋ ಸಿಟ್ಟು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ 'ಅರೆಸ್ಟ್' ಅಂದರೆ ಪೊಲೀಸರು ಲಾಠಿ ಬೀಸುತ್ತಾರೆ. ಏನು ಭಾಷೆ. ಯಾವ ಸಾಂಕೇತಿಕ ರಹಸ್ಯ ಬಾಷೆ ಇದು. 10 ಜನರಿಗೆ ಗಾಯಗಳಾಗುತ್ತವೆ. ಅದರಲ್ಲಿ ಮೂವರಿಗೆ ಗಂಭೀರವಾದ ಗಾಯಗಳೇ ಆಗಿವೆ. ವಾಟೇಹಳ್ಳಿ



ಕೊಪ್ಪಳ

ತನಿಯುಪ್ಪ ಅವರ ಕೈ ಮುರಿದಿದೆ.
ಸೋಮೇಗೌಡ ಬೆರಳು ಮುರಿದಿದೆ. ಬಂ
ಜನರಲ್ಲಿ 26 ಜನರ ಮೇಲೆ ಮೊಕದ್ದಮೆ ಹೂ
ಪೊಲೀಸರು. ಬಂಧಿತರೆಲ್ಲರಿಗೆ ಮದ್ಯಾಹ್ನ ಬ
ತಿನ್ನಲು ಕೊಟ್ಟದ್ದು ಬಿಟ್ಟರೆ ನ್ಯಾಯಾ
ಹಾಜರುಪಡಿಸುವುದಾಗಿ ಕರೆದುಕೊಂಡು ಹೊ
ಊಟ, ನೀರು ಕೊಡದೇ ಕಡೆಗೆ
ವಿಸರ್ಜನೆಗೂ ಅವಕಾಶ ಕೊಡದೇ ಪೊ
ವ್ಯಾನಿನಲ್ಲೇ
ಹಾಕಿದ್ದಾರೆ.
ನ್ಯಾಯಾದಿ
ರಜೆ
ಅರಸಿಕೆರೆಗೆ
ಅವೋಲೆ
ಸಾಲದ
ಕೆ.ಆರ್.ನ
ಜ
ಕೊಂಡೊಯ್ದ

ಈ 26 ಜನರಲ್ಲಿ 15 ಜನರಿಗೆ ಸಾಕಷ್ಟು ಪೆ
ಬಿದ್ದಿವೆ. ಮುಖಂಡರು ಗುಳಾರ ಸುಕು
ಧರ್ಮೇಶ್, ವಾಸುದೇವ ಕಲ್ಕೆರೆ ಪ್ರಧ್ವಿ, ಗ
ಅರವಿಂದ್ ಮುಂತಾದವರಿಗೆಲ್ಲಾ ಸ
ಪೆಟ್ಟಾಗಿದೆ. ಮಂಜಮ್ಮ ಶಾಂತಲಕ್ಷ್ಮಿ ಬೇ
ಪುಷ್ಪ, ಇಂದಿರಮ್ಮ ಲತಾ ಮುಂತಾ
ಹೋರಾಟದಲ್ಲಿ ಮುಂಚೂಣಿ ಪಾತ್ರ ವಹಿ
ಸಾಕಷ್ಟು ಪೆಟ್ಟುಗಳನ್ನು ತಿಂದಿದ್ದಾರೆ.

ಮಂಡ್ಯದಲ್ಲಿ ಸಿಲ್ವರ್ ಜ್ಯೂಬಿಲಿ ಪಾರ್ಕ
ಸುಮಾರು 2000 ಕಾರ್ಮಿಕರು, ಅದ
ಹೆಚ್ಚಿನವರು ಮಹಿಳಾ ಕಾರ್ಮಿಕರು
ಮೆರವಣಿಗೆಯಲ್ಲಿ ಬಂದರೆ, ಜಿಲ್ಲಾಧಿ
ಕಛೇರಿಯ ಹತ್ತಿರಕ್ಕೆ ಬರಲು ಬಿಡ
ಶಾಂತಿಯುತವಾಗಿ ಪ್ರತಿಭಟನೆ ನಡೆಸ
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ
ಸದಸ್ಯರಾದ ಜಿ.ಎನ್. ನಾಗರಾಜ್
ತಳ್ಳಾಡಿದ್ದಾರೆ. ಜಿಲ್ಲಾ ಮುಖಂಡರು
ಜಿ.ರಾಮಕೃಷ್ಣ, ಟಿ.ಎಲ್.ಕೃಷ್ಣೇಗೌಡ,
ಮಹದೇವಮ್ಮ ಮುಂತಾದವರ
ಬಂಧಿಸಿದ್ದಾರೆ. ಜನರನ್ನು ಚದುರಿಸಲು ಲಾಠಿ
ನಡೆಸಿ 106 ಜನರನ್ನು ಬಂಧಿಸಿದ್ದಾರೆ. ಪೊ
ಅತಿರೇಕದ ವರ್ತನೆ, ಅಕ್ರಮ ಬಂಧನ ಪ್ರ
ಜನರು ಡಿವೈಎಸ್‌ಪಿ ಕಛೇರಿಗೆ ಮುತ್ತಿಗೆ
ನಂತರ ಬಂಧಿತರನ್ನು ಬಿಡುಗಡೆ ಮಾಡಿದ
ರಿಂದ 12 ಜನರಿಗೆ ಆಸ್ಪತ್ರೆಯಲ್ಲಿ
ಪಡೆಯಬೇಕಾದಷ್ಟು ಪೆಟ್ಟಾಗಿದೆ.

ಬೃಹತ್ ಸಭೆ

ಬೆಳಗಾಂನಲ್ಲಿ ಸುಮಾರು 50
ಪಾಲ್ಗೊಂಡ ಬೃಹತ್ ಮೆರವಣಿಗೆ
ಹಮಾಲಿ, ಅಂಗನವಾಡಿ, ಅಕ್ಷರದಾ
ಗ್ರಾಮ ಪಂಚಾಯತ್ ನೌಕರರು
ಕಾರ್ಮಿಕರು ಇಂಡಾಲ್‌ಕೋ
ಕಾರ್ಮಿಕರು, ಖಾಯಂ ಕಾ
ಉಗಾರ್, ರಾಯಬಾಗ್, ಸ
ಕಾರ್ಮಿಕರು ಹಿಂದೂಸ್ತಾನ್

ಮುಂತಾದ ಕಾರ್ಖಾನೆಗಳ ಕಾರ್ಮಿಕರು ಸೇರಿ ಪ್ರಮುಖ ಬೀದಿಗಳಲ್ಲಿ ಐಕ್ಯ ರ್‍ಯಾಲಿ ನಡೆದಿದೆ. 33 ಮೀಟರ್ ಉದ್ದದ ವಿಶೇಷ ಬ್ಯಾನರ್‌ನೊಂದಿಗೆ ನಡೆದ ಪ್ರತಿಭಟನೆಯ ನೇತೃತ್ವವನ್ನು ವಿ.ಪಿ.ಕುಲಕರ್ಣಿ, ಮಹಾಂತೇಶ್, ಸಿಐಟಿಯು ಜಿಲ್ಲಾ ಸಮಿತಿಯ ಗೌರವಾಧ್ಯಕ್ಷರಾದ, ಕಾರಾಡೆ, ಸುಜಾತ, ದೊಡ್ಡಪ್ಪ ಪೂಜಾರಿ, ಕಾಂಬ್ಳೆ, ಗೈಬು ಮುಖಂಡರುಗಳಾದ ಗಿರೀಶ್ ಶೆಟ್ಟಿ ಮುಂತಾದವರು ವಹಿಸಿದ್ದರು. ಬೆಳಗಾಂ ಜಿಲ್ಲೆ ಜಿಲ್ಲಾಧಿಕಾರಿಗಳು ಹಾಗೂ ಕಾರ್ಮಿಕ, ಖಜಾನೆ, ಜಿಲ್ಲಾ ಪಂಚಾಯತ್ ಸಿ.ಇ.ಓ ಶಿಕ್ಷಣ ಇಲಾಖೆಯ ಪ್ರತಿನಿಧಿ ಮುಂತಾದವರೊಂದಿಗೆ ಕಾರ್ಮಿಕರ ಸಭೆ ನಡೆದಿದೆ. ಬಿಸಿಯೂಟ, ಗ್ರಾಮ ಪಂಚಾಯ್ತಿ, ಹಮಾಲಿ, ಬೀಡಿ ಕಾರ್ಮಿಕರ ಹಲವು ಸ್ಥಳೀಯ ಬೇಡಿಕೆಗಳ ಈಡೇರಿಕೆಗೆ ನಿರ್ಧಾರ ಪ್ರಕಟಿಸಲಾಗಿದೆ. ಅಂಗನವಾಡಿ ಗಳಿಗೆ ಸರ್ವ ವೇತನ ಬಾಕಿ ಬಿಡುಗಡೆ ಮಾಡಲಾಗಿದೆ. ಖಾಸಗೀಕರಣ ನಿರ್ಧಾರ ರದ್ದು ಮಾಡುವುದಾಗಿ



ಘೋಷಿಸಲಾಗಿದೆ.

ಬೆಂಗಳೂರಿನಲ್ಲಿ ಸುಮಾರು 100 ಜನ ಕಟ್ಟಡ, ಆಟೋ, ಅಂಗನವಾಡಿ, ಗ್ರಾಮ ಪಂಚಾಯತಿ ನೌಕರರು ಭಾಗವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರಸನ್ನಕುಮಾರ್, ಕೆ.ಎನ್.ಉಮೇಶ್, ಜಿಲ್ಲಾ ಅಧ್ಯಕ್ಷರಾದ ಹೆಚ್.ಎನ್.ಗೋಪಾಲಗೌಡ, ಉಪಾಧ್ಯಕ್ಷರಾದ ಮೀನಾಕ್ಷಿ ಸುಂದರಂ ಮುಂತಾದವರು ಮಾತನಾಡಿದರು. 200 ಜನರನ್ನು ಬಂಧಿಸಿ ಆಡುಗೋಡಿ ಪೊಲೀಸ್ ಠಾಣೆಗೆ ಕಳುಹಿಸಲಾಯಿತು.

ಮೈಸೂರು ಜಿಲ್ಲೆಯಲ್ಲಿ 4 - 5 ಸಾವಿರ ಜನರ ಪ್ರತಿಭಟನೆ ನಡೆಸಿದ್ದಾರೆ. ಸಭೆಯಲ್ಲಿ ಬಾಲಕೃಷ್ಣ ಶೆಟ್ಟಿ, ಬಸವರಾಜು, ಸುನಂದ, ಜಯರಾಂ, ಬಾಲಾಜಿ, ಜಗದೀಶ, ಕುಮಾರ್ ಮಾತನಾಡಿದ್ದಾರೆ. [illegible] ಸಮಸ್ಯೆಗಳನ್ನು ಬಗೆಹರಿಸುವುದಾಗಿ ತಿಳಿಸಿದ್ದಾರೆ. ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯತಿ, [illegible]

ಟೈರ್ಸ್, ಕಾರ್ಮಿಕರು ಹೋಟೆಲ್, ಟೆಕ್ಸ್‌ಟೈಲ್ ಕಾರ್ಮಿಕರು ಭಾಗವಹಿಸಿದ್ದರು.


ಚಾಮರಾಜನಗರ ದಲ್ಲಿ 1000 ಜನ ಅಂಗನವಾಡಿ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಸುಜಾತ, ನಾಗಲಾಂಬಿಕಾ ಮತ್ತು ಸೋಮುರವರು ನೇತೃತ್ವ ವಹಿಸಿದ್ದಾರೆ.

ಹಾವೇರಿ ಯಲ್ಲಿ 800 ಜನ ಗ್ರಾಮ ಪಂಚಾಯಿತಿ, ಹಮಾಲಿ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿ ಜಿಲ್ಲಾಧಿಕಾರಿ ಗಳಿಗೆ ಮನವಿ ಸಲ್ಲಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ 500 ಜನ ಗ್ರಾಮ ಪಂಚಾಯತಿ, ಬಿ.ಎಸ್.ಎಲ್.ಎಲ್ ಗುತ್ತಿಗೆ ಕಾರ್ಮಿಕರು, ಅರಣ್ಯ ಇಲಾಖೆ ದಿನಗೂಲಿ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಪ್ರತಿಭಟನೆ ನಡೆಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ 3000 ಜನ ಅಂಗನವಾಡಿ, ಬಿಸಿಯೂಟ, ಹಮಾಲಿ, ಗ್ರಾಮ ಪಂಚಾಯತಿ, ಆಟೋ ಚಾಲಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಲಾಠಿ ಚಾರ್ಜ್ ನಡೆದಿದೆ. ಆರ್.ಎಸ್.ಬಸವ್ವ, ಕೆ.ನಾಗರತ್ನ, ಎರ್ರಮ್ಮ ಜಗನ್ನಾಥ್‌ರವರು ನೇತೃತ್ವ ವಹಿಸಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ 2000 ಸಾವಿರ ಅಂಗನವಾಡಿ, ಬಿಇಎಂಎಲ್ ಗುತ್ತಿಗೆ ಕಾರ್ಮಿಕರು, ಪಂಚಾಯತ್ ನೌಕರರು ಬಿಸಿಯೂಟ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಅರ್ಜುನನ್, ಗಾಂಧಿನಗರ ಮುನಿರಾಜಮ್ಮ ನಾಗರತ್ನ, ಜಯಮ್ಮ ನಾರಾಯಣಸ್ವಾಮಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರತಿಭಟನೆ ನಡೆದಿದೆ. ಸುಮಾರು 1500 ಜನ ಅಂಗನವಾಡಿ, ಗ್ರಾಮ ಪಂಚಾಯತ್ ನೌಕರರು, ಬಿಸಿಯೂಟ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ಗದಗ ಜಿಲ್ಲೆಯಲ್ಲಿ ಪ್ರತಿಭಟನೆ ನಡೆದು 2500 ಬಿಸಿಯೂಟ, ಅಂಗನವಾಡಿ, ಗ್ರಾಮ ಪಂಚಾಯ್ತಿ, ಹಮಾಲರ ಬಂಧನವಾಗಿದೆ.

ಕೊಡಗು ಜಿಲ್ಲೆಯಲ್ಲಿ 5000 ಜನ ತೋಟ ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಸುಮಾರು 3000 ಜನ ಭಾಗವಹಿಸಿದ್ದು, ಸಾವಿರಾರು ಜನ ಸ್ವಯಂ ಪ್ರೇರಿತರಾಗಿ ಬಂಧಿತರಾಗಿದ್ದಾರೆ. ಪ್ರತಿಭಟನೆಯಲ್ಲಿ ಅಂಗನವಾಡಿ, ಗ್ರಾಮ ಪಂಚಾಯತ್ ನೌಕರರು, ಬಿಸಿಯೂಟ ನೌಕರರು, ಬೀಡಿ, ಮುನಿಸಿಪಾಲಿಟಿ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಜಗ್ಗಾಟ ನಡೆದು 60- 70 ಜನರನ್ನು ಬಂಧಿಸಿದ್ದರು. ದಸ್ತಗೀರ್, ನಿಸಾರ್ ಮುಜೀಬ್, ಕಮಲಾ, ಸುಬ್ಬಣ್ಣ ಮುಂತಾದವರು ನೇತೃತ್ವ ವಹಿಸಿದ್ದರು.

ದಾವಣಗೆರೆ ಜಿಲ್ಲೆಯಲ್ಲಿ ಬೀಡಿ, ಗ್ರಾಮ ಪಂಚಾಯತ್, ಕೃಷಿ ದೇವದಾಸಿ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಪ್ರತಿಭಟನೆಯ ನೇತೃತ್ವವನ್ನು ಕೆ.ಎಲ್.ಭಟ್, ಒಬೆದುಲ್ಲಾ ವಹಿಸಿದ್ದರು. ಜಿಲ್ಲಾಧಿಕಾರಿಗಳ ಕಛೇರಿ ಮುತ್ತಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಹಮಾಲಿ, ಗ್ರಾಮ ಪಂಚಾಯಿತಿ, ಬಿಸಿಯೂಟ, ಕಟ್ಟಡ ಕಾರ್ಮಿಕರು 4000 ಜನರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ 3 ಸಾವಿರ ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಕಾರ್ಮಿಕರು ಮುಖಂಡರನ್ನು ಕರೆದು ಚರ್ಚೆ ನಡೆಸಿದ್ದಾರೆ. ಸುಮಾರು 2000 ಜನರು (ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯತಿ, ಕಟ್ಟಡ) ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಕಾಂ.ಬಕುಲಾದೇವಿ, ಶ್ರೀದೇವಿ ಚುಡೆ, ಗುರುಶಾಂತ್ ಬಿರಾದಾರ್ ಮುಂತಾದವರು ನೇತೃತ್ವ ವಹಿಸಿದ್ದರು.

ಉತ್ತರಕನ್ನಡ ಜಿಲ್ಲೆಯಲ್ಲಿ ಅಂಗನವಾಡಿ, ಹಂಚು, ಬಿಸಿಯೂಟ, ಗ್ರಾಮ ಪಂಚಾಯತಿ ನೌಕರರು ಪ್ರತಿಭಟನೆ ನಡೆಸಿದ್ದಾರೆ. ತಿಲಕಗೌಡ, ಸಿ.ಆರ್. ಶ್ಯಾನ್‌ಬಾಗ್, ಯಮುನಾ ಗಾಂವ್ಕಾರ್, ಮಾಲಿನಿ ಮೇಸ್ತ ಮುಂದಾದವರು ನೇತೃತ್ವ ವಹಿಸಿದ್ದರು. ಸವಿತಾ, ಫಿಲೋಮಿನಾ ಫರ್ನಾಂಡಿಸ್ ಮುಂತಾದವರು ನೇತೃತ್ವ ವಹಿಸಿದ್ದರು.

ಉಡುಪಿ ಜಿಲ್ಲೆಯಲ್ಲಿ ಬೀಡಿ, ಹಂಚು, ಮೀನು, ಆಟೋ, ಅಂಗನವಾಡಿ, ಬಿಸಿಯೂಟ ನೌಕರರು ಸುಮಾರು 1500 ಜನರು ಪ್ರತಿಭಟನೆ ನಡೆಸಿದ್ದಾರೆ. ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದ್ದಾರೆ. ಶ್ರೀಯಾನ್, ವಿಶ್ವನಾಥ ರೈ, ದೋಗು, ಸುವರ್ಣ, ರಮೇಶ್ ಮೆಂಡನ್ ಭಾಗವಹಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ಸಾವಿರ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಬಿ.ಮಾಧವ, ಶ್ರೀಯಾನ್, ವಸಂತ ಆಚಾರಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬಾಗಲಕೋಟೆ ಜಿಲ್ಲೆಯಲ್ಲಿ ಸುಮಾರು 6000 ಜನ ಗ್ರಾಮ ಪಂಚಾಯಿತಿ, ಬಿಸಿಯೂಟ, ಅಂಗನವಾಡಿ, ಹಮಾಲಿ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಮಂಜುನಗೌಡ, ಡಿ.ಎಸ್.ಕುಂಬಾರ, ಸಿದ್ದಮ್ಮ ನೇತೃತ್ವ ವಹಿಸಿದ್ದರು. ಮಾದೇವಿ ಕುಪ್ಪದಾ ನೇತೃತ್ವ ವಹಿಸಿದ್ದರು.

ಬಿಜಾಪುರ ಜಿಲ್ಲೆಯ ಬಿಜಾಪುರ, ಇಂಡಿ, ಸಿಂಧಗಿ, ಬಸವನ ಬಾಗೇವಾಡಿ, ಮುದ್ದೆ ಬಿಹಾಳ ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ.

ಧಾರವಾಡ ಜಿಲ್ಲೆಯಲ್ಲಿ 2500 ಜನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ದೌರ್ಜನ್ಯಕ್ಕೆ ಪ್ರತಿಭಟನೆ

ಸೆಪ್ಟೆಂಬರ್ 15 ರ ಪೊಲೀಸ್ ದೌರ್ಜನ್ಯ ನಡೆದದ್ದು ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆ ರಾಜ್ಯಾದ್ಯಂತ ಮತ್ತೊಂದು ಸುತ್ತಿನ ಪ್ರತಿಭಟನಾ ಅಲೆಯೇ ಬಿದ್ದಿದೆ. ಮಂಡ್ಯದಲ್ಲಂತೂ ಮುಖಂಡರನ್ನು ಬಂಧಿಸಿದಾಗಲೇ ಡಿವೈಎಸ್‌ಪಿ ಕಛೇರಿ ಬಳಿ ಪ್ರತಿಭಟಿಸಲಾಗಿದೆ. ಮರುದಿನ ಮಂಡ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಪ್ರತಿಭಟನೆಗಳು ಹಾಸನದಲ್ಲಿ ಮುಖಂಡರನ್ನು ಬಂಧಿಸಿದ್ದನ್ನು ದೌರ್ಜನ್ಯವನ್ನು ಪ್ರತಿಭಟಿಸಿದ ಕಾರ್ಮಿಕರು ಅದರಲ್ಲೂ ವಿಶೇಷವಾಗಿ ಮಹಿಳಾ ಕಾರ್ಮಿಕರು ಇಡೀ ರಾತ್ರಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣ ನಡೆಸಿದ್ದಾರೆ. ಅಲ್ಲೇ ಒಲೆ ಇಟ್ಟು ಅಡುಗೆ ಮಾಡಿ ಠಿಕಾಣಿ ಹೂಡಿದ್ದಾರೆ.

ಬೆಂಗಳೂರಿನಲ್ಲಿ ಸಿಐಟಿಯು ನೇತೃತ್ವದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಕಛೇರಿಯತ್ತ ಪ್ರತಿಭಟನಾ ಮೆರವಣಿಗೆಯಲ್ಲಿ ಹೊರಟಿದ್ದ ಸುಮಾರು ಸಾವಿರ ಕಾರ್ಯಕರ್ತರನ್ನು ಪೊಲೀಸರು ತಡೆದಿದ್ದಾರೆ. ಸುಮಾರು 200 ಜನರನ್ನು ಬಂಧಿಸಿದ್ದಾರೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಕಾರವಾರ, ದಾಂಡೇಲಿ, ಶಿರಸಿ, ಹೊನ್ನಾವರಗಳಲ್ಲಿ ಪ್ರತಿಭಟನೆಗಳು ನಡೆದು ಯಡಿಯೂರಪ್ಪನವರ ಭೂತದಹನ ನಡೆಸಲಾಗಿದೆ.

ಕುಂದಾಪುರದಲ್ಲಿ ಸುಮಾರು 600 ಕ್ಕೂ ಹೆಚ್ಚು ಜನರ ಪ್ರತಿಭಟನೆ ಭೂತದಹನ ನಡೆದಿದೆ. ಕೊಡಗಿನಲ್ಲಿ ಪ್ರತಿಭಟನೆ ನಡೆದಿದೆ. ಚಿತ್ರದುರ್ಗದಲ್ಲಿ ಮೈಸೂರಿನಲ್ಲಿ ಕೋಲಾರಗಳಲ್ಲಿಯೂ ಪ್ರತಿಭಟನೆಗಳು ನಡೆದಿವೆ.

ದೌರ್ಜನ್ಯವನ್ನು ಪ್ರತಿಭಟಿಸಿ ಸೆಪ್ಟೆಂಬರ್ 16 ರಂದು ಕರೆ ನೀಡಲಾಗಿದ್ದ ರಾಯಚೂರು ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದ್ದು ಬಂದ್ ಯಶಸ್ವಿಯಾಗಿದೆ. ರಾಯಚೂರು ಕೇಂದ್ರದಲ್ಲಿ ಮಾತ್ರವಲ್ಲ ಜಿಲ್ಲೆಯಾದ್ಯಂತ ಪ್ರತಿಭಟನೆ ವ್ಯಕ್ತವಾಗಿದೆ. ಜುಲೈ 17 ರಂದು ಗುಲ್ಬರ್ಗಾದಲ್ಲಿ ಭಾಗಶ: ಬಂದ್ ನಡೆದಿದೆ. ನಿತ್ಯಾನಂದಸ್ವಾಮಿಯವರ ನೇತೃತ್ವದಲ್ಲಿ 500 ಜನರ ಪ್ರತಿಭಟನೆ ನಡೆದಿದೆ. ಕೆ.ನೀಲಾ ರವರ ನೇತೃತ್ವದಲ್ಲಿ [illegible] ಪೊಲೀಸರು ಈ ಪ್ರತಿಭಟನಾಕಾರರನ್ನು ಬಂಧಿಸಿದಾರೆ.

[illegible]

ಅಮಾಯಕರ ಕೊಂದು - ಮತ್ತೆ ಸಿಕ್ಕಿಬಿದ್ದ ಮೋದಿ


ಗುಜರಾತ್ ರಾಜಧಾನಿ ಅಹಮದಾಬಾದ್ ಹೊರವಲಯದಲ್ಲಿ ಮಹಾರಾಷ್ಟ್ರದಿಂದ ಗುಜರಾತಿಗೆ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಕೊಲ್ಲುವ ಸಂಚು ರೂಪಿಸಿಕೊಂಡು ಕಾರಿನಲ್ಲಿ ಶಸ್ತ್ರಾಸ್ತ್ರ ಗಳೊಂದಿಗೆ ಬರುತ್ತಿದ್ದ ನಾಲ್ಕು ಯುವ ಜನರನ್ನು ಜೂನ್ 15 ರ ಬೆಳಗಿನ ಜಾವ ಗುಜರಾತ್ ಪೋಲೀಸರು ಎನ್‌ಕೌಂಟರ್ ನಡೆಸಿ ಕೊಂದಿದ್ದಾರೆ ಎಂಬ ವರದಿಗಳು ಪ್ರಕಟವಾದಾಗ ಪೋಲೀಸರ ಈ ವರದಿ ನಿಜ ಇರಬಹುದು ಎಂದು ಎಷ್ಟೋ ಜನ ಮುಗ್ಧ ನಾಗರೀಕರು ನಂಬಿದ್ದರು. ಆದರೆ ಮೋದಿ ಸರ್ಕಾರದ ಕ್ರೂರ ಮುಖವನ್ನೂ, ಮೋದಿ ಸರ್ಕಾರದ ಪೋಲೀಸರ ದುಷ್ಟ ಆಟಗಳನ್ನು ಬಲ್ಲ ಪ್ರಜ್ಞಾವಂತರು ಆ ವರದಿಗಳ ಬಗೆಗೆ ಅಂದೇ ಸಂಶಯ ವ್ಯಕ್ತಪಡಿಸಿದ್ದರು.

ನಕಲಿ ಎನ್‌ಕೌಂಟರ್‌ನಲ್ಲಿ ಸತ್ತ ಅಮಾಯಕರು



ಐದು ವರ್ಷಗಳ ನಂತರ ಈಗ ಈ 'ಲಷ್ಕರ್ ತೊಯ್ಬ' ಉಗ್ರರ ಜೊತೆ ನಂಟು ಹೊಂದಿದ್ದಾರೆಂದು ಹೇಳಲಾಗಿದ್ದ ಉಗ್ರರ 'ಎನ್‌ಕೌಂಟರ್' ಕತೆ ಹಸಿ ಹಸಿ ಸುಳ್ಳು. ಮುಂಬೈ ಮೂಲದ ವಿದ್ಯಾರ್ಥಿನಿ ಇಶ್ರತ್ ಜಹಾನ್ ಹಾಗೂ ಆಕೆ 3 ಜನ ಜೊತೆಗಾರರನ್ನು ಗುಜರಾತ್ ಪೋಲೀಸರು ಅಪಹರಿಸಿ, 2 ದಿನ ಬಂಧನದಲ್ಲಿಟ್ಟುಕೊಂಡು ಆಮೇಲೆ ಕೊಂದು ಅದಕ್ಕೆ 'ಎನ್‌ಕೌಂಟರ್' ಎಂಬ ಬಣ್ಣ ಬೆಳೆದಿರುವುದು ಸ್ಪಷ್ಟವಾಗಿದೆ. ಈ 'ಎನ್‌ಕೌಂಟರ್' ಕುರಿತು ತನಿಖೆ ನಡೆಸಿದ ಅಹಮದಾಬಾದ್ ಮೆಟ್ರೋ ಪಾಲಿಟನ್ ನ್ಯಾಯಾಧೀಶರ ತೀರ್ಪು ಹೊರ ಬಿದ್ದಿದ್ದು ಮುಗ್ಧ ಅಲ್ಪಸಂಖ್ಯಾತರ ನರಬೇಟೆಗೆ ಕುಖ್ಯಾತವಾದ ಮೋದಿ ಸರ್ಕಾರದ ಮತ್ತೊಂದು ಘೋರ ಪಾತಕ ಬಯಲಾಗಿದೆ.

ಆಕೆ 19 ವರ್ಷದ ವಿದ್ಯಾರ್ಥಿನಿ. ಹೆಸರು ಇಶ್ರನ್ ಜಹಾನ್, ಮುಂಬೈನಲ್ಲಿ ಬಿ.ಕಾಂ., ಓದುತ್ತಿದ್ದ ವಿದ್ಯಾರ್ಥಿನಿ. ಬಿ.ಕಾಂ., ಓದುತ್ತಿರುವಾಗಲೇ ತನ್ನ ದೊಡ್ಡ ಕುಟುಂಬಕ್ಕೆ ಆಸರೆಯಾಗುವ ನಿಟ್ಟಿನಲ್ಲಿ ಮಕ್ಕಳಿಗೆ ಮನೆ ಪಾಠವನ್ನು ಮಾಡಿಕೊಂಡು ಜೀವನದೂಡಲು ತನ್ನ ತಾಯಿ ಹಾಗೂ ಸದಸ್ಯರಿಗೆ ನೆರವಾಗುತ್ತಿದ್ದವರು.



ಡಿ.ಜಿ. ವಂಜಾರ

ಇಶ್ರನ್ ಜಹಾನ್ ಮತ್ತು ಆಕೆಯ ಮೂವರು ಜೊತೆಗಾರರು ಪೋಲಿಸರಿಂದ ಹತ್ಯೆಯಾಗಿದ್ದಾರೆ. ಆದರೆ ಎನ್‌ಕೌಂಟರ್‌ನಲ್ಲಿ ಅಲ್ಲ, ಇಶ್ರನ್, ಜಾವೇದ್, ಅಮ್ಜದ್, ಮತ್ತು ಜೀಸನ್ ಜೋಹರ್ ಇವರನ್ನು ಮುಂಬೈನಿಂದ ಜೂನ್ 15ಕ್ಕೂ 2 ದಿನ ಮೊದಲೇ ಅಪಹರಿಸಲಾಗಿದೆ. ತಮ್ಮ ಬಳಿ ಇರಿಸಿಕೊಂಡು ಜೂನ್ 14 ರಂದೇ ಅವರನ್ನು ಕೊಂದಿದ್ದಾರೆ. ಆ ನಂತರ ಅವರ ದೇಹಗಳನ್ನು ಅಹಮದಾಬಾದ್ ಹೊರ ವಲಯಕ್ಕೆ ತಂದು 'ಎನ್‌ಕೌಂಟರ್' ನಾಟಕ ನಡೆಸಲಾಗಿದೆ. ಇಶ್ರತ್ ದೇಹವನ್ನು ಹೊಕ್ಕಿರುವ ಗುಂಡು ಆಕೆ ಸತ್ತ ಎಷ್ಟೋ ಹೊತ್ತಿನ ನಂತರ ಆಕೆಯ ದೇಹವನ್ನು ಹೊಕ್ಕಿರುವುದಾಗಿದೆ. ಪೋಲಿಸರು ಹೇಳುವಂತೆ ಇಲ್ಲಿ ಯಾವ ಗುಂಡಿನ ಚಕಮಕಿ ನಡೆದಿಲ್ಲ ಎಂದು ನ್ಯಾಯಾದೀಶರು ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ.



ಈ ಯುವಕ ಯುವತಿಯರು ಕಾರಿನಲ್ಲಿ ಅಕ್ರಮ ಶಸ್ತ್ರಾಸ್ತ್ರ ಸಂಗ್ರಹಿಸಿದ್ದರು ಎಂ ಪೋಲೀಸರು ತೋರಿಸುತ್ತಿರುವುದೆಲ್ಲವೂ ಯು -ಯುವತಿಯರಿಗೆ ಪಾಕಿಸ್ತಾನ ಲಷ್ಕರ್ ತೊಯ್ಬ ನಂಟಿದೆ ಎಂಬುದನ್ನು ತೋರಿಸುವ ಸಲುವ ಗುಜರಾತ್ ಪೋಲಿಸರೇ, ವ್ಯ ಮಾಡಿರುವುದು ಎಂದು ತೀ ಸ್ಪಷ್ಟವಾಗಿ ಸಾರಿದೆ.

ಇಲ್ಲಿ ಪೋಲೀಸರು ಎಂ ಯಾರೋ ಕೆಳಹಂತ ಪೋಲೀಸರು ಅ ನರೇಂದ್ರಮೋದಿಯ ಪರಮ ಹಿರಿಯ ಪೋಲಿ ಅಧಿಕಾರಿಗಳು, 'ಖ್ಯಾ 'ಎನ್‌ಕೌಂಟರ್ ಸ್ಪೇಷಲಿಸ್ಟ್‌ಗಳು ಇದ್ದಾರೆ.

ಈ ನಕಲಿ ಎನ್‌ಕೌಂಟರ್ ಪ್ರಧ ಅಪರಾಧಿಗಳಲ್ಲಿ ಡಿ.ಜಿ.ವಂಜಾರ ಮ ಎನ್.ಕೆ.ಅಮೀನ್ ಎಂಬ ಪೋಲೀ ಅಧಿಕಾರಿಗಳು 'ಸೊಹ್ರಾಬುದ್ದೀನ್ ನ ಎನ್‌ಕೌಂಟರ್' ಪ್ರಕರಣಗಳಲ್ಲಿ ಸಿಕ್ಕಿಕೊಂಡು ಕ ಎಣಿಸುತ್ತಿದ್ದಾರೆ. ಈ ಪ್ರಕರಣದ ಬಗ್ಗೆ ತನಿಖೆಯ ಅದು ನಕಲಿ ಎನ್‌ಕೌಂಟರ್ ಎಂ


ಪುಟ

ಅಸ್ಪೃಶ್ಯತೆ ವಿರುದ್ಧದ ಹೋರಾಟಕ್ಕೆ ಡಿಎಂಕೆ ತಡೆ ಯತ್ನ

ತಮಿಳುನಾಡಿನ ಮಧುರೈ ಜಿಲ್ಲೆಯ ಉತ್ತುಪುರಂ ಈಗ ದೇಶದ ವಿವಿಧ ಭಾಗಗಳ ಜನ ಗುರುತಿಸುವಂತಹ ಜಾಗ. ಇಲ್ಲಿ ಯಾವುದೇ ಪ್ರಸಿದ್ಧ ಪಕ್ಷಿಧಾಮ ಅಥವಾ ಯಾವುದೇ ಖ್ಯಾತ ವಿಹಾರ ಧಾಮ ಇಲ್ಲ. ತೀರಾ ಮೊನ್ನೆಯವರೆಗೆ ಇಲ್ಲಿ ಒಂದು ಕೋಟೆ ಇತ್ತು. ಹೌದು ಕೋಟೆಯಂತಹ ಗೋಡೆ, ಉತ್ತುಪುರಂನ ಮೇಲ್ಜಾತಿಯ ಜನರು ಅದೇ ಉತ್ತುಪುರಂನ ದಲಿತರು ಊರಿನೊಳಕ್ಕೆ ಬರದಂತೆ ಕಟ್ಟಿದ್ದ ಕೋಟೆಯಂತಹ ದೊಡ್ಡ ಗೋಡೆ ಅದು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಕಾರಟ್ ಇಲ್ಲಿ ಭೇಟಿ ನೀಡಿ ಪ್ರತಿಭಟಿಸುತ್ತಾರೆಂದು ನಿರ್ಧಾರವಾದಾಗ (ಜನಶಕ್ತಿ........... ವರದಿ ನೋಡಿ) ಅಲ್ಲಿನ ಡಿಎಂಕೆ ಸರ್ಕಾರ ಗೋಡೆಯನ್ನು ಒಂದು 'ಸ್ವಲ್ಪ' ಒಡೆದು ದಲಿತರ 'ಪ್ರವೇಶ'ಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಆದರೆ ದಲಿತರ ಊರಿನ ರಸ್ತೆ ಮತ್ತು ಇತರ ಹತ್ತು ಹಲವು ನಾಗರೀಕ ಸೌಲಭ್ಯಗಳನ್ನು ಬಳಸಲು ಬೇಕಾದಂತಹ ವಾತಾವರಣವನ್ನು ನಿರ್ಮಿಸಲು ಅಗತ್ಯವಾದ ಕ್ರಮವನ್ನು ಸರ್ಕಾರ ವಹಿಸಿತೇ? ಉಹೂಂ ಇಲ್ಲ. ದಲಿತರ 'ಅಸ್ಪೃಶ್ಯ' ಬಾಳು ಇಂದಿಗೂ ಹಾಗೆಯೇ ಮುಂದುವರೆದಿದೆ.

ಸಿಪಿಐ(ಎಂ) ಪಕ್ಷ ಈ ಪ್ರಶ್ನೆಯನ್ನು ಇಷ್ಟಕ್ಕೆ ಮುಗಿಸಲು ಸಿದ್ಧವಿಲ್ಲ. ಅಮಾನವೀಯ ಅನಾಗರೀಕ ಅಸ್ಪೃಶ್ಯತೆ, ತಾರತಮ್ಯ ತೊಲಗಲೇ ಬೇಕು. ಊತ್ತುಪುರಂ ದಲಿತರಿಗೆ ಇತರ ಎಲ್ಲರಂತೆ ಮನುಷ್ಯರಂತೆ ಬಾಳುವ ಹಕ್ಕು ದೊರೆಯಬೇಕು. ಅಲ್ಲಿಯವರೆಗೆ, ಆ ಕಡೆಗೆ ಹೋರಾಟ. ಇದು ಸಿಪಿಐ(ಎಂ) ನಿರ್ಧಾರ.


ಉತ್ತುಂಪುರಂ ಗೆ ಭೇಟಿ ನೀಡಿದ ಬೃಂದಾ ಕಾರಟ್



ಇತ್ತೀಚೆಗೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯೆ ಕಾಂ:ಬೃಂದಾ, ಇಎಂಎಸ್ ಜನ್ಮಶತಮಾನೋತ್ಸವ ಆಚರಣೆಯ ಕಾರ್ಯಕ್ರಮಕ್ಕೆ ಮಧುರೈಗೆ ಬಂದಿದ್ದರು. ಇದೆ ಸಂದರ್ಭದಲ್ಲಿ ಅವರು ಊತ್ತುಪುರಂಗೆ ಭೇಟಿ ನೀಡಿ ದಲಿತ ಪೊನ್ನಯ್ಯ ಮನೆಯಲ್ಲಿ ಉಪಹಾರ ಸೇವಿಸುವ ಕಾರ್ಯಕ್ರಮವಿತ್ತು.

ಮಧುರೈ ಜಿಲ್ಲಾಡಳಿತಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಅದು ಯಾವ ಕಡೆಯಿಂದ ಮುಳ್ಳು ಚುಚ್ಚಿತೋ, ಮಧುರೈ ಸರ್ಕ್ಯೂಟ್ ಹೌಸ್‌ನಲ್ಲಿದ್ದ ಬೃಂದಾ ಊತ್ತುಪುರಂಗೆ ಹೋಗಬಾರದು ಎಂದು ನಿರ್ಬಂಧ ವಿಧಿಸಲು ಯತ್ನಿಸಿದರು. ಬೃಂದಾ ಸ್ವಾಗತ ಸಮಾರಂಭಕ್ಕೆ ನೀಡಲಾಗಿದ್ದ ಧ್ವನಿವರ್ಧಕ ಬಳಕೆ ಅನುಮತಿ ರದ್ದಾಗಿದೆ ಎಂದರು. ಊತ್ತುಪುರಂನಲ್ಲಿ ಯಾವುದೇ ನಿಷೇದಾಜ್ಞೆ ಇಲ್ಲವೆಂಬುದನ್ನು ಸ್ಪಷ್ಟಪಡಿಸಿದ ಬೃಂದಾ ಮತ್ತು ಇತರ ಸಂಗಾತಿಗಳು ಊತ್ತುಪುರಂ ಕಡೆ ಹೊರಟರೆ, ನಡುದಾರಿಯಲ್ಲಿ ಅಡ್ಡಗಟ್ಟಿದ ಪೋಲಿಸರು ಬೃಂದಾ ಮತ್ತು ಎಐಡಿಡಬ್ಲ್ಯೂಎ ಮುಖಂಡರನ್ನು ಬಂಧಿಸಿ ಹಲವು ಮೊಕದ್ದಮೆ ಹೂಡಿ, ಸುಮಾರು ಎರಡು ಗಂಟೆಗಳ ಕಾಲ ವಶದಲ್ಲಿರಿಸಿಕೊಂಡು ಸಾಕಷ್ಟು ಪ್ರತಿಭಟಿಸಿದ ನಂತರ ಬಿಟ್ಟಿದ್ದಾರೆ.

ಅದೂ ಕೂಡ ತಾವು ಖಾಸಗಿಯಾಗಿ ಪೊನ್ನಯ್ಯ ಮನೆಗೆ ಭೇಟಿ ನೀಡುವುದಾಗಿ, ಬಹಿರಂಗ ಸಭೆ ನಡೆಸುವುದಿಲ್ಲ ಎಂದು ಹೇಳಿ ಸಾಕಷ್ಟು ಒತ್ತಾಯಿಸಿದ ಮೇಲೆ ಉತ್ತುಂಪುರಂಗೆ ಹೋಗಲು ಅನುಮತಿ ಸಿಕ್ಕಿದೆ. ನಿರೀಕ್ಷೆಯಂತೆ ಬೃಂದಾ ಭೇಟಿ ನೀಡಿದಾಗ ಊತ್ತುಪುರಂ ದಲಿತರಲ್ಲಿ ಸಂಭ್ರಮವೋ, ಸಂಭ್ರಮವೋ.. ಊತ್ತುಪುರಂನಲ್ಲಿ ಕೆಲವು



ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಿ, ಸೃಷ್ಟಿಸಿ ಬಹಿರಂಗ ಸಭೆಗೆ ಅಡ್ಡಿಪಡಿ ವಾತಾವರಣವನ್ನು ಕದಡಲು ಯತ್ನಿಸಿದ್ದರಂತೆ ಸೃಷ್ಟಿಸಲು ಯತ್ನಿಸಿರುವವರನ್ನು ಬಿಟ್ಟು ಕಾಲನಿಗೆ ಭೇಟಿ ನೀಡುವ ಮಹಿಳಾ ಮುಖ ಅಮರಿಕೊಂಡ ಡಿಎಂಕೆ ಸರ್ಕಾರದ ಪೋ 'ಬುದ್ದಿವಂತಿಕೆ'ಗೆ ಏನನ್ನೋಣ...!?

ಮಾತಿಗೆ ತಪ್ಪಿದ ಸರ್ಕಾರ

ಯುಪಿಎ II ದರ್ಬಾರ್‌

33ಶೇ. ಮಹಿಳಾ ಮೀಸಲಾತಿಗೆ ಇನ್ನೆಷ್ಟು ದಿನಗಳು?

ಜೂನ್ 4ರಂದು ಯುಪಿಎ -2 ಸರಕಾರದ ರ್ಯಕ್ರಮಗಳನ್ನು ವಿವರಿಸುತ್ತಾ ಆದರ ಪರವಾಗಿ ಮ್ಮ ರಾಷ್ಟ್ರಾಧ್ಯಕ್ಷರು ನೂರು ದಿನಗಳ ಒಳಗೆ ಶಾಸನ ಭೆಗಳಲ್ಲಿ ಮಹಿಳೆಯರಿಗೆ 33ಶೇ. ಮೀಸಲಾತಿಯ ಸೂದೆ ಪಾಸು ಮಾಡಿಸುವುದಾಗಿ ಹೇಳಿದ್ದರು. ದೇ ಸೆಪ್ಟಂಬರ್ 13ರಂದು ನೂರು ದಿನಗಳು ರ್ಣಗೊಂಡವು. ಆದರೆ ಆದಿನ್ನೂ ಸೂದೆಯಾಗಿಯೇ ಉಳಿದಿದೆ. ಆ ದಿಕ್ಕಿನಲ್ಲಿ ಯತ್ನಗಳೂ ಇಲ್ಲ. ಇದನ್ನು ನೆನಪಿಸಿ ಜನವಾದಿ ಹಿಳಾ ಸಂಘಟನೆಯ ಸದಸ್ಯರು ದೇಶಾದ್ಯಂತ 99ನೇ ನೆ ಅಂದರೆ ಸಪ್ಟಂಬರ್ 12ರಂದು ಮತಪ್ರದರ್ಶನ ಸಿದರು. ಅಂದು ಸಂಘಟನೆಯ ಕೇಂದ್ರ ಚೇರಿಯಲ್ಲಿ ಒಂದು ಕ್ಯಾಲೆಂಡರ್ ನಾವರಣಗೊಳಿಸಲಾಯಿತು. 33ಶೇ. ೀಸಲಾತಿಯ ಇತ್ತೀಚಿನ ವಚನ ನೀಡಿ ಎಷ್ಟು ನಗಳಾದವು ಎಂದು ಇದು ಪ್ರತಿದಿನ ಸೂಚಿಸುತ್ತದೆ.

★


ಸ್ವಿಸ್ ಖಾತೆಗಳ ಮಾತಿಗೂ ನೂರು ದಿನಗಳು

ಈ ಕೇಂದ್ರ ಸರಕಾರದ ಈಡೇರದ ಮತ್ತೊಂದು ೂರು ದಿನಗಳ ವಚನವೆಂದರೆ ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಪೇರಿಸಿಟ್ಟ ಕಪ್ಪು ಹಣವನ್ನು ದೇಶಕ್ಕೆ ುರಳಿ ತರಲಾಗುವುದು ಎಂಬುದು. ಸಪ್ಟಂಬರ್ 3ರಂದು ಹತ್ತಾರು ನಾಗರಿಕರು ಈ ವಿಷಯದಲ್ಲೂ ರಕಾರದ ವಿಫಲತೆಯತ್ತ ಗಮನ ಸೆಳೆಯಲು ವದೆಹಲಿಯಲ್ಲಿ ಮೆರವಣಿಗೆ ನಡೆಸಿದರು. 70ಲಕ್ಷ ಟಿ ರೂ.ಗಳಷ್ಟು ಕಳ್ಳಹಣ ಅಲ್ಲಿನ ಬ್ಯಾಂಕುಗಳಲ್ಲಿ ದೆ, ಅದನ್ನು ತಂದರೆ ಪ್ರತಿಯೊಬ್ಬ ಭಾರತೀಯ ಗರಿಕನಿ(ಳಿ)ಗೆ 3ಲಕ್ಷ ರೂ. ಕೊಡಬಹುದು ುದರತ್ತ ಈ ಪ್ರತಿಭಟನಾಕಾರರು ಗಮನ ಸೆಳೆದರು. ವಾಸ್ತವವಾಗಿ ಸರಕಾರ ಈ ಬಗ್ಗೆ ಸೋಮಾರಿತನ ತೋರುತ್ತಿದೆ, ಅದಕ್ಕೆ ಈ ದಿಕ್ಕಿನಲ್ಲಿ ಸಾಗಲು ಮನಸ್ಸೇ ಇಲ್ಲ ಎಂದು ಅವರು ಸಂದೇಹ ವ್ಯಕ್ತಪಡಿಸಿದ್ದಾರೆ.

★

ಯುಪಿಎ ಗೋಸುಂಬೆತನ ಬಯಲು ಮಾಡಿದ ಪೈಲಟ್‌ಗಳ ಐದು ದಿನಗಳ ಮುಷ್ಕರ

ಕಳೆದ ವಾರ ದೊಡ್ಡ ಸುದ್ದಿ ಮಾಡಿದ ಖಾಸಗೀ ಜೆಟ್ ಏರ್‌ವೇಸ್ ಸಂಸ್ಥೆಯ ಪೈಲಟ್‌ಗಳ ಮುಷ್ಕರ ಐದು ದಿನಗಳ ನಂತರ ಮುಕ್ತಾಯವಾಯಿತು. ಮುಷ್ಕರ ನಡೆದದ್ದು ಸಂಘಟನೆಯ ಹಕ್ಕಿಗಾಗಿ.



ಪೈಲಟ್‌ಗಳು ಸಂಘ ಕಟ್ಟಿಕೊಂಡದ್ದಕ್ಕಾಗಿ ಐವರು ಪೈಲಟ್‌ಗಳನ್ನು ಕೇವಲ ಒಂದು ಮೊಬೈಲ್ ಸಂದೇಶ ಕಳಿಸಿ ವಜಾ ಮಾಡಿದ್ದನ್ನು ವಿರೋಧಿಸಿ ಈ ಮುಷ್ಕರ ನಡೆಯಿತು. ಈ ಸಂಘಕ್ಕೆ ಮುಂಬೈಯ ಕಾರ್ಮಿಕ ಸಂಘಗಳ ರಿಜಿಸ್ಟ್ರಾರ್ ಕಚೇರಿಯಿಂದ ಪ್ರಮಾಣ ಪತ್ರ ಸಿಕ್ಕಿತ್ತು. ಶಿಸ್ತು ಸಂಹಿತೆಯ ಪ್ರಕಾರ ಒಂದು ಸಂಸ್ಥೆಯಲ್ಲಿ ಒಂದೇ ಸಂಘವಿದ್ದರೆ ಅದಕ್ಕೆ ಮಾನ್ಯತೆ ಕೊಡಬೇಕು. ಇದಕ್ಕೆ ಆಡಳಿತ ವರ್ಗ ನಿರಾಕರಿಸಿದರೆ ಸಾವಿರಾರು ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವಾಗ ಕಾರ್ಮಿಕ ಆಯುಕ್ತರು, ಸರಕಾರ ಮಧ್ಯಪ್ರವೇಶಿಸಿ ಆ ಸಂಹಿತೆಯನ್ನು ಪಾಲಿಸುವಂತೆ ಮಾಡಬೇಕು. ಆದರೆ ಕಾರ್ಮಿಕ ಆಯುಕ್ತರ ಕಚೇರಿ ಈ ಬಗ್ಗೆ ನಿರ್ದೇಶನ ನೀಡದಂತೆ ಮಾಡಲಾಯಿತು. ವಿಮಾನಯಾನ ಸಚಿವರಿಗೆ ಪೈಲಟ್ ಗಳನ್ನು ಭೇಟಿ ಮಾಡಲು ಸಮಯ ಸಿಗಲೇ ಇಲ್ಲ. ಆದರೆ ಜೆಟ್ ಮುಖ್ಯಸ್ಥ ನರೇಶ ಗೋಯಲನ್ನು ಭೇಟಿ ಮಾಡಿ ಮುಷ್ಕರ ನಿರತ ಪೈಲಟ್ ಗಳ ವಿರುದ್ಧ ಎಸ್ಮಾ ಪ್ರಯೋಗಿಸುವ ಬಗ್ಗೆ, ಮುಷ್ಕರ ಮುರಿಯಲು ವಿದೇಶಿ ಪೈಲಟ್‌ಗಳನ್ನು ಬಳಸುವ ಬಗ್ಗೆ ಮಾತುಕತೆ ನಡೆಸಲು ಸಮಯ ಧಾರಾಳವಾಗಿ ಸಿಕ್ಕಿತು.

ಕಳೆದ ತಿಂಗಳು ಈ ಕಂಪನಿಯೂ ಸೇರಿದಂತೆ 8 ಖಾಸಗೀ ವಿಮಾನಯಾನ ಕಂಪನಿಗಳ ಮಾಲಕರೇ ಇಂಧನ ಬೆಲೆಗಳನ್ನು ಇಳಿಸಲು ಮುಷ್ಕರ ನಡೆಸುವುದಾಗಿ ಬೆದರಿಸಿದ್ದನ್ನು ನೆನಪಿಸಿಕೊಳ್ಳಬಹುದು. ಅಗ ತೋರಿಕೆಗೆ ಇದೇ ಮಂತ್ರಿ ಈ ಕಂಪನಿಗಳನ್ನು ತರಾಟೆಗೆ ತಗೊಂಡಂತೆ ನಟಿಸಿದರೂ, ನಂತರ ಅವರೊಡನೆ ಒಂದು 'ಮಿತ್ರತ್ವ'ದ ಸಭೆ ನಡೆಸಿ ಅವರ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸುವ ಭರವಸೆ ನೀಡಿದ್ದರು.

ಆದರೆ ಪೈಲಟ್‌ಗಳ ಐಕ್ಯತೆ ಮತ್ತು ದೇಶದ ಕೇಂದ್ರೀಯ ಕಾರ್ಮಿಕ ಸಂಘಗಳ ಬೆಂಬಲದಿಂದಾಗಿ ಆಡಳಿತ ವರ್ಗ ವಜಾ ಮಾಡಿದ ಪೈಲಟ್ ಗಳನ್ನು ವಾಪಾಸು ತಗೊಳ್ಳಬೇಕಾಯಿತು. ಅಲ್ಲದೆ ಸಂಘವನ್ನು ವಿಸರ್ಜಿಸಬೇಕೆಂಬ ಅದರ ಬೇಡಿಕೆಯೂ ಪೂರ್ಣವಾಗಿ ಈಡೇರಿಲ್ಲ. ಒಂದು ರಾಜಿಸೂತ್ರವಾಗಿ ಇವನ್ನೆಲ್ಲಾ ಚರ್ಚಿಸಲು ಒಂದು ಜಂಟಿ ಸಮಿತಿಯನ್ನು ರಚಿಸಲು ಅದು ಒಪ್ಪಬೇಕಾಯಿತು. ಈಗ ಸಂಘಕ್ಕೆ ನೀಡಿರುವ ರಿಜಿಸ್ಟ್ರೇಶನ್ನು ರದ್ದು ಪಡಿಸಲು ಆಡಳಿತ ಪ್ರಯತ್ನ ನಡೆಸಿದೆ, ಇದರಲ್ಲಿ ಸರಕಾರದ ಬೆಂಬಲದ ನಿರೀಕ್ಷೆ ಅದಕ್ಕಿದೆ.

★

ಜೆಟ್ ಏರ್‌ವೇಸನ್ನು ರಾಷ್ಟ್ರೀಕರಿಸಬೇಕೆಂದು ಕಾಂಗ್ರೆಸ್ ಎಂ.ಪಿ. ಒತ್ತಾಯ!

. ಯುಪಿಎ ಸರಕಾರ ಪರೋಕ್ಷವಾಗಿ ಜೆಟ್ ಏರ್ ವೇಸ್ ಮಾಲಕರ ಬೆನ್ನಿಗೆ ನಿಂತಿದ್ದರೂ, ಆಳುವ ಕೂಟದ ನೇತೃತ್ವ ವಹಿಸಿರುವ ಪಕ್ಷದ ಸಂಸತ್ ಸದಸ್ಯ ಸಂಜಯ್ ನಿರುಪಂ ಪ್ರಧಾನ ಮಂತ್ರಿಗಳಿಗೆ ಕಂಪನಿಯನ್ನು ರಾಷ್ಟ್ರೀಕರಿಸಿ ಎಂದು ಒತ್ತಾಯಿಸಿ ಪತ್ರ ಬರೆದಿದ್ದರಂತೆ! ಮಾಲಕ ನರೇಶ ಗೋಯಲ್ ಸಂಘ ಕಟ್ಟಿಕೊಳ್ಳಲು ಖಡಾಖಂಡಿತವಾಗಿ ಅವಕಾಶ ನಿರಾಕರಿಸಲು ಕಾರಣ ಆತ ಈ ಕಂಪನಿಗಾಗಿ ಸಿಂಗಾಪುರದ ಕಂಪನಿಯೊಂದರಿಂದ ಬಂಡವಾಳ ಪಡೆದಾಗ ಸಂಘ ಕಟ್ಟಿಕೊಳ್ಳಲು ಬಿಡಬಾರದು ಎಂಬುದು ಒಂದು ಶರತ್ತಾಗಿತ್ತಂತೆ.

★

ಮಿತವ್ಯಯದ ಹೆಸರಿನಲ್ಲಿ

ಕಾಂಗ್ರೆಸ್ ನೇತೃತ್ವದ ಸರಕಾರದ 'ಮಿತವ್ಯಯ'ದ ಪ್ರಚಾರ ಅಪಹಾಸ್ಯಕ್ಕೀಡಾಗುತ್ತಿದೆ. ರಾಹುಲ್ ಗಾಂಧಿ ತಮ್ಮ 'ಸರಳತೆ'ಯನ್ನು ಪ್ರದರ್ಶಿಸಲು ದಿಲ್ಲಿ-ಲುಧಿಯಾನಾ-ದಿಲ್ಲಿ ಶತಾಬ್ದಿ ರೈಲು ಪ್ರಯಾಣ ಮಾಡಿದರು. ಪಾಣಿಪತದ ಬಳಿ ಯಾರೋ ರೈಲಿಗೆ ಕಲ್ಲು ತೂರಿದರು. ಇದರಿಂದ ರಾಹುಲ್‌ಗಾಂಧಿಯವರಿಗೆ ಏನೂ ಆಗಲಿಲ್ಲ, ಆದರೆ ಆ ರೈಲಿನ ಸಾಮಾನ್ಯ ಪ್ರಯಾಣಿಕರು ಪ್ರಾಣಾಪಾಯದಿಂದ ಸ್ವಲ್ಪದರಲ್ಲಿ ಪಾರಾದರು. ಅವರಂತಹ ವಿವಿಐಪಿ ಭದ್ರತೆ ಪಡೆದಿರುವ ವ್ಯಕ್ತಿಗಳ ಇಂತಹ 'ಸರಳ' ಪ್ರಯಾಣ ಸರಕಾರದ ಖರ್ಚನ್ನು ಬಹಳಷ್ಟು ಇಳಿಸದಿದ್ದರೂ ಇತರರಿಗೆ ಕಿರಿಕಿರಿ ಹೆಚ್ಚಿಸುತ್ತದೆ ಎಂಬುದು ಸಾಮಾನ್ಯ ಅನುಭವ.

ರಾಹುಲ್‌ಗಾಂಧಿಯವರ ಇತ್ತೀಚಿನ 'ಸರಳ' ತಮಿಳುನಾಡು ಪ್ರಯಾಣದಿಂದ ಸರಕಾರೀ ಖಜಾನೆಗೆ 1 ಕೋಟಿ ರೂ.ಗಳಷ್ಟು ಖರ್ಚಾಯಿತು ಎಂದು ವರದಿಯಾಗಿದೆ. ○

. ಮತ್ತೆ ಸಿಕ್ಕಿಬಿದ್ದ ಮೋದಿ ಸರ್ಕಾರ

12 ರಿಂದ


ಸೊಹ್ರಾಬುದ್ದೀನ್ ಮುಗ್ಧರು ಎಂದು ಸಾಬೀತಾಯಿತು. ಜರಾತ್ ಸರ್ಕಾರ ಕೂಡ ಕೋರ್ಟ್‌ನಲ್ಲಿ ಒಪ್ಪಿಕೊಳ್ಳಬೇಕಾಗಿ ಬಂತು.

ಇದೇ ವಂಜಾರ, ಅಮೀನ್, ಅಹಮಬಾದ್ ೋಲೀಸ್ ಕಮೀಷನರ್ ಆಗಿದ್ದ ಕೆ.ಆರ್.ಕೌಶಿಕ್, ಅಪರಾಧ ದಳದ ಪ್ರಮುಖರಾದ ಪಿ.ಪಿ.ಪಾಂಡೆ ಂತಾದ ಹಿರಿಯ ಅಧಿಕಾರಿಗಳೇ ಈ ಪ್ರಕರಣದಲ್ಲಿ ಗಿಯಾಗಿದ್ದಾರೆ.

ಪೋಲೀಸ್ ಅಧಿಕಾರಿಗಳು ಪ್ರಶಸ್ತಿಗಳಿಗಾಗಿ ಮತ್ತು ಬಡ್ತಿ ಮೋನ್ನತಿಗಳಿಗಾಗಿ ಈ ರೀತಿಯ ನಕಲಿ ಎನ್‌ಕೌಂಟರ್‌ಗಳನ್ನು ನಡೆಸಿದ್ದಾರೆಂದು ಹಲವು ದಿಗಳು ಹೇಳುತ್ತಿವೆ. ಅದು ನಿಜವೇ ಇರಬಹುದು. ಆದರೆ ಅದು ಅಷ್ಟು ಮಾತ್ರವಲ್ಲ. ಮುಗ್ಧ ಅಲ್ಪಸಂಖ್ಯಾತರನ್ನೇ ಆರಿಸಿ, ಆರಿಸಿ ಮಾರಣ ಹೋಮ ಮಾಡುತ್ತಿರುವ ಇಂತಹ ಪ್ರಕರಣಗಳನ್ನು ನೋಡಿದರೆ ನರೇಂದ್ರ ಮೋದಿ ತಲೆಗೇರಿರುವ ಮತಾಂಧತೆ, ದ್ವೇಷ, ಆರೆಸ್ಸೆಸ್‌ನ ವಿಕೃತ ವಿಚಾರಗಳು ಪೋಲೀಸ್ ಇಲಾಖೆಯ ಒಳಗೆ ಎಷ್ಟು ಆಳವಾಗಿ ಇಳಿದಿವೆ ಎಂಬುದಕ್ಕೆ ಈ ಘಟನೆಗಳು ಸಾಕ್ಷಿಯಾಗಿವೆ.

ಈ ನಾಚಿಕೆಗೇಡಿನ ಪ್ರಕರಣದ ಹೊಣೆ ಹೊತ್ತು ತತ್‌ಕ್ಷಣ ನರೇಂದ್ರ ಮೋದಿ ರಾಜೀನಾಮೆ ನೀಡಬೇಕು, ಎಲ್ಲ ತಪ್ಪಿಸ್ಥರ ವಿರುದ್ಧ ತತ್‌ಕ್ಷಣ ತನಿಖೆ ನಡೆದು ಉಗ್ರ ಶಿಕ್ಷೆಯಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಆಗ್ರಹಿಸಿದೆ.

ಮೋದಿ ಸರ್ಕಾರ ತೀರ್ಪಿನ ವಿರುದ್ಧ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಹೆಜ್ಜೆ



ಇಟ್ಟಿದೆ. ಇದಲ್ಲದೆ ಇಶ್ರತ್ ಮತ್ತು ಜೊತೆಗಾರರ ಸಂಶಯಾಸ್ಪದ ನಡವಳಿಕೆ ಮತ್ತು ಸಂಪರ್ಕಗಳ ಬಗೆಗೆ ಕೇಂದ್ರ ಸರ್ಕಾರವೇ ರಾಜ್ಯಕ್ಕೆ ಮಾಹಿತಿ ನೀಡಿತ್ತು ಎಂದಿದೆ.

ಈ ಬಗೆಗೆ ಸ್ಪಷ್ಟನೆ ನೀಡಿರುವ ಕೇಂದ್ರ ಸರ್ಕಾರ ಸಂಶಯಾಸ್ಪದ ನಡವಳಿಕೆಗಳು, ಚಲನವಲನಗಳ ಬಗೆಗೆ ಮಾಹಿತಿ ನೀಡಿದಾಕ್ಷಣ ಅದು ಕೊಲ್ಲಲು ನೀಡಿದ ಅನುಮತಿಯಲ್ಲ. ಆ ಕುರಿತು ಸೂಕ್ತ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕಿತ್ತು ಎಂದೂ ಸ್ಪಷ್ಟನೆ ನೀಡಿದೆ. ○

ಹಗಲು

ಹಗಲನ್ನೇ ಇರುಳೆಂದು ಬಿಂಬಿಸಲು ನೋಡಿ
ಹೆಣಗುತ್ತಾ ಬಂದಿಹರು ಕೆಲವು ಜನ ಕೂಡಿ
ಪಾಪವ್ಯೆ ಈ ಜನಕೆ ಕುಳಿತಲ್ಲಿ ಬದುಕು
ಹೊರವುದಕೆ ನಿಜ ಬೆಳಕು ಬಹುದೊಡ್ಡ
ತೊಡಕು

- ವಿಡಂಬಾರಿ

ಜಗದಗಲ

ಆಫ್ರಿಕಾವನ್ನು ಹಿಡಿದುಕೊಳ್ಳಲು ಅಮೇರಿಕದ ಒಳಸಂಚು

ಒಬಾಮಾ ಅಧ್ಯಕ್ಷರಾದಾಗ ಇಡೀ ಆಫ್ರಿಕಾ ಸಂಭ್ರಮ ಪಟ್ಟಿತ್ತು. 'ನಮ್ಮ ಹುಡುಗ' (ಒಬಾಮಾ ತಂದೆ ಕೆನ್ಯಾದ ಪ್ರಜೆ) ಅಮೆರಿಕದ ಅಧ್ಯಕ್ಷ ಆದ ಅಂತ ಮಾತ್ರವಲ್ಲ. ಆಫ್ರಿಕಾದ ಬಗ್ಗೆ ಅಮೆರಿಕದ ಧೋರಣೆಯಲ್ಲಿ ಬದಲಾವಣೆ ಬರಬಹುದು. ಆಫ್ರಿಕಾದ ಬೆಳವಣಿಗೆಗೆ ಅಮೆರಿಕ ಸಹಾಯ ಹಸ್ತ ಚಾಚಬಹುದು ಎಂಬ ನಿರೀಕ್ಷೆ ಸಹ ಇತ್ತು. ಇತರ ಹಲವು ಜನರಂತೆ ಒಬಾಮಾ ಆಫ್ರಿಕನ್ನರಿಗೂ ನಿರಾಸೆ ತಂದಿದ್ದಾರೆ. ಹೊಸ ಆಫ್ರಿಕಾ-ಸ್ನೇಹಿ ನೀತಿ ಒಬಾಮಾರಿಂದ ಬರಲಿಲ್ಲ ಮಾತ್ರವಲ್ಲ. ಅಧ್ಯಕ್ಷ ಬುಶ್ ರ ಆಫ್ರಿಕಾ ನೀತಿಯನ್ನು ಭಾರೀ ಉತ್ಸಾಹದಿಂದ ಮುಂದೆ ತೆಗೆದುಕೊಂಡು ಹೋಗಿದ್ದಾರೆ. 2007 ರಲ್ಲಿ ಅಧ್ಯಕ್ಷ ಬುಶ್ ಆಫ್ರಿಕಾದಲ್ಲಿ ಹೊಸ ಅಮೆರಿಕನ್ ಮಿಲಿಟರಿ ಕಮಾಂಡ್ ಸ್ಥಾಪಿಸುವ ನಿರ್ಧಾರ ಮಾಡಿದ್ದರು.

ಅಮೆರಿಕದ ಕಾಲು ಭಾಗ ತೈಲ ಆಫ್ರಿಕಾದಿಂದ ಬರಬೇಕು. ಭಯೋತ್ಪಾದನೆಯ ವಿರುದ್ಧ ಯುದ್ಧವನ್ನು ಆಫ್ರಿಕಾಕ್ಕೂ ವಿಸ್ತರಿಸಬೇಕು. ಆಫ್ರಿಕಾದಲ್ಲಿ 'ಪ್ರಜಾಪ್ರಭುತ್ವ' ಮತ್ತು ಅಮೆರಿಕನ್ ಹಿತಾಸಕ್ತಿ ಮತ್ತು ಮಿತ್ರರನ್ನು ಕಾಪಾಡಲು ಅಲ್ಲಿ ಮಿಲಿಟರಿ ಪಡೆಗಳ ನೆಲೆ ಸ್ಥಾಪಿಸಬೇಕು. ಆಫ್ರಿಕಾಕ್ಕೆ ಮೀಸಲಾದ ಹೊಸ ಆಫ್ರಿಕನ್ ಮಿಲಿಟರಿ ಕಮಾಂಡ್ 'ಆಫ್ರಿಕಾಮ್' ಸ್ಥಾಪಿಸಬೇಕು. ಇದು ಬುಶ್ ಅವರ ಆಫ್ರಿಕನ್ ಮಂತ್ರವಾಗಿತ್ತು. ತೈಲ, ಇಸ್ಲಾಮಿಕ್ ಭಯೋತ್ಪಾದನೆ, ಮಿಲಿಟರಿ ಬಳಸಿ 'ಪ್ರಜಾಪ್ರಭುತ್ವ'ದ ಸ್ಥಾಪನೆ ಬಿಟ್ಟು ಬುಶ್ ಇನ್ನೇನನ್ನು ಯೋಚಿಸಲು ಸಾಧ್ಯ? ಅಧ್ಯಕ್ಷೀಯ ಅಭ್ಯರ್ಥಿ ಆಗಿ 'ಆಫ್ರಿಕಾಮ್' ನ್ನು ವಿರೋಧಿಸಿದ್ದ ಒಬಾಮಾ ಈಗ ಅದನ್ನು ಅತಿ ಉತ್ಸಾಹದಿಂದ ಜಾರಿ ಮಾಡಿ ಮುಂದೊಯ್ಯಲು ಹೊರಟಿದ್ದಾರೆ.

ಕಳೆದ ಅಕ್ಟೋಬರ್ 1 ರಿಂದ ಪಶ್ಚಿಮ ಆಫ್ರಿಕಾದ ಲಿಬೇರಿಯಾದ ರಾಜದಾನಿ ಮನ್ರೋವಿಯಾದಲ್ಲಿ 'ಆಫ್ರಿಕಾಮ್' ಕಾರ್ಯಾಚರಣೆ ಆರಂಭಿಸಿದೆ. 'ಆಫ್ರಿಕಾಮ್' ಆಫ್ರಿಕನ್ನರ ಒಳ್ಳೇಯದಕ್ಕೆ. ಆಫ್ರಿಕಾದ ದೇಶಗಳು ಅಮೆರಿಕದ ನೆಲೆಗಳಿಗೆ ಜಾಗ ಕೊಡಬೇಕು. ಒಬಾಮಾ ಆಫ್ರಿಕಾ ಪ್ರವಾಸ ಮಾಡಿ ಈ ಸಂದೇಶವನ್ನು ಎಲ್ಲಾ ನಾಯಕರಿಗೆ ಕೊಡಲು ಪ್ರಯತ್ನಿಸಿದರು. 'ಆಫ್ರಿಕಾಮ್' ಆಫ್ರಿಕಾಕ್ಕೆ ಬೇಕಾಗಿಲ್ಲ. ಮಿಲಿಟರಿ ಮಧ್ಯಪ್ರವೇಶದ ಕಾಲ ಆಫ್ರಿಕಾದಲ್ಲಿ ಎಂದೋ ಮುಗಿದಿದೆ. ಆಫ್ರಿಕಾಕ್ಕೆ ಬೇಕಾಗಿರುವುದು ಬೆಳವಣಿಗೆಗೆ ಹಣ ಮತ್ತು ತಂತ್ರಜ್ಞಾನ. ಇದು ಆಫ್ರಿಕನ್ ದೇಶಗಳ ಹಲವು ಸಂಘಟನೆಗಳ ಒಕ್ಕೊರಲಿನ ಅಭಿಪ್ರಾಯ ಆಗಿತ್ತು.

ಆಫ್ರಿಕನ್ ಯೂನಿಯನ್, ದಕ್ಷಿಣ ಆಫ್ರಿಕನ್ ವಿಕಾಸ ಮಂಡಳಿ, ಪಶ್ಚಿಮ ಆಫ್ರಿಕದ ದೇಶಗಳ ಆರ್ಥಿಕ ಸಮುದಾಯ - ಇವು ಮೂರು ಸಂಘಟನೆಗಳೂ 'ಆಫ್ರಿಕಾಮ್'ನ್ನು ವಿರೋಧಿಸಿವೆ. ಲಿಬೇರಿಯಾ ಬಿಟ್ಟು ಬೇರೇ ಯಾವ ದೇಶ ಅಮೆರಿಕನ್ ಮಿಲಿಟರಿ ನೆಲೆಗೆ ಜಾಗ ಕೊಡಲು ತಯಾರಿಲ್ಲ, ಅಮೆರಿಕದ ತೀವ್ರ ಒತ್ತಡದ ನಂತರವೂ. ಮಾತ್ರವಲ್ಲ ಈ ಕ್ರಮವನ್ನು ಬಲವಾಗಿ ಟೀಕಿಸಿದ್ದಾರೆ. ಲಿಬೇರಿಯಾ ಶೀತ ಸಮರದ ದಶಕಗಳಲ್ಲಿ ಸಿ.ಐ.ಎ.ಯ ಪಿತೂರಿಗಳ ಕೇಂದ್ರ ಆಗಿತ್ತು. ಆಫ್ರಿಕದಲ್ಲಿ ಮಧ್ಯಪ್ರವೇಶಕ್ಕೆ ನೆಲೆಯಾಗಿತ್ತು ಎಂದು ಇಲ್ಲಿ ನೆನೆಸಿಕೊಳ್ಳಬಹುದು. ಅಮೆರಿಕ ಕಾಂಗೋದ ಭ್ರಷ್ಟ ಸರ್ವಾಧಿಕಾರಿ ಮೊಬುಟು ಸೀಕೋ, ವರ್ಣಭೇಧ-ಪರ ದಕ್ಷಿಣ ಆಫ್ರಿಕಾ, ಅಂಗೋಲಾ ಮತ್ತು ಮೊಜಾಂಬಿಕ್‌ಗಳ ವಸಾಹತುಶಾಹಿ ಮತ್ತು ಆ ಮೇಲಿನ ಬಲಪಂಥೀಯ ಶಕ್ತಿಗಳನ್ನು ಬೆಂಬಲಿಸಿತ್ತು. ರಾಷ್ಟ್ರೀಯ ವಿಮೋಚನೆ ಮತ್ತು ಎಡಪಂಥೀಯ ಶಕ್ತಿಗಳನ್ನು ನಿರ್ನಾಮ ಮಾಡಲು ಪ್ರಯತ್ನಿಸಿತ್ತು.


ಆಫ್ರಿಕಾದಲ್ಲಿ ಅಗಾಧ ತೈಲ ಸಂಪತ್ತು ಇದೆ. ಅದನ್ನು ವಿಕಾಸಗೊಳಿಸಲು ಚೀನಾ ಆ ದೇಶಗಳೊಂದಿಗೆ ಜಂಟಿ ಯೋಜನೆಗಳನ್ನು ಭರದಿಂದ ಆರಂಭಿಸಿದೆ. ತೈಲ ಸಂಪತ್ತಿನ ಮೇಲೆ ತನ್ನ ಏಕಸ್ವಾಮ್ಯ ಮತ್ತು ನಿಯಂತ್ರಣ ಸಾಧಿಸಲು ಮಿಲಿಟರಿ ವಿಧಾನ ಬಿಟ್ಟು ಅಮೆರಿಕನ್ ಸರ್ಕಾರ ಇನ್ನೇನನ್ನು ಯೋಚಿಸಲು ಸಾಧ್ಯ? ಅದಕ್ಕಾಗೇ ಈ 'ಆಫ್ರಿಕಾಮ್' ಎಂದು ಎಲ್ಲರಿಗೂ ಗೊತ್ತು. 'ಆಫ್ರಿಕಾಮ್' ಮಿಲಿಟರಿ ಮುಖ್ಯಸ್ಥ ಜನರಲ್ ವಾರ್ಡ ಅವರನ್ನು ಭೇಟಿ ಮಾಡಲು ದಕ್ಷಿಣ ಆಫ್ರಿಕಾ ಮುಂತಾದ ಪ್ರಮುಖ ದೇಶಗಳ ರಕ್ಷಣಾ ಮಂತ್ರಿಗಳು, ಮಿಲಿಟರಿ ಮುಖ್ಯಸ್ಥರು ಸಹ ಈ ವರೆಗೆ ನಿರಾಕರಿಸಿದ್ದಾರೆ.

ಆಫ್ರಿಕಾದ ರಾಜಕೀಯ-ಮಿಲಿಟರಿ ನಾಯಕರಿಂದ ಅಸಹಕಾರ ಎದುರಿಸಿರುವ ಜನರಲ್ ವಾರ್ಡ 'ಆಫ್ರಿಕಾಮ್' ಹಿಂದೆ ಯಾವುದೇ 'ಗುಪ್ತ ಅಜೆಂಡಾ' ಇಲ್ಲ. ತೈಲ ಸಂಪತ್ತಿನ ಮೇಲೆ ನಿಯಂತ್ರಣ ಸಾಧಿಸುವುದು ಸಹ ಅದರ ಉದ್ದೇಶ ಅಲ್ಲ ಎಂದು ಹೇಳಿಕೆ ಕೊಡಬೇಕಾಗಿ ಬಂದಿದೆ. ಆಫ್ರಿಕನ್ ದೇಶಗಳ ನಡುವೆ ವಿವಾದ ಸಂಘರ್ಷ ಏನಾದರೂ ಇದ್ದರೆ ಅದನ್ನು ಈ ಖಂಡದ ನಾಯಕರು ಬಗೆಹರಿಸಲು ಸಾಧ್ಯ. ಇದಕ್ಕಾಗಿ ವಿದೇಶಿ ನಾಯಕರಾಗಲೀ ಸೈನ್ಯವಾಗಲೀ ಬೇಕಾಗಿಲ್ಲ. ಇತ್ತೀಚೆಗೆ ಜಿಂಬಾಬ್ವೆ, ಕೀನ್ಯಾಗಳಲ್ಲಿ ರಾಜಕೀಯ ಬಿಕ್ಕಟ್ಟನ್ನು ಆಫ್ರಿಕನ್ ಯೂನಿಯನ್ ನಾಯಕರು ಪರಿಹರಿಸಿದ್ದು ಉದಾಹರಣೆ ಎಂದು ಅವರು ಹೇಳುತ್ತಾರೆ. ಆಫ್ರಿಕಾಕ್ಕೆ ಬೇಕಾಗಿರುವುದು ಸಾಲ ಮನ್ನಾ, ನ್ಯಾಯಯುತ ವಾಣಿಜ್ಯ ನೀತಿಗಳು, ವಿಕಾಸ ಸಹಾಯ. ಮಿಲಿಟರಿ ನೆಲೆಗಳಲ್ಲ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೂ ಅಮೆರಿಕದ ಸರ್ಕಾರ ಮಿಲಿಟರಿ ಕಮಾಂಡ್ ಬಿಟ್ಟು ಬೇರೆ ಯೋಚನೆ ಮಾಡಲೂ ತಯಾರಿಲ್ಲ. ಕಳೆದ 17 ವರ್ಷಗಳಲ್ಲಿ ಮಿಲಿಟರಿ ಸಹಾಯವನ್ನು ಇಮ್ಮಡಿಗೊಳಿಸಿದೆ. 47 ದೇಶಗಳ ಸೈನ್ಯದ ತರಬೇತಿ ಹೆಸರಲ್ಲಿ ಅಲ್ಲಿ ಮಧ್ಯಪ್ರವೇಶ ಮಾಡುತ್ತಿದೆ.

ಕಾಮ್ರೇಡ್ ಅಲ್ಮೇಡಾ ಲಾಲ್ ಸಲಾಂ !!

ಕ್ಯೂಬಾದ ಕ್ರಾಂತಿಕಾರಿ ಹೋರಾಟದ ಪ್ರಮುಖ ಕಮಾಂಡರ್‌ಗಳಲ್ಲಿ ಒಬ್ಬರಾದ ಜೂವಾನ್ ಅಲ್ಮೇಡಾ ಬೋಸ್ಕ್ ನಿಧನ ಹೊಂದಿದ್ದಾರೆ. 'ಕ್ರಾಂತಿಕಾರಿ ಗುಂಪಿನ ನಾಯಕ, ಮೊಂಕಾಡಾ ದಾಳಿಯಲ್ಲಿ ಪಾಲ್ಗೊಂಡ ಹೋರಾಟಗಾರ, ಸಹ-ಕೈದಿ, ಗ್ರಾನ್ಮಾ ಯಾತ್ರೆಯಲ್ಲಿ ಪ್ಲಾಟೂನ್ ಕಮಾಂಡರ್, ಗೆರಿಲ್ಲಾ ಸೈನ್ಯದ ಮೂರನೇ ಪೂರ್ವ ದಳ ಆರಂಭಿಸಲು ಹೊರಟ ತುಕಡಿಯ ನಾಯಕ, ಕ್ಯೂಬಾ ವಿಮೋಚನೆ ಸಾಧಿಸಿದ ಗೆರಿಲ್ಲಾ ಸೈನ್ಯದ ಉನ್ನತ ನಾಯಕತ್ವದ ಭಾಗವಾಗಿದ್ದ ಈ ಕರಿಯ ಸಮರಶೀಲ ಕಾರ್ಮಿಕ ನಾಯಕ' ನಿಗೆ ಫಿಡೆಲ್ ಕ್ಯಾಸ್ಟ್ರೋ ವಿಶೇಷ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಕಳೆದ 50 ವರ್ಷಗಳಲ್ಲಿ ಕ್ಯೂಬಾದ ಕ್ರಾಂತಿಯ ರಕ್ಷಣೆಯಲ್ಲಿ ಸಹ ಅವರ ವಿಶೇಷ ಪಾತ್ರವಿತ್ತು. 300 ಕ್ಕಿಂತಲೂ ಹೆಚ್ಚು ಕವನಗಳನ್ನು ಬರೆದಿದ್ದ ಕಮಾಂಡರ್ ಜೂವಾನ್ ಅಲ್ಮೇಡಾ ಕ್ಯೂಬಾದ ಕ್ರಾಂತಿಯ ಹೋರಾಟದ ಕೆಚ್ಚು, ಧೃಢತೆ, ಕನಸುಗಾರಿಕೆ ಎಲ್ಲವನ್ನೂ ಪ್ರತಿನಿಧಿಸುವ ಅಪರೂಪದ ನಾಯಕರಾಗಿದ್ದರು. ○



ಶರತ್‌ಚಂದ್ರ

ಅಫಘಾನಿಸ್ತಾನದ ಬೋಗಸ್ ಚುನಾವ[ಣೆ] ಮತ್ತು ಫಲಿತಾಂಶ

ಅಫ್ಘಾನಿಸ್ತಾನದ ಅಧ್ಯಕ್ಷೀಯ ಚುನಾವಣೆಗಳ ಮ
ವಾರಗಳ ನಂತರವೂ ಫಲಿತಾಂಶ ಅಧಿಕೃತವಾ
ಹೊರ ಬಿದ್ದಿಲ್ಲ. ಅನಧಿಕೃತವಾಗಿ ಅಧ್ಯಕ್ಷ ಕರ್ಜಾ
ಶೇ. 98 ಕ್ಕೂ ಹೆಚ್ಚಿನ ಮತಗಣನೆ ನಂತರ ಶೇ.
ಮತ ಗಳಿಸಿದ್ದಾರೆ ಎಂಬ ಅನಧಿಕೃತ ವರದಿ ಮ
ಬಂದಿದೆ. ಹಾಗಾದರೆ ಚುನಾವಣೆ ಫಲಿತಾ
ಘೋಷಿಸಲು ವಿಳಂಬ ಯಾಕೆ ? ಯಾಕೆಂದರೆ ಅ
ಜೊತೆಗೆ ಅತೀ ಕಡಿಮೆ ಮತದಾನ, ಭಾ
ಪ್ರಮಾಣದಲ್ಲಿ ಅಕ್ರಮಗಳು ನಡೆದದ್ದರ ಬಗ್ಗೆ
ವರದಿಗಳು ಬಂದಿವೆ. ಹಲವು ಮತಗಟ್ಟೆಗಳಲ್ಲಿ ಅ
ಕರ್ಜಾಯಿ ಎಲ್ಲಾ ಮತಗಳನ್ನು ಗಳಿಸಿದ್ದಾರಂತೆ! ಹ
ಕಡೆ ಶೇ. 20 ಕ್ಕಿಂತಲೂ ಕಡಿಮೆ ಮತದಾನ ಆ
ತಾಲೀಬಾನ್ ನಿಯಂತ್ರಿತ ಮೂರನೇ ಒ
ಭಾಗದಷ್ಟು ಪ್ರದೇಶದಲ್ಲಿ ಚುನಾವಣೆನೇ ನಡೆದಿ

ಚುನಾವಣೆ ಕ್ರಮಬದ್ಧತೆ ಮತ್ತು ನ್ಯಾಯಬ
ಬಗ್ಗೆ ಸ್ವತಂತ್ರ ಚುನಾವಣಾ ಕಮಿಶನ್ ವ
ಚುನಾವಣಾ ದೂರುಗಳ ಕಮಿಶನ್ ನಡುವೆ ತೀ
ಭಿನ್ನಾಭಿಪ್ರಾಯ ಬಂದಿದೆಯಂತೆ. ಚುನಾವಣೆ ವ
ಪರಿಣಾಮ ಬೀರಬಲ್ಲ 270 ಕ್ಕೂ ಹೆಚ್ಚು ಗಂ
ಅಕ್ರಮಗಳ ದೂರುಗಳ ಹಿನ್ನೆಲೆಯಲ್ಲಿ ಚುನಾವ
ಫಲಿತಾಂಶ ತಡೆ ಹಿಡಿಯಬೇಕು ಎಂದು ಚುನಾವ
ದೂರುಗಳ ಕಮಿಶನ್ ಒತ್ತಾಯಿಸುತ್ತಿದೆಯಂತೆ. ಅ
ಚುನಾವಣಾ ಫಲಿತಾಂಶ ತಡೆ ಹಿಡಿಯಲು
ಮಾತ್ರ ಕಾರಣವಲ್ಲ. ಇದು ಬೋಗಸ್ ಚುನಾ
ಮತ್ತು ಬೋಗಸ್ ಫಲಿತಾಂಶ ಎ
ಅಫ್ಘಾನಿಸ್ತಾನದಲ್ಲಿ ಎಲ್ಲರಿಗೂ ಗೊತ್ತು.

ಒಂದು ಕಡೆ ಅಮೆರಿಕ-ಬ್ರಿಟನ್ ಮುಂ
ಸರ್ಕಾರಗಳಿಗೆ ತಮ್ಮ ಪ್ರಜೆಗಳು ಯ
ಮುಂದುವರೆಸಲು ಬೆಂಬಲ ಮುಂದುವರೆಸು
ಪ್ರಜಾಪ್ರಭುತ್ವ ಗೆದ್ದಿದೆ ಎಂದು ತೋರಿಸುವ ಹಂ
ಇನ್ನೊಂದು ಕಡೆ ಅಧ್ಯಕ್ಷ ಕರ್ಜಾಯಿ ಅವರ ಭ್ರ
ಚುನಾವಣಾ ಅಕ್ರಮ, ಕೆಲವು ಅಮೆರಿಕನ್ ಮಿ
ಕ್ರಮಗಳ ವಿರೋಧ ತಡೆದುಕೊಳ್ಳುವ ಸ್ಥಿತಿ
ಅಮೆರಿಕನ್ ಸರ್ಕಾರ ಇಲ್ಲ. ಆದರೆ ಅಧ್ಯಕ್ಷ ಕರ್ಜಾ
ವಿರುದ್ಧ ಯಾವುದೇ ಪ್ರಬಲ ಅಭ್ಯರ್ಥಿ ಒಡ್ಡಲ
'ಬದಲಾವಣೆ' ತೋರಿಸಲು ಸಹ ಸಾಧ್ಯವಾಗು
ಮೊದಲ ಸುತ್ತಿನಲ್ಲಿ ಕರ್ಜಾಯಿ ವಿಜಯಿ
ಘೋಷಿಸಬೇಕೆ ? ಅಥವಾ ಎರಡನೇ ಸು
ಕರ್ಜಾಯಿ ವಿಜಯಿ ಅಂತ ಘೋಷಿಸಿದ
ಬೋಗಸ್ ಚುನಾವಣೆ ಮತ್ತು ಫಲಿತಾಂಶದ
ಹೆಚ್ಚು ನಂಬಿಕಸ್ತನ ಅಥವಾ ಕಡಿಮೆ ಸ
ಅಫ್ಘಾನಿಸ್ತಾನ ಮತ್ತು ಹೊರಗೆ ಬರಬಹುದೆ
ಅಮೆರಿಕನ್ ಅಧಿಕಾರಿಗಳು ತೂಗುತ್ತಿದ್ದಾರಂ

ಅಲ್ಲದೆ ಕರ್ಜಾಯಿ ಮೇಲೊಬ್ಬ 'ಸಿ.
ಹೊರಿಸಿ ಆತನನ್ನು 'ಡಮ್ಮಿ' ಮಾಡುವ ಯೋ
ಸಹ ಇದೆಯಂತೆ. ಅವರ ಈ ಎಲ್ಲಾ 'ತೂಗ
ಮುಗಿಯುವ ವರೆಗೆ ಚುನಾವಣಾ ಫಲಿತಾಂಶ
ಬರುವುದಿಲ್ಲ. ಚುನಾವಣೆ ಕ್ರಮಬದ್ಧ
ನ್ಯಾಯಯುತ ಎಂದು ಸರ್ಟಿಫಿಕೆಟ್ ಕೊ
ಹೊರಟಿದ್ದ ಯೂರೋಪಿಯನ್ ಯೂನಿ
ವಿಶ್ವಸಂಸ್ಥೆ ಅಧಿಕಾರಿಗಳು ಸಹ ತಮ್ಮ ಸರ್ಟಿ
ತಡೆ ಹಿಡಿದಿದ್ದಾರಂತೆ. ಹೀಗಿದೆ ಅಫ್ಘಾನಿ
ಬೋಗಸ್ ಚುನಾವಣೆ ಮತ್ತು ಫಲಿತಾ
ಮಹಿಮೆ!

ಜಾಗತಿಕ ಆರ್ಥಿಕ ಬಿಕ್ಕಟ್ಟು...

ರಿಂದ

ಾಗುತ್ತದೆ.

ಯುಪಿಎ-2 ಸರಕಾರ ಮಾಡುತ್ತಿರುವುದೇ ವಿವಿಧ ತೆರಿಗೆ ರಿಯಾಯ್ತಿಗಳಿಂದಾಗಿ ಕಳೆದ ಸರಕಾರ 4.18ಲಕ್ಷ ರೂ. ಗಳಷ್ಟು ಯವನ್ನು ಬಿಟ್ಟುಕೊಟ್ಟಿದೆ ಎಂದು ಈ ವರ್ಷದ ವರಗಳು ತಿಳಿಸಿರುವುದನ್ನು ನಾವು ದ್ದೇವೆ. ಈ ರಿಯಾಯ್ತಿಗಳು ಏರಿಯುತ್ತಲೇ ಇವೆ. ಈಗ ಕಾರ್ಪೊರೇಟ್ ತೆರಿಗೆ(ಸರ್ಚಾಜ)ಯನ್ನು ತೆಗೆದು ಹಾಕಿ, ು ತೆರಿಗೆಯ ವಿನಾಯ್ತಿ ಮಿತಿಯನ್ನು ಏರಿಸಿ 10,000 ಕೋಟಿ ರೂಪಾಯಿಗಳ ಬಕ್ಷೀಷನ್ನು ಕೊಡಮಾಡಲಾಗಿದೆ. ಹೀಗೆ ಸರಕಾರವೇ ಡ ಪ್ರಕಾರ ಅದು 4.28ಲಕ್ಷ ಕೋಟಿ ಆದಾಯವನ್ನು ಬಿಟ್ಟು ಕೊಟ್ಟಿದೆ.

ಪೂರ್ಣ ಚಿಂತನೆ

ರೇಟ್ ಮಂದಿಗೆ ಇದರಿಂದ ಹೆಚ್ಚಿನ ವಾಳ ಲಭ್ಯವಾಗಿ ಅವರು ತಮ್ಮ ಟಿಕೆಗಳನ್ನು ವಿಸ್ತರಿಸುತ್ತಾರೆ, ಆಮೂಲಕ ಕ್ಕೆ ಉತ್ತೇಜನೆ ಸಿಗುತ್ತದೆ ಎಂಬ ನಂಬಿಕೆಯಿಂದ ಹೀಗೆ ಮಾಡಲಾಗುತ್ತಿದೆ. ಆದರೆ ಇಂತಹ ಚಿಂತನೆಯಲ್ಲಿ ಒಂದು ಮೂಲಭೂತ ದೋಷವಿದೆ. ಕೇವಲ ಬಂಡವಾಳದ ಲಭ್ಯತೆಯಿಂದಲೇ ಆರ್ಥಿಕಕ್ಕೆ ಉತ್ತೇಜನೆ ಸಿಗಲಾರದು. ಇಲ್ಲಿ ಉತ್ಪಾದನೆಯಾಗುವ ವಸ್ತುಗಳನ್ನು ಬಳಸಲು ಕೊಳ್ಳುವ ಶಕ್ತಿಯಿರುವ ಜನಗಳು ಇಲ್ಲದಿದ್ದರೆ ಎಷ್ಟೇ ಬಂಡವಾಳ ಲಭ್ಯವಾದರೂ ಪ್ರಯೋಜನವಿಲ್ಲ. ಅದರ ಬದಲು ಇಷ್ಟು ಹಣವನ್ನು ಮೂಲ ರಚನೆಗಳನ್ನು ಕಟ್ಟುವ ನೇರ ಸಾರ್ವಜನಿಕ ಹೂಡಿಕೆಗಳಲ್ಲಿ ತೊಡಗಿಸಿದ್ದರೆ, ಅದರಿಂದ ಉದ್ಯೋಗ ನಿರ್ಮಾಣವಾಗಿ, ಜನಗಳ ಖರೀದಿ ಶಕ್ತಿ ಹೆಚ್ಚಿ ಆಮೂಲಕ ಆರ್ಥಿಕಕ್ಕೆ ಹೆಚ್ಚಿನ ಉತ್ತೇಜನ ಸಿಗುತ್ತಿತ್ತು.

ಆದರೆ ಸರಕಾರಗಳು ಹೆಚ್ಚಿನ ಸಾರ್ವಜನಿಕ ಹೂಡಿಕೆಗಳ ಮೂಲಕ ಜನಗಳನ್ನು ಪಾರು ಮಾಡಲು ಮಧ್ಯಪ್ರವೇಶಿಸುವ ಬದಲು, ವಿವಿಧ ಬೇಲೌಟ್ ಪ್ಯಾಕೇಜುಗಳು ಅಥವಾ ಪಾರು ಯೋಜನೆಗಳ ಮೂಲಕ ಕಾರ್ಪೊರೇಟ್ ವಲಯವನ್ನು ಎತ್ತಿ ನಿಲ್ಲಿಸಲು ಮಧ್ಯಪ್ರವೇಶಿಸುವುದು ಬಂಡವಾಳ ಶಾಹಿಯ ಆಂತರಿಕ ತರ್ಕ. ಜಗತ್ತಿನ ಇತರೆಡೆಗಳಂತೆ ನಮ್ಮದೇಶದಲ್ಲೂ ಇದನ್ನೇ ಅನುಸರಿಸಲಾಗುತ್ತಿದೆ. ಲೆಹ್ಮಾನ್ ಬ್ರದರ್ಸ್ ಕುಸಿತದ ನಂತರ ಪ್ರಮುಖ ಭಾರತೀಯ ಕಂಪನಿಗಳ (ಮುಂಬೈ ಶೇರು ಪೇಟೆಯಲ್ಲಿ ಪಟ್ಟಿಯಾಗಿರುವ 200 ಕಂಪನಿಗಳ) ನಿರ್ವಹಣೆಯಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು. 2008ರ ಕೊನೆಯ ಮೂರು ತಿಂಗಳಲ್ಲಿ ಈ ಕಂಪನಿಗಳ ಆದಾಯ 12.8ಶೇ.ದಷ್ಟು ಹೆಚ್ಚಿತು, ಆದರೆ ನಿವ್ವಳ ಲಾಭ 17.6ಶೇ.ದಷ್ಟು ಇಳಿಯಿತು. 2009ರ ಮೊದಲ ಮೂರು ತಿಂಗಳಲ್ಲಿ ಅವುಗಳ ಆದಾಯ ಕೇವಲ 0.2ಶೇ.ದಷ್ಟು ಹೆಚ್ಚಿದರೂ, ನಿವ್ವಳ ಲಾಭ 28.6ಶೇ.ದಷ್ಟು ಜಿಗಿತ ಕಂಡಿತು. ಮುಂದಿನ ಮೂರು ತಿಂಗಳಲ್ಲಿ ಅವುಗಳ ಆದಾಯ 7 ಶೇ.ದಷ್ಟು ಇಳಿದರೂ ನಿವ್ವಳ ಲಾಭಗಳು ಮಾತ್ರ 20.7ಶೇ.ದಷ್ಟು ಏರಿದವು. ಅಂದರೆ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡು ಜನಗಳ ಪಾಲಿಗೆ ನಿರುದ್ಯೋಗ, ಸಂಕಟಗಳು ಹೆಚ್ಚುತ್ತಿದ್ದರೂ ಈ ಮಂದಿ ಬೇಲೌಟ್ ಪ್ಯಾಕೇಜುಗಳ ಕೃಪೆಯಿಂದಾಗಿ ಸೂಪರ್ ಲಾಭಗಳನ್ನು ಗಿಟ್ಟಿಸುತ್ತಿದ್ದಾರೆ. ಹೀಗಿದೆ ನೋಡಿ, 'ಮೊದಲು ಲಾಭಗಳು-ಆಮೇಲೆ ಜನಗಳು' ಎಂಬ ಬಂಡವಾಳಶಾಹಿ ತರ್ಕ!

ಹೀಗಿರುವಾಗ ನಮ್ಮ ಸರಕಾರ 'ಮೊದಲು ಜನಗಳು-ಆಮೇಲೆ ಲಾಭಗಳು' ಎಂಬ ಧೋರಣೆಯನ್ನು ಅನುಸರಿಸಿ ಸಾರ್ವಜನಿಕ ಹೂಡಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸುವಂತೆ ಒತ್ತಡ ತರಲು ಜನಗಳ ಹೋರಾಟಗಳನ್ನು ಬಲಪಡಿಸಲೇ ಬೇಕಾಗಿದೆ.



ಒಳ್ಳೆ 'ದ್ರೌಪದಿ' ತರಹ...

ಲ್ಯಾಂಡ್ ಲೈನ್ ಒಳ್ಳೇ 'ದ್ರೌಪದಿ ತರಹ' ಅದ್ಕೆ ನಿಮ್ಮ ಮೊಬೈಲ್‌ಗೆ ಫೋನ್ ಮಾಡಿದೆ. ಬೇಸರ ಮಾಡ್ಕೊಳ್ಳೆ ಇದ್ರೆ ಸ್ವಲ್ಪ ಆಫೀಸರ್‌ಗೆ ಮಾತಾಡ್ಬಹುದಾ?

ನೋಡಿ, ಆಫೀಸಿನಲ್ಲಿ ಸಾಮಾನ್ಯವಾಗಿ ಎಲ್ಲರೂ ಬಳಸುವುದರಿಂದ ಸುಲಭವಾಗಿ ಸಂಪರ್ಕ ಸಿಗಲಾರದ ದೂರವಾಣಿಗೆ ಹೋಲಿಕೆ, ಪರಿಸ್ಥಿತಿಯ ಕೈಗೊಂಬೆಯಾಗಿ ಪಂಚ ಪಾಂಡವರ ಪತ್ನಿಯಾಗಬೇಕಾಗಿ ಬಂದ ದ್ರೌಪದಿ!

ಓಹ್! ನಿಮ್ಮ ಹತ್ತಿರ ಹೀಗೆ ಹೇಳಬಾರದಿತ್ತು ... ನಿರ್ಲಜ್ಜತನದ ಉತ್ತರ. ಮಹಾಭಾರತದ ಕಥೆಯನ್ನು ಸೃಷ್ಟಿಸಿದವರು ಯಾರು? ಕಥೆಯಲ್ಲಿ ಬರುವಂತೆ ಪ್ರತಿಬಿಂಬವನ್ನು ನೋಡಿ ಮತ್ಸ್ಯವನ್ನು ಬೇಧಿಸಿದ ಅರ್ಜುನನಿಗೆ ಹಾಕಿದ ವರಮಾಲೆ ತನ್ನನ್ನು ಐವರು ಗಂಡಂದಿರ ಹೆಂಡತಿಯನ್ನಾಗಿಸಿ ಬಿಡಬಹುದೆಂಬ ಕನಿಷ್ಠ ಸುಳಿವನ್ನಾದರೂ ಆಕೆಗೆ ಯಾರಾದರೂ ಕೊಟ್ಟಿದ್ದರೇ? ಒಂದೊಮ್ಮೆ ದ್ರೌಪದಿಗೆ ಬಿಲ್ಲುಗಾರಿಕೆಯ ಜಾಣಾಕ್ಷತೆಯ ಪಣವಿಲ್ಲದೆ ಸಭೆಯಲ್ಲಿದ್ದ ವಿವಾಹ ಯೋಗ್ಯ ಯುವಕರಲ್ಲಿ ಆಯ್ಕೆ ಮಾಡಿಕೊಳ್ಳುವ ಅಥವಾ ಬಿಲ್ಲುಗಾರಿಕೆಯೇ ಪಣವಾದರೂ ಆಕೆಗೆ ಆಯ್ಕೆಯ ಸ್ವಾತಂತ್ರ್ಯವಿದ್ದಲ್ಲಿ ಕರ್ಣ ಅರ್ಜುನರಲ್ಲಿ ಆಕೆಯ ಆಯ್ಕೆ ಯಾರಾಗುತ್ತಿದ್ದರು? ಐವರು ಗಂಡಂದಿರ ಹೆಂಡತಿಯಾಗುವ ಕುರಿತು ಆಕೆಯ ಅಭಿಪ್ರಾಯವನ್ನು ಕೇಳಿದ್ದರೆ, ಆಯ್ಕೆಯ ಅಧಿಕಾರ ನೀಡಿದ್ದರೆ ಆಕೆ ಸಮ್ಮತಿಸುತ್ತಿದ್ದಳೇ? ಹೆಣ್ಣಿನ ಕುರಿತು ಅಭಿಪ್ರಾಯಗಳು ಹೀಗೆ ಮುಂದುವರಿಯಬೇಕೇ?

■ ವಿಮಲಾ ಕೆ.ಎಸ್.

ಇವರೇನು ಹೆಲಿಕಾಪ್ಟರ್....

1 ರಿಂದ

ಜ್ಯದ ರಾಜಧಾನಿ ಬೆಂಗಳೂರಿನಲ್ಲಿ ರ್ 17 ರಂದು ಸಿಪಿಐ(ಎಂ) ಪಕ್ಷದಿಂದ ಪ್ರತಿಭಟನಾ ರ‍್ಯಾಲಿ ನಡೆಯಿತು. ನಗರದ ರ್ಕಲ್ ವೃತ್ತದಲ್ಲಿ ಸೇರಿದ ಸಾವಿರಾರು ಎಂ) ಕಾರ್ಯಕರ್ತರು ಸರ್ಕಾರ ಕಾರಿ ಧೋರಣೆ ವಿರುದ್ಧ ಘೋಷಣೆ ಮೆರವಣಿಗೆ ಹೊರಟದ್ದು ಮೈಸೂರು ವೃತ್ತ ಅರಮನೆ ಮಾರ್ಗವಾಗಿ ಮಂತ್ರಿಗಳ ಮನೆಯ ಕಡೆಗೆ ಹೊರಟಿದ್ದು, ಗೆಯನ್ನು ಪೊಲೀಸರು ಚಾಲುಕ್ಯ ವೃತ್ತದಲ್ಲಿ ರು. ಅಲ್ಲಿಯೇ ಪ್ರತಿಭಟನಾ ಸಭೆ ಯಿತು.

ಪ್ರವಾದ ಬೆಲೆಏರಿಕೆಯ ಪರಿಸ್ಥಿತಿಯಲ್ಲಿ ಕನಿಷ್ಠ ಕೂಲಿಯನ್ನು ನಿಗದಿ ಪಡಿಸಬೇಕು, ರ್ಮಿಕ ಪದ್ಧತಿಯನ್ನು ನಿಯಂತ್ರಿಸಬೇಕು, ದ ಕೆಲಸ ಕಳೆದುಕೊಳ್ಳುತ್ತಿರುವ ಕಾರ್ಮಿಕರಿಗೆ ಪರಿಹಾರ ನೀಡಬೇಕು. ಕಾರ್ಮಿಕ ಗಳನ್ನು ಸಮರ್ಪಕವಾಗಿ ಜಾರಿ ಬೇಕು, ಪಡಿತರ ಚೀಟಿ ಮೂಲಕ ಬೆಲೆಯ ಆಹಾರ, ನಿವೇಶನ ನೀಡಬೇಕು, ಬೆಲೆ ಡೆಗೆ ಕ್ರಮಕೈಗೊಳ್ಳಬೇಕು ಮುಂತಾದ ಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ದೌರ್ಜನ್ಯವನ್ನು ಖಂಡಿಸಿ ಕಾರ್ಮಿಕರ ಮನವಿ, ಒತ್ತಾಯ, ಹೋರಾಟಗಳ ಗಿಯೂ ಅವರ ಗಂಭೀರ ಪ್ರಶ್ನೆಗಳ ಬಗೆಗೆ ತಾತ್ಸಾರ, ನಿರ್ಲಕ್ಷ್ಯ ಧೋರಣೆ ತಳೆದಿರುವ ರಾಜ್ಯ ಬಿಜೆಪಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ, ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸವಾದಿ)ದ ನೇತೃತ್ವದಲ್ಲಿ ಬೆಂಗಳೂರಿನಲ್ಲಿಂದು ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಕೆ.ಆರ್.ವೃತ್ತದಿಂದ ಹೊರಟ ಸಾವಿರಾರು ಸಿಪಿಐ(ಎಂ) ಕಾರ್ಯಕರ್ತರು ನೃಪತುಂಗ ರಸ್ತೆ, ಮೈಸೂರು ಬ್ಯಾಂಕ್ ಸರ್ಕಲ್, ಅರಮನೆ ರಸ್ತೆ ಮಾರ್ಗವಾಗಿ ಮುಖ್ಯಮಂತ್ರಿಗಳ ಮನೆಗೆ ಹೊರಟಾಗ ಚಾಲುಕ್ಯ ವೃತ್ತದ ಬಳಿ ಪೋಲೀಸ್‌ರು ಮೆರವಣಿಗೆಯನ್ನು ತಡೆದರು. ಇದೇ ಸ್ಥಳದಲ್ಲಿ ನಡೆದ ಪ್ರತಿಭಟನಾ ಸಭೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ಪ್ರಸನ್ನಕುಮಾರ್, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಸಮಿತಿ ಸದಸ್ಯರಾದ ಎಸ್.ವರಲಕ್ಷ್ಮಿ ಕೆ.ಎನ್.ಉಮೇಶ್, ಕೆ.ಪ್ರಕಾಶ್ ಮೀನಾಕ್ಷಿ ಸುಂದರಂ ಮುಂತಾದವರು ಮಾತನಾಡಿದರು.

ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಕಾರ್ಮಿಕರ ಮೇಲೆ ಅಪ್ರಚೋದಿತವಾಗಿ ಪೋಲಿಸ್ ಲಾಠಿ ಪ್ರಹಾರ ನಡೆಸಿರುವುದನ್ನು, ಜಿಲ್ಲಾಧಿಕಾರಿಗಳ ಕಛೇರಿ ಆವರಣದೊಳಗೆ ಪ್ರವೇಶಿಸಲು ಅವಕಾಶ ನೀಡದ ಧೋರಣೆಯನ್ನು ಖಂಡಿಸಲಾಯಿತು. ಪುರುಷ ಪೋಲೀಸ್‌ರು ಮಹಿಳೆಯರನ್ನು ಎಳೆದಾಡಿರುವುದು, ಅಟ್ಟಾಡಿಸಿ ಹೊಡೆದಿರುವುದು, ಮಹಿಳೆಯರ ಸೀರೆ ಎಳೆದಾಡಿರುವುದು, ಗುಲ್ಬರ್ಗಾದಲ್ಲಿ ಮುಖಂಡರಾದ ಮಾರುತಿ ಮಾನ್ಪಡೆಯವರನ್ನು ಪ್ರತಿಭಟನಾಕಾರರಿಂದ ಪ್ರತ್ಯೇಕಿಸಿ ಹಲ್ಲೆ ಮಾಡಲು ಯತ್ನಿಸಿದ್ದು, ಮಂಜೂರು ಪಟೇಲ್ ಮುಂತಾದವರು ಪ್ರಜ್ಞೆ ತಪ್ಪುವಂತಹ ಮಟ್ಟಕ್ಕೆ ಬಡಿದಿರುವುದನ್ನು ಖಂಡಿಸಲಾಯಿತು, ಗುಲ್ಬರ್ಗಾ, ರಾಯಚೂರು, ಹಾಸನಗಳಲ್ಲಿ ಹಲವಾರು ಕಾರ್ಮಿಕರು ಕೈಕಾಲು ಮುರಿದುಕೊಂಡು ಆಸ್ಪತ್ರೆಗೆ ದಾಖಲಾಗುವಂತೆ ಹೊಡಿದ ದೌರ್ಜನ್ಯವನ್ನು ಖಂಡಿಸಲಾಯಿತು.

ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆನಾಯರ್, ಮಾತನಾಡಿ ಫೆಬ್ರವರಿ 5, 2009 ರಂದು ನಡೆದ 40 ಸಾವಿರ ಜನರ ಬೃಹತ್ ರ‍್ಯಾಲಿಯಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಬಂದ ರಾಮಚಂದ್ರಗೌಡರಿಗೆ 10ಲಕ್ಷ ಸಹಿಯೊಂದಿಗೆ ಮನವಿ ಸಲ್ಲಿಸಲಾಗಿತ್ತು. ಆನಂತರ ಸ್ವತಃ ಮುಖ್ಯಮಂತ್ರಿಗಳನ್ನು ಕಂಡು ಭೇಟಿ ಮಾಡಿ, ಬೇಡಿಕೆ ಕುರಿತು ಒತ್ತಾಯಿಸಲಾಗಿತ್ತು. ಆಗ ಭರವಸೆ ನೀಡಿದಂತೆ ಸರ್ಕಾರ ಸ್ಪಂದಿಸದೇ ಈಗ ನ್ಯಾಯ ಕೇಳಿದವರ ಮೇಲೆ ದೌರ್ಜನ್ಯ ಎಸಗಲಾಗಿದೆ. ಸುಳ್ಳು ಮೊಕದ್ದಮೆ ಹಾಕಿ ಜೈಲಿಗೆ ಅಟ್ಟಲಾಗಿದೆ ಎಂದರು. ಬಂಧಿತ ಮುಖಂಡರು, ಕಾರ್ಮಿಕರನ್ನು ಕೂಡಲೇ ಬಿಡುಗಡೆ ಮಾಡಬೇಕು. ಪ್ರತಿಭಟನಾಕಾರರ ಮೇಲೆ ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು. ಇದಲ್ಲದೆ ಸರ್ಕಾರ ಕಾರ್ಮಿಕರ ಬೇಡಿಕೆಗಳ ಬಗೆಗೆ ತತ್‌ಕ್ಷಣ ಸ್ಪಂದಿಸಿ ನ್ಯಾಯಬದ್ಧ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಲಾಯಿತು.

ಸರ್ಕಾರದ ಪರವಾಗಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಕಾರ್ಮಿಕ ಮಂತ್ರಿ ಬಿ.ಎನ್.ಬಚ್ಚೇಗೌಡ ಅವರು ಅಕ್ಟೋಬರ್ 6-7 ರೊಳಗೆ ಮುಖ್ಯಮಂತ್ರಿಯವರೊಳಗೆ, ಕಾರ್ಮಿಕ ಮುಖಂಡರ ಮಾತುಕತೆ ಏರ್ಪಡಿಸಿ ಬೇಡಿಕೆಗಳಿಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು. ಬಂಧಿತರ ಬಿಡುಗಡೆ, ಹಾಗೂ ಮೊಕದ್ದಮೆಗಳ ವಾಪಸ್ಸಾತಿ ಬಗೆಗೆ ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಕಾರ್ಮಿಕರ ಬೇಡಿಕೆಗಳ ಕುರಿತು ಹಾಗೂ ದೌರ್ಜನ್ಯದ ವಿರುದ್ಧ ಸರ್ಕಾರ ಸೂಕ್ತ ಕ್ರಮಕೈಗೊಳ್ಳದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸುವ ಎಚ್ಚರಿಕೆಯನ್ನು ಪ್ರತಿಭಟನಾಕಾರರು ನೀಡಿದರು.

55ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ

ಪ್ರತಿಭೆಗೆ ಪುರಸ್ಕಾರ



ನಕುಲ


ಕಳೆದ ವಾರ ಭಾರತೀಯ ಚಲನಚಿತ್ರಗಳಿಗೆ ಕೊಡಮಾಡುವ ರಾಷ್ಟ್ರೀಯ ಪ್ರಶಸ್ತಿಯ 2007 ನೇ ಸಾಲಿನ ಚಿತ್ರಗಳಿಗೆ ಪ್ರಕಟಿಸಲಾಯಿತು. ಅತ್ಯುತ್ತಮ ನಿರ್ದೇಶಕರಾಗಿ ಆಡೂರು ಗೋಪಾಲನ್ ಕೃಷ್ಣನ್‌ರವರು 'ನಾಲು ಪೆಣ್ಣುಗ್ಗಳ್'(ಮಲೆಯಾಳಂ) ಚಿತ್ರಕ್ಕಾಗಿ ಆಯ್ಕೆಯಾಗಿದ್ದಾರೆ. ಇದು ಅವರಿಗೆ ಏಳನೇ ಬಾರಿಗೆ ದಕ್ಕುತ್ತಿರುವುದಾಗಿದೆ.

ಈ ಬಾರಿಯ ಪ್ರಶಸ್ತಿಯಲ್ಲಿರುವ ವಿಶೇಷವೆಂದರೆ ಅತ್ಯುತ್ತಮ ನಟ ಮತ್ತು ನಟಿಯ ಪ್ರಶಸ್ತಿ ದಕ್ಷಿಣದವರ ಪಾಲಾಗಿರುವುದು, ಅದರಲ್ಲೂ ಕರ್ನಾಟಕದವರ ಪಾಲಾಗಿರುವುದು. ಹಿಂದಿಯ ಕಮರ್ಶಿಯಲ್ ಚಿತ್ರಗಳನ್ನು ಪ್ರಶಸ್ತಿಗೆ ಪರಿಗಣಿಸಬೇಕೆಂಬ ಒತ್ತಡಗಳಿದ್ದವು. ಹಿಂದಿಯ ವ್ಯಾಪಾರಿ ಚಿತ್ರಗಳಿಗೆ ಪ್ರಶಸ್ತಿ ನೀಡುವುದು ಇತ್ತೀಚೆಗೆ ಒಂದು ಸಂಪ್ರದಾಯವೇ ಎಂಬಂತೆ ಬೆಳೆದುಬಂದಿತ್ತು. ಈ ಬಾರಿ ಖಾನ್‌ದ್ವಯರಲ್ಲಿ ಒಬ್ಬರಿಗೆ ಈ ಬಾರೆ ಪ್ರಶಸ್ತಿ ಕಟ್ಟಿಟ್ಟಬುತ್ತಿ ಎಂಬಂತೆ ಬಿಂಬಿಸಲಾಗಿತ್ತು. 'ಚಕ್ ದೇ ಇಂಡಿಯಾ' ದಲ್ಲಿ ಶಾರುಖ್ ಖಾನ್ ಮತ್ತು 'ತಾರೆ ಜಮೀನ್ ಪರ್' ಚಿತ್ರಕ್ಕಾಗಿ ಅಮೀರ್‌ಖಾನ್‌ಗೆ ಪ್ರಶಸ್ತಿ ನಿರೀಕ್ಷಿಸಲಾಗಿತ್ತು.



ಆದರೆ ಈ ಇಬ್ಬರ ಪ್ರಭಾವವನ್ನೂ ಮೀರಿ ಕನ್ನಡದ ನಟ ಪ್ರಕಾಶ್ ರೈ ತಮಿಳಿನ 'ಕಾಂಚೀವರಂ' ಚಿತ್ರದಲ್ಲಿನ ಅಭಿನಯಕ್ಕಾಗಿ ಶ್ರೇಷ್ಠ ನಟ ಪ್ರಶಸ್ತಿ ಗಳಿಸಿದ್ದಾರೆ. ಕನ್ನಡದ 'ಗುಲಾಬಿ ಟಾಕೀಸ್' ಚಿತ್ರದಲ್ಲಿನ ಅಭಿನಯಕ್ಕಾಗಿ ಉಮಾಶ್ರೀ ಶ್ರೇಷ್ಠ ನಟಿ ಪ್ರಶಸ್ತಿಯನ್ನು ಗಳಿಸಿದ್ದಾರೆ. ಗಿರೀಶ್ ಕಾಸರವಳ್ಳಿಯವರ ಈ ಚಿತ್ರ ಕರಾವಳಿಯಲ್ಲಿನ ಬಡ ಮುಸ್ಲಿಂ ಮಹಿಳೆಯೊಬ್ಬಳ ಬದುಕಿನ ತವಕ-ತಲ್ಲಣಗಳ ಚಿತ್ರಣ. ಇಂದು ಭಾರತೀಯ ಚಿತ್ರರಂಗವೆಂದರೆ ಹಿಂದಿ ಚಿತ್ರಗಳು ಮಾತ್ರ ಎಂಬಂತಹ ವಾತಾವಾರಣ ಸೃಷ್ಟಿಸುವ ಪ್ರಯತ್ನ, ಪ್ರಶಸ್ತಿ ಗಳಿಕೆಯಲ್ಲೂ ಪ್ರಭಾವ ಬೀರುವ ಯತ್ನಗಳು ನಡೆದಿರುವಾಗ ಪ್ರಾದೇಶಿಕ ಚಿತ್ರಗಳು, ಅದರಲ್ಲೂ ದಕ್ಷಿಣ ಭಾರತದ ಚಿತ್ರಗಳು ಹಿಂದಿ ಚಿತ್ರಗಳಿಗೆ ಸಡ್ಡು ಹೊಡೆದು, ಈ ಬಾರಿ [illegible] ಪ್ರಮುಖ ಪ್ರಶಸ್ತಿಗಳನ್ನು [illegible] ಗಮನಾರ್ಹ.

ಹಿಂದೆಲ್ಲಾ ಹಿಂದಿಯ ಕಮರ್ಶಿಯಲ್ ಚಿತ್ರಗಳನ್ನು ಪ್ರಶಸ್ತಿಗೆ ಪ್ರಮುಖವಾಗಿ ಪರಿಗಣಿಸಿದ್ದೇ ಅಲ್ಲದೇ, ನಾಯಕಿಯರೊಂದಿಗೆ ಹಾಡಿ ಕುಣಿದು ಕುಪ್ಪಳಿಸಿದ್ದ ನಾಯಕ ನಟರಿಗೂ ಉತ್ತಮ ನಟ ಪ್ರಶಸ್ತಿ ಕೊಡಲಾಗಿತ್ತು (52ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ - ಸೈಫ್ ಆಲಿಖಾನ್‌ಗೆ 'ಹಮ್ ತುಮ್' ಚಿತ್ರಕ್ಕೆ, 53ನೇ ರ ಪ್ರಶಸ್ತಿ - ಅಮಿತಾಬ್ ಬಚ್ಚನ್‌ಗೆ 'ಬ್ಲ್ಯಾಕ್' ಚಿತ್ರಕ್ಕೆ). ಈ ಬಾರಿ ಸಾಯಿ ಪರಾಂಜಪೆ ನೇತೃತ್ವದ ಆಯ್ಕೆ ಸಮಿತಿಯು ಇಂತಹ ಕೆಟ್ಟಚಾಳಿಯನ್ನು ಕೈಬಿಟ್ಟು, ಚಿತ್ರದಲ್ಲಿನ ಸಾಮಾಜಿಕ ಕಳಕಳಿ, [illegible] [illegible] ಗಮನ ಹರಿಸಿ ಅರ್ಹ ಚಿತ್ರಗಳಿಗೆ ಪ್ರಶಸ್ತಿ ನೀಡಲಾಗಿದೆ. ಹಾಗೆಂದ ಮಾತ್ರಕ್ಕೆ ಹಿಂದಿ ಚಿತ್ರಗಳನ್ನು ಕಡೆಗಣಿಸಿದೆಯೆಂದೇನಲ್ಲ. 'ತಾರೇ ಜಮೀನ್ ಪರ್' ಚಿತ್ರ ಅತ್ಯುತ್ತಮ ಸಾಮಾಜಿಕ ಕಳಕಳಿಯುಳ್ಳ ಚಿತ್ರವೆಂದು ಮತ್ತು ಆ ಚಿತ್ರದಲ್ಲಿ ಗೀತೆ ರಚನೆಗಾಗಿ ಪ್ರಸೂನ್ ಜೋಷಿ ಮತ್ತು ಉತ್ತಮ ಗಾಯನಕ್ಕಾಗಿ ಶಂಕರ್ ಮಹದೇವನಕ್ಕೆ ಪ್ರಶಸ್ತಿ ದಕ್ಕಿದೆ. ಹಾಗೆಯೇ 'ಚಕ್ ದೇ ಇಂಡಿಯಾ' ಅತ್ಯುತ್ತಮ ಮನರಂಜನಾ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.



ಕನ್ನಡಕ್ಕೆ ಸಂಬಂಧಿಸಿದಂತೆ 'ಗುಲಾಬಿ ಟಾಕೀಸ್' ಅತ್ಯುತ್ತಮ ಪ್ರಾದೇಶಿಕ ಚಿತ್ರವೆಂಬ ಮಾನ್ಯತೆಯನ್ನು ಪಡೆದಿದೆ. ಕರ್ನಾಟಕ ಸರ್ಕಾರ ಪ್ರಕಟಿಸುವ ಚಲನಚಿತ್ರ ಪ್ರಶಸ್ತಿಯಲ್ಲಿ ಈ ಬಾರಿ ಅತ್ಯುತ್ತಮ ಚಿತ್ರವಾಗಿ ಈ ಚಿತ್ರ ಆಯ್ಕೆಯಾದಾಗ ಹಲವರು ಅಪಸ್ವರವೆತ್ತಿದ್ದರು. ಈಗಿನ ರಾಷ್ಟ್ರೀಯ ಪ್ರಶಸ್ತಿ ಅವರೆಲ್ಲರ ಬಾಯಿ ಮುಚ್ಚಿಸಿದೆ. ಪ್ರಮುಖವಾಗಿ ಅಗ್ನಿ ಶ್ರೀಧರ್‌ರವರು, ಕಾಸರವಳ್ಳಿಯವರು ಯಾರೂ ನೋಡದ ಚಿತ್ರಗಳನ್ನು ಪ್ರಶಸ್ತಿಗಾಗಿಯೇ ಮಾಡುತ್ತಾ[illegible] ದೂರಿದ್ದರು. 'ಗುಲಾಬಿ ಟಾಕೀಸ್' ಚಿತ್ರದ[illegible] ಕಥಾವಸ್ತುವನ್ನು ಕಡೆಗಣಿಸಿ ತಮ್ಮ 'ಆ ದಿನ[illegible] ಚಿತ್ರಕ್ಕೆ ಭಾರಿ ಅನ್ಯಾಯವಾಗಿದೆಯೆಂದು ಅವಲತ್ತುಕೊಂಡಿದ್ದರು. ಭಿನ್ನ ನಿರೂಪಣೆಯಿದೆಯೆಂದ ಮಾತ್ರಕ್ಕೆ ಅ[illegible] ಅತ್ಯುತ್ತಮ ಚಿತ್ರವೆಂದು ಪರಿಗಣಿಸಬೇಕೆಂಬ[illegible] ಒಪ್ಪಲಾಗದು. 'ಆ ದಿನಗಳು' ಚಿತ್ರದ ಮ[illegible] ಸಮಾಜಕ್ಕೆ ಅವರು ನೀಡಿರುವ ಸಂದೇಶವಾದರೂ ಏನೆಂಬುದನ್ನು ಅವರು[illegible] ಮನಗಾಣಬೇಕು. ಇವರಿಗೆ ಧ್ವನಿಗೂಡಿಸಿದ[illegible] ಕೆ.ಮಂಜು. ತಮ್ಮ 'ಮಾತಾಡ್ ಮಾತಾ[illegible] ಮಲ್ಲಿಗೆ' ಚಿತ್ರಕ್ಕೆ ನಿರೀಕ್ಷಿಸಿದ ಪ್ರಶಸ್ತಿ ಗಿಟ್ಟಲಿ[illegible] ಎಂಬುದು ಅವರ ಕೊರಗು. ಆ ಚಿತ್ರ ಎಂ[illegible] ಎಂಬುದನ್ನು ಜನಶಕ್ತಿಯ ವಿಮರ್ಶೆಯಲ್ಲಿ ಪ್ರಕಟಿಸಲಾಗಿದೆ.

ಇನ್ನು ಯಾರೂ ನೋಡದ ಚಿತ್ರಗಳು ಹಣೆಪಟ್ಟಿಗೆ ಗಿರೀಶ್ ಕಾಸರವಳ್ಳಿ ಮಾತ್ರ ಹೊಣೆಗಾರರೇ? ಕನ್ನಡ ಚಿತ್ರೋದ್ಯಮವ[illegible] ಮತ್ತು ಚಿತ್ರಮಂದಿರಗಳನ್ನು ತಮ್ಮ ಬಿಗಿಮುಷ್ಟಿಯಿಲ್ಲಿ ಹಿಡಿದಿಟ್ಟುಕೊಂಡಿರುವ ಕೆಲವೇ ಮಂದಿ ಪಟ್ಟಭದ್ರರ ಸ್ವಾರ್ಥತೆಯ[illegible] ಪ್ರಶ್ನಿಸುವವರಾರು? ಇಂತಹ ಮಂದಿಯ [illegible] ಏಗಲಾಗದ ಕಮರ್ಶಿಯಲ್ ಅಲ್ಲದ ಚಿತ್ರ[illegible] ಕಲಾತ್ಮಕ ಚಿತ್ರಗಳ ನಿರ್ದೇಶಕರ, ನಿರ್ಮಾ[illegible] ನೆರವಿಗೆ ಬರುವವರಾರು? ಸರ್ಕಾರಕ್ಕೆ ಇದ[illegible] ಹೊಣೆಯಿಲ್ಲವೇ?

ಇಂತಹ ಚಿತ್ರಗಳಿಗೆ ನೆರವಾಗುವಂತೆ [illegible] ದರದ, ಸಣ್ಣ ಚಿತ್ರಮಂದಿರಗಳನ್ನು ನಿರ್ಮಿ[illegible] ಸರ್ಕಾರ ಸಹಾಯ ಮಾಡಿದ್ದಲ್ಲಿ ಖಂಡಿತ [illegible] ಚಿತ್ರಗಳಿಗೂ ಒಂದು ನೆಲೆ ಸಿಗಲಿದೆ. ಆಗ [illegible] ಅಲೆಯ ಚಿತ್ರಗಳಿಗೆ, ನಿರ್ಮಾಪಕ, ನಿರ್ದೇ[illegible] ದೈರ್ಯ, ಸ್ಫೂರ್ತಿ ತುಂಬಿದಂತಾಗುತ್ತದೆ. ಉತ್ತಮ ಚಿತ್ರಗಳಿಗೆ ಜನರು ಕೂಡಾ ಬೆಂಬಲಿಸುವುದರಲ್ಲಿ ಅನುಮಾನವಿಲ್ಲ.



ಇದು ಯಾವುದೇ ಸಿನಿಮಾದ ದೃಶ್ಯ ಅಲ್ಲ, ಕನಿಷ್ಟ ಕೂಲಿ ಕೇಳಿದ ರಾಯಚೂರಿನ ಕಾರ್ಮಿಕನ ಸ್ಥಿತಿ

ಇಲ್ಲಿ ಪ್ರತಿಭೆಗಳ ಪಾಡು

ಉತ್ತಮ ನಟಿ ಪ್ರಶಸ್ತಿ ಪುರಸ್ಕೃತ ಉಮಾಶ್ರೀ ವಿಶಿಷ್ಟ ಪ್ರತಿಭೆ. ಅವರದು ಕಡುಬಡತನ[illegible] ಬೆಂದು ಅರಳಿದ ಪ್ರತಿಭೆ. ಹೊಟ್ಟೆಪಾಡಿಗಾಗಿ ನಟನೆಗೆ ಇಳಿದವರು. ರಂಗಭೂಮಿ[illegible] 'ಒಡಲಾಳ'ದ ಸಾಕವ್ವಳಾಗಿ ಸಾಕಷ್ಟು ಖ್ಯಾತಿ ಗಳಿಸಿದರು. ರಂಗಭೂಮಿ ಅವರ ಪ್ರತಿಭೆ ಅರಳಿ[illegible] ಆದರೆ ಚಿತ್ರರಂಗ ಅವರಿಗೆ ಕೊಟ್ಟ ಇಮೇಜ್ ಯಾವುದು? ದ್ವಂದ್ವಾರ್ಥ - ಅಶ್ಲೀಲ ಸಂಭಾಷ[illegible] 'ಮಸಾಲಾ' ಪಾತ್ರ. ತಮಗೆ ಪ್ರಶಸ್ತಿ ಬಂದ ಸಂದರ್ಭದಲ್ಲಿ ಇದನ್ನು ನೋವಿನಿಂದ ಹೇಳಿಕೊಂಡ[illegible] ಉಮಾಶ್ರೀ. ಚಿತ್ರರಂಗದಲ್ಲಿ ಇದಕ್ಕೆ ಅಪವಾದಗಳು ಕೆಲವೇ ಕೆಲವು.

ಇನ್ನು ಪ್ರಕಾಶ್ ರೈ ವಿಚಾರವು ಹಾಗೆಯೇ. ಕನ್ನಡದ ಈ ವಿಶಿಷ್ಟ ಪ್ರತಿಭೆ ಕನ್ನಡದ [illegible] ಸಿನಿಮಾಗಳಲ್ಲಿ ತನ್ನ ಸಾಮರ್ಥ್ಯ, ಪ್ರೌಢಿಮೆ ತೋರಿದರೂ ಕನ್ನಡ ಚಿತ್ರರಂಗ ಅದನ್ನು ಗುರುತಿಸ[illegible] ಆದರಿಸಲಿಲ್ಲ. ಈಗ ತಮಿಳು ಚಿತ್ರವೊಂದರ ಮೂಲಕವಾದರೂ ಅವರ ಪ್ರತಿಭೆಗೆ ಗೌರವ [illegible] ಎಂದು ಸಂತೋಷ ಪಡಬೇಕಾಗಿದೆ.

JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027 Editor : **S.Y.GURUSHANTH**